Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ-18 | ಸಂಚಿಕೆ-13 | ಮಾರ್ಚ್ 25-31, 2024 | ಪುಟ 16 | ರೂ.10/-

Volume-18 | Issue-13 | March 25-31, 2024 | Pages:16 | Price: 10/-



ಹಿಂದುತ್ವ- ಕಾರ್ಪೊರೇಟ್ ನಂಟು ಬಯಲಿಗೆ

ಜೆಡಿಎಸ್-ಬಿಜೆಪಿ ಮೈತ್ರಿಯಲ್ಲಿನ ಜಗ್ಗಾಟಗಳು


ನಗರ್ತರಪೇಟೆ ಹಲ್ಲೆ ಪ್ರಕರಣ: ಹಿಂದೆ- ಮುಂದೆ





'ಪ್ರಜಾಪ್ರಭುತ್ವ ರಕ್ಷಣೆಗೆ ಈ ಚುನಾವಣೆ ಬಹಳ ಮುಖ್ಯ'

ಸೀತಾರಾಮ್ ಯೆಚೂರಿ ಅವರ ಸಂದರ್ಶನ



ಲಿಂಗ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಭಾರತದ ಸಂವಿಧಾನವು ಮಹಿಳೆಯರಿಗೆ ಕೊಡ ಮಾಡಿರುವ ಹಕ್ಕು-ರಕ್ಷಣೆಗಳೇನು? ಸಂವಿಧಾನದ ಮೂಲ ಆಶಯಗಳ ಈಡೇರಿಕೆಯ ನಿಟ್ಟಿನಲ್ಲಿ ಇರುವ ಅಡೆತಡೆಗಳೇನು? ವಿಷಯದ ಸಂಕೀರ್ಣತೆಗಳೇನು? ವಿವರವಾಗಿ ಚರ್ಚಿಸಿದ್ದಾರೆ, ಖ್ಯಾತ ಅಭಿವೃದ್ಧಿ ಅರ್ಥಶಾಸ್ತ್ರಜ್ಞರಾದ ಡಾ. ಎಂ. ಚಂದ್ರಪೂಜಾರಿಯವರು.

ಭಾಗ-2

ಮಹಿಳಾ ದಿನಾಚರಣೆಯ ವಿಶೇಷ ಲೇಖನ


ಸಂವಿಧಾನ ಮತ್ತು ಮಹಿಳೆ

ಹಿಂದೂ ರಾಷ್ಟ್ರೀಯತೆ ರಾಜಕೀಯದಲ್ಲಿ ಮುಳುಗಿದವರಿಗೆ ಮುಸ್ಲಿಮ್ ರಾಜನೊಂದಿಗಿನ ರಜಪೂತ ಮಹಿಳೆಯ ಪ್ರೇಮ ಪ್ರಕರಣವನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದೇ ಕಾರಣವನ್ನು ಮುಂದಿಟ್ಟುಕೊಂಡು ಸಮುದಾಯದ ಸ್ವಯಂ ಘೋಷಿತ ನಾಯಕರು ಚಲನಚಿತ್ರವನ್ನು ಬ್ಯಾನ್ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಆದರೆ ಇದು ಇವತ್ತಿನ ಕತೆಯಲ್ಲ. ನಕಾರಾತ್ಮಕ ಕೋಮುಭಾವನೆಯನ್ನು ಬೆಳಸಲು ಪೂರಕವಾಗುವ ಅಂಶಗಳು ಅಲ್ಲಿನ ಚರಿತ್ರೆಯಲ್ಲಿ ಸಾಕಷ್ಟಿವೆ. ಹಿಂದಿನಿಂದಲೂ ಉತ್ತರ ಭಾರತದ ಹಲವು ಸಮುದಾಯಗಳಲ್ಲಿ ವಯಸ್ಸಿಗೆ ಬಂದ ಹೆಣ್ಣು ಮಕ್ಕಳು ಸೆರಗಿನಿಂದ ಮುಖ ಮುಚ್ಚಿಕೊಳ್ಳುವ ಪದ್ಧತಿ ಇದೆ. ಈ ಪದ್ಧತಿಗೂ ಮುಸ್ಲಿಮ್ ಆಳ್ವಿಕೆಗೂ ಸಂಬಂಧ ಕಲ್ಪಿಸುವ ವಾದಗಳೂ ಇವೆ. ಅವೇನೇ ಇರಲಿ, ಚರಿತ್ರೆ ಮತ್ತು ವರ್ತಮಾನಗಳಲ್ಲಿ ಹೆಣ್ಣು ಮಕ್ಕಳು ಸೆರಗಿನಿಂದ ಮುಖ ಮುಚ್ಚಿಕೊಳ್ಳುವ ಅಥವಾ ಅರೆ ಬುರ್ಖಾ ಪದ್ದತಿ ಅನುಸರಿಸುತ್ತಿರುವುದು ವಾಸ್ತವ. ಅರೆ ಬುರ್ಖಾ ಪದ್ಧತಿ ಅನುಸರಿಸುವ ಮತ್ತು ಅನುಸರಿಸದಿರುವ ಹೆಂಗಸರ ತುಲನಾತ್ಮಕ ಅಧ್ಯಯನಗಳು ನಡೆದಿವೆ. ಅವುಗಳ ಪ್ರಕಾರ ಅರೆ ಬುರ್ಖಾ ಪದ್ಧತಿ ಅನುಸರಿಸದಿರುವ ಹೆಂಗಸರು ತಮ್ಮ ಕೌಟುಂಬಿಕ ತೀರ್ಮಾನಗಳಲ್ಲಿ ಪಾಲುಗೊಂಡಷ್ಟು ಬುರ್ಖಾ ಪದ್ಧತಿ ಅನುಸರಿಸುವ ಹೆಣ್ಣು ಮಕ್ಕಳು ಪಾಲುಗೊಳ್ಳುವುದಿಲ್ಲ. ಅಂದರೆ ಅರೆ ಬುರ್ಖಾ ಪದ್ಧತಿ ಅನುಸರಿಸುವ ಹೆಂಗಸರು ಕೌಟುಂಬಿಕ ಬದುಕಿನಲ್ಲಿ ಕಡಿಮೆ ಸ್ವಾತಂತ್ರ್ಯ ಹೊಂದಿದ್ದಾರೆ. ಶಿಕ್ಷಣ, ಆರೋಗ್ಯ, ಆಹಾರ, ಮದುವೆ, ಮಕ್ಕಳು ಇವೆಲ್ಲ ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಈ ಹೆಂಗಸರು ಅತ್ಯಂತ ಕನಿಷ್ಠ ಸ್ವಾತಂತ್ರ್ಯ ಹೊಂದಿದ್ದಾರೆ.

ಇಷ್ಟಪಟ್ಟ ಶಿಕ್ಷಣ ಪಡೆಯುವುದು, ಇಷ್ಟಪಟ್ಟ ಆಹಾರ ತಿನ್ನುವುದು, ಇಷ್ಟಪಟ್ಟವರನ್ನು ಮದುವೆಯಾಗುವುದು, ಇಷ್ಟ ಬಂದಾಗ ಮಕ್ಕಳನ್ನು ಹೆರುವುದು ಇವೆಲ್ಲವೂ ಈ ಮಹಿಳೆಯರಿಗೆ ಗಗನ ಕುಸುಮಗಳು. ಈ ಮಹಿಳೆಯರ ಸ್ವಾತಂತ್ರ್ಯ ಇಷ್ಟೊಂದು ಹೀನಾಯ ಸ್ಥಿತಿಯಲ್ಲಿದ್ದರೂ ಇದೇ ಮಹಿಳೆಯರು ಪದ್ಮಾವತಿ ಚಲನಚಿತ್ರವನ್ನು ಬ್ಯಾನ್ ಮಾಡಬೇಕೆಂದು ಕೈಯಲ್ಲಿ ಖಡ್ಗ ಹಿಡಿದುಕೊಂಡು ಬೀದಿಯಲ್ಲಿ ಪ್ರತಿಭಟಿಸುತ್ತಿದ್ದಾರೆ. ಇವರ ಪ್ರತಿಭಟನೆಯನ್ನು ಹೇಗೆಂದು ನಿರ್ವಚಿಸಬೇಕು? ಇದು ರಜಪೂತ ಮಹಿಳೆಯರು ಸಬಲೀಕರಣಗೊಂಡ ಲಕ್ಷಣವೇ? ಖಂಡಿತ ಅಲ್ಲ ಎನ್ನುವುದನ್ನು ಅರೆ ಬುರ್ಖಾ ಪದ್ಧತಿ ಅನುಸರಿಸುವ ರಜಪೂತ ಮಹಿಳೆಯ ಸ್ವಾತಂತ್ರ್ಯ ಹರಣದ ವಿವರಗಳು ಸಾರುತ್ತಿವೆ.

ಹಾಗಾದರೆ ಇದೇನು? ಬಲಾಢ್ಯ ಸಮುದಾಯಗಳ ಪುರುಷರು ಸಂವಿಧಾನವನ್ನು ತಮ್ಮ ಮೂಗಿನ ನೇರಕ್ಕೆ ಅನುಷ್ಠಾನಗೊಳಿಸಲು ಪ್ರಯತ್ನಿಸುವುದು ಇಲ್ಲಿ ಎದ್ದು ಕಾಣುವ ಅಂಶ. ನಮ್ಮ ಸಂಸ್ಕೃತಿ ಹೆಸರಲ್ಲಿ ರಾಜಕೀಯ ಮಾಡುವ ಪಕ್ಷಗಳಿಗೆ ಬಲಾಢ್ಯ ಸಮುದಾಯದ ಪುರುಷರನ್ನು ಎದುರು ಹಾಕಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ರಾಜಕೀಯ ಪಕ್ಷಗಳ ಭವಿಷ್ಯ ತೀರ್ಮಾನ ಮಾಡುವ ಚುನಾವಣೆಗಳಲ್ಲಿ ಪುರುಷರು ವಹಿಸಿದಷ್ಟು ಮಹತ್ವದ ಪಾತ್ರವನ್ನು ಮಹಿಳೆಯರು ವಹಿಸುತ್ತಿಲ್ಲ. ಇದೇ ಬಲಾಢ್ಯ ಸಮುದಾಯಗಳ ಮತದಿಂದ ಚುನಾಯಿತ ಸರಕಾರ ಬಲಾಢ್ಯ ಸಮುದಾಯದ ನಾಯಕರನ್ನು ಖುಶಿ ಬಂದಂತೆ ವರ್ತಿಸಲು ಬಿಡುತ್ತಿವೆ. ಸರಕಾರ ಬಲಾಢ್ಯ ಸಮುದಾಯದ ನಾಯಕರನ್ನು ಪ್ರಶ್ನಿಸುತ್ತಿಲ್ಲ. ಅವರು ಸಾರ್ವಜನಿಕ ಆಸ್ತಿಪಾಸ್ತಿ ನಾಶ ಮಾಡುವುದು, ಬಂದ್ ಮಾಡುವುದು ಇವೆಲ್ಲವನ್ನು ಸರಕಾರಗಳು ನೋಡಿಯೂ ಸುಮ್ಮನಿವೆ.

ಇದೇ ಕಾರಣಕ್ಕಾಗಿ ಹಿಂದೂ ಸಂಘಟನೆಗಳು ರಾಷ್ಟ್ರ ಅಥವಾ ರಾಜ್ಯ ಮಟ್ಟದಲ್ಲಿ ತಮ್ಮ ಭಾವನೆಗಳಿಗೆ ಅನ್ಯಾಯವಾಗಿದೆಯೆಂದು ಪುಸ್ತಕಗಳನ್ನು ಬ್ಯಾನ್ ಮಾಡಲು ಒತ್ತಾಯಿಸುವುದು ಅಥವಾ ಕಲಾಕೃತಿಗಳನ್ನು ನಾಶ ಮಾಡುವುದು ಅಥವಾ ಸಿನೀಮಾ ಪ್ರದರ್ಶನಕ್ಕೆ ಅಡ್ಡಿ ಪಡಿಸುವುದು ಇತ್ಯಾದಿಗಳನ್ನು ಬೆಂಬಲಿಸಲು ಸಾಧ್ಯವಿಲ್ಲ. ಏಕೆಂದರೆ ಇವರ ಕ್ಲೈಮೇ(ಪ್ರತಿಪಾದನೆಯೇ) ಮೆಜಾರಿಟಿ ಭಾವನೆಗಳಿಗೆ ನೋವಾಗಿದೆಯೆನ್ನುವುದು. ಇದು ವಾಸ್ತವದಲ್ಲಿ ನಮ್ಮ ಸಮಾಜದ





ಬಲಾಢ್ಯ ಸಮುದಾಯಗಳ ಸ್ವಾತಂತ್ರ್ಯವನ್ನು ಗಮನದಲ್ಲಿಟ್ಟುಕೊಂಡು ನಡೆಯುವ ಪ್ರತಿಭಟನೆಗಳು. ಇವರ ಪ್ರತಿಭಟನೆಗಳು ಸಮಾಜದಲ್ಲಿನ ಒಟ್ಟು ಸ್ವಾತಂತ್ರ್ಯವನ್ನು ಹೆಚ್ಚಿಸುವುದಿಲ್ಲ. ಜೊತೆಗೆ ತುಂಬಾ ಜನ ಬಲಹೀನರ ಸ್ವಾತಂತ್ರ್ಯವನ್ನು ಇವರ ಪ್ರತಿಭಟನೆಗಳು ಹತ್ತಿಕ್ಕುತ್ತವೆ. ಸಂವಿಧಾನದ ಆಶಯವಿರುವುದು ಬಲಹೀನರ ಸ್ವಾತಂತ್ರ್ಯವನ್ನು ಹೆಚ್ಚಿಸುವುದು ಮತ್ತು ಆ ಮೂಲಕ ಸಮಾಜದಲ್ಲಿನ ಒಟ್ಟು ಸ್ವಾತಂತ್ರ್ಯವನ್ನು ಹೆಚ್ಚಿಸುವುದು. ಇದೇ ಸಂದರ್ಭದಲ್ಲಿ ಬಲಾಢ್ಯ ಮತ್ತು ಬಲಹೀನ ಸಮುದಾಯಗಳು ದೇಶವ್ಯಾಪಿ ಒಂದೇ ಆಗಿರುವುದಿಲ್ಲ ಎನ್ನುವುದು ಕೂಡ ನಮ್ಮ ಪ್ರಜ್ಞೆಯಲ್ಲಿರಬೇಕು. ಕೆಲವೊಂದು ಪ್ರದೇಶಗಳಲ್ಲಿ ಬಲಾಢ್ಯ ಸಮುದಾಯವೆಂದು ಗುರುತಿಸಿಕೊಂಡವರು ಮತ್ತೊಂದು ಪ್ರದೇಶದಲ್ಲಿ ಬಲಹೀನರಾಗಬಹುದು. ಕೇರಳದ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅದೇ ರೀತಿಯಲ್ಲಿ ಕೆಲವು ಸಂಸ್ಥೆಗಳಲ್ಲಿ ದಲಿತರು, ಓಬಿಸಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಂತಹ ಪರಿಸರದಲ್ಲಿನ ಬಲಾಢ್ಯರು ಸಂಘಟಿತರಾಗಿ ಪ್ರತಿಭಟಿಸಿದರೆ ಉಳಿದವರ ವಾಕ್, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ.


ಡಾ.ಎಂ.ಚಂದ್ರಪೂಜಾರಿ

ಮೇಲಿನ ಸಮಷ್ಠಿ ಸ್ವಾತಂತ್ರ್ಯ ವರ್ಸಸ್ ವ್ಯಕ್ತಿ ಸ್ವಾತಂತ್ರ್ಯದ ಸಮಸ್ಯೆ ಜೊತೆಗೆ ಸ್ವಾತಂತ್ರ್ಯ ಮತ್ತು ಸಮಾನತೆಗಳ ನಡುವಿನ ತಿಕ್ಕಾಟ ಕೂಡ ಸ್ವಾತಂತ್ರ್ಯದ ಆಚರಣೆಯನ್ನು ಸಂಕೀರ್ಣಗೊಳಿಸಿದೆ. ಬೆಳೆದ ಟೊಮೊಟೋ ಅಥವಾ ಕಬ್ಬಿಗೆ ಸರಿಯಾದ ಬೆಲೆ ಸಿಕ್ಕಿಲ್ಲವೆಂದು ರೈತರು ಬೆಳೆಯನ್ನು ಬೀದಿಯಲ್ಲಿ ಬಿಸಾಕಿ ಪ್ರತಿಭಟಿಸುವುದನ್ನು ನೋಡಿದ್ದೇವೆ. ವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಯಿಂದ ನೋಡಿದರೆ ರೈತರ ಕ್ರಮ ಸರಿಯಾಗಿ ಇದೆಯೆಂದು ಅನ್ನಿಸಬಹುದು. ಆದರೆ ಸಮಾನತೆ ದೃಷ್ಟಿಯಿಂದ ನೋಡಿದರೆ ಇದು ಸರಿಯಾದ ಕ್ರಮವಲ್ಲ. ಏಕೆಂದರೆ ನಮ್ಮಲ್ಲಿ ಟೊಮೋಟೋ ಖರೀದಿಸಿ ಅನುಭವಿಸುವ ಶಕ್ತಿಯಿಲ್ಲದ ಜನರು ಸಾಕಷ್ಟಿದ್ದಾರೆ. ಅಂತವರಿಗೆ ಹಂಚುವುದು ಸಮಾನತೆಯ ದೃಷ್ಟಿಯಿಂದ ಸರಿಯಾದ ಕ್ರಮ. ಈ ನೀತಿ ಕೇವಲ ಟೊಮೊಟೋ ಅಥವಾ ಕಬ್ಬು ಬೆಳೆಗಾರರಿಗೆ ಮಾತ್ರ ಅನ್ವಯವಾಗುವುದಿಲ್ಲ. ಎಲ್ಲೆಲ್ಲ ಮಾರುಕಟ್ಟೆ ಸ್ವಾತಂತ್ರ್ಯದ ಪ್ರಶ್ನೆ ಬರುತ್ತದೋ ಅಲ್ಲೆಲ್ಲ ಇದೇ ಬಗೆಯ ಸಮಾನತೆ ಪ್ರಶ್ನೆ ಕೂಡ ಬರುತ್ತದೆ. ಇದೇ ರೀತಿಯಲ್ಲಿ ಮಹಿಳೆಯರಿಗೆ, ದಲಿತ ಬುಡಕಟ್ಟುಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವುದು ಕೂಡ ಸ್ವಾತಂತ್ರ್ಯ ವರ್ಸಸ್ ಸಮಾನತೆಯ ತಿಕ್ಕಾಟಕ್ಕೆ ಎಡೆಮಾಡಿಕೊಡುತ್ತದೆ. ಮೀಸಲಾತಿಯಿಂದ ಕಡಿಮೆ ಅಂಕ ಗಳಿಸಿದವರು ಸೀಟು ಪಡೆಯುವುದರಿಂದ ಮೀಸಲಾತಿ ಇಲ್ಲದವರು ಹೆಚ್ಚು ಅಂಕ ಪಡೆದರೂ ಸೀಟಿನಿಂದ ವಂಚಿತರಾಗುವುದರಿಂದ ಅವರ ವ್ಯಕ್ತಿ ಸ್ವಾತಂತ್ರ್ಯಕ್ಕೆ ದಕ್ಕೆಯಾಗುತ್ತಿದೆ ಎನ್ನುವ ವಾದ ಇದೆ.

ಸಮಾನತೆ, ಸ್ವಾತಂತ್ರ್ಯಗಳ ಅನುಷ್ಠಾನದ ದೃಷ್ಟಿಯಿಂದ ಮಹಿಳೆಯನ್ನು ಏಕರೂಪಿಯಾಗಿ ನೋಡಬೇಕೇ ಅಥವಾ ಬಹುರೂಪಿಯಾಗಿ ನೋಡಬೇಕೇ ಎನ್ನುವ ಪ್ರಶ್ನೆ ಕೂಡ ಇದೆ. ಇಡೀ ದೇಶಕ್ಕೊಂದು ಮಹಿಳೆಯ ಕಲ್ಪನೆ ಸರಿಯಲ್ಲ. ಮಹಿಳೆಯರು ಕೂಡ ಜಾತಿ, ಧರ್ಮ, ವರ್ಗಗಳ ನೆಲೆಯಲ್ಲಿ ವಿಂಗಡಿತರಾಗಿದ್ದಾರೆ. ಅಷ್ಟು ಮಾತ್ರವಲ್ಲ ಅವರ ಆಸಕ್ತಿ, ಆದ್ಯತೆಗಳು ಕೂಡ ಒಂದೇ ಇಲ್ಲ. ದಲಿತ ಮಹಿಳೆ, ಬುಡಕಟ್ಟು ಮಹಿಳೆ, ಓಬಿಸಿ ಮಹಿಳೆ, ಬ್ರಾಹ್ಮಣ ಮಹಿಳೆಯರು ಭಿನ್ನ ಮಾತ್ರವಲ್ಲ ಅವರ ಆದ್ಯತೆಗಳು ಭಿನ್ನ ಎನ್ನುವ ವಾದಗಳಿವೆ. ಇನ್ನು ಕೆಲವರ ಪ್ರಕಾರ ಮಹಿಳೆಯರ ಹಕ್ಕುಗಳ ಪ್ರಶ್ನೆ ಬಂದಾಗ ಎಲ್ಲ ಮಹಿಳೆಯರು ಒಂದೇ ಎನ್ನುವ ದೃಷ್ಟಿಯಿಂದ ನೋಡಬೇಕೆನ್ನುತ್ತಾರೆ. ಈ ಎರಡು ದೃಷ್ಟಿಕೋನಗಳು ಹಲವು ಸಮಸ್ಯೆಗಳನ್ನು ಸೃಷ್ಟಿಸಿವೆ. ಮೇಲ್‌ಸ್ತರದ ಸರಕಾರಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸೀಟುಗಳನ್ನು ಮೀಸಲಾತಿ ನೀಡಬೇಕೆನ್ನುವ ಬೇಡಿಕೆ ಇದಕ್ಕೆ ಉತ್ತಮ ಉದಾಹರಣೆಯಾಗಬಹುದು. ಮಹಿಳೆಯರನ್ನು ಏಕರೂಪಿಯಾಗಿ ನೋಡುವ ಗುಂಪು ಎಲ್ಲ ಮಹಿಳೆಯರನ್ನು ಒಟ್ಟಾಗಿ ಪರಿಗಣಿಸಿ ಮೂರನೇ ಒಂದರಷ್ಟು ಸೀಟುಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆಂದು ವಾದಿಸುತ್ತಿದೆ. ಆದರೆ ಬಹುಸ್ತರದ ಮಹಿಳೆಯರ ಇರುವಿಕೆಯನ್ನು ವಾದಿಸುವವರು ಮಹಿಳಾ ಮೀಸಲಾತಿಯೊಳಗೆ ಒಳಮೀಸಲಾತಿ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ.

ಒಳ ಮೀಸಲಾತಿ ನೀಡದಿದ್ದರೆ ಮಹಿಳಾ ಮೀಸಲಾತಿಯ ಬಹುಪಾಲನ್ನು ಮೇಲ್ಜಾತಿ, ಮೇಲ್ವರ್ಗಗಳ ಮಹಿಳೆಯರೇ ಅನುಭವಿಸುವ ಸಾಧ್ಯತೆ ಇದೆ. ಆದುದರಿಂದ ಜಾತಿ, ಧರ್ಮ, ವರ್ಗಗಳ ನೆಲೆಯಲ್ಲಿ ಒಳಮೀಸಲಾತಿ ನೀಡಬೇಕೆಂದು ಒತ್ತಾಯಿಸುತ್ತಿವೆ. ಇದೇ ರೀತಿಯಲ್ಲಿ ವರ್ಗ ಪ್ರಶ್ನೆ ಕೂಡ ಮಹಿಳೆಯರನ್ನು ಇಡಿಯಾಗಿ ಪರಿಭಾವಿಸುವುದರ ವಿರುದ್ಧ ಇದೆ. ಏರ್‌ಇಂಡಿಯಾದಲ್ಲಿ ಗಗನ ಸಖಿಯಾಗಿ ಕೆಲಸ ಮಾಡುವವರು, ಇಂಡಿಯನ್ ಫಾರಿನ್ ಸರ್ವಿಸಲ್ಲಿ ಕೆಲಸ ಮಾಡುವ ಮಹಿಳೆಯರು ಮೇಲಾಧಿಕಾರಿಗಳ ಒಪ್ಪಿಗೆ ಇಲ್ಲದೆ ಮದುವೆ ಆಗಬಾರದು, ಒಂದು ವೇಳೆ ಅವರ ಕೌಟುಂಬಿಕ ಬದುಕು ಅವರ ಔದ್ಯೋಗಿಕ ಬದುಕಿಗೆ ಅಡ್ಡಿಯಾದರೆ ಕೆಲಸದಿಂದ ತೆಗೆಯಲಾಗುವುದೆನ್ನುವ ಶರತ್ತುಗಳಿದ್ದವು. ಇವುಗಳ ವಿರುದ್ದ ಮಹಿಳಾ ಉದ್ಯೋಗಿಗಳು ಕೋರ್ಟ್‌ಗೆ ಹೋಗಿ ಸಮಸ್ಯೆ ಪರಿಹರಿಸಿಕೊಂಡಿದ್ದಾರೆ. ಇದೇ ರೀತಿ ಬಿಸಿಯೂಟ ಕಾರ್ಯಕ್ರಮದಲ್ಲಿ ದಲಿತ ಮಹಿಳೆಯರು ಜಾತಿ ಕಾರಣಕ್ಕೆ ಕೆಲಸ ಕಳೆದುಕೊಂಡಿದ್ದಾರೆ. ಕೆಲಸ ಕಳೆದಕೊಂಡ ಕಾರಣ ಉತ್ತಮ ಆಹಾರ, ಶಿಕ್ಷಣ, ವಸತಿ ಎಲ್ಲವುಗಳಿಂದ ವಂಚಿತರಾಗಿದ್ದಾರೆ. ಹಾಗೆಂದು ಅವರ್‍ಯಾರು ಕೋರ್ಟ್‌ಗೆ ಹೋಗಿಲ್ಲ. ಅವರ ಸಾಮಾಜಿಕ, ಆರ್ಥಿಕ ಸ್ಥಿತಿ ಕೋರ್ಟ್ ಮೆಟ್ಟಲು ಹತ್ತುವಷ್ಟು ಶಕ್ತಿ ಅವರಿಗೆ ನೀಡಿಲ್ಲ. ಇಂತಹ ಪರಿಸರದಲ್ಲಿ ಮಹಿಳೆಯರನ್ನು ಇಡಿಯಾಗಿ ಪರಿಗಣಿಸಿ ಸ್ವಾತಂತ್ರ್ಯ, ಸಮಾನತೆಗಳ ಪ್ರಶ್ನೆಗಳನ್ನು ಚರ್ಚಿಸಿದರೆ ತಳಸ್ತರದ ಮಹಿಳೆಯರಿಗೆ ಅನ್ಯಾಯವಾಗಬಹುದು.

ಸಂವಿಧಾನ ಮತ್ತು ಮಹಿಳೆ

ಸಂವಿಧಾನ ಪ್ರತಿಪಾದಿಸುವ

ಪುಟ 04 ಕ್ಕೆ

ಸಂಪಾದಕೀಯ

ನಗರ್ತಪೇಟೆ: ಹಲ್ಲೆ ಪ್ರಕರಣವನ್ನು ಕೋಮು ವಿದ್ವೇಷ ಹರಡಲು ಬಳಸುವುದು ಸಲ್ಲದು

ಯಾವುದೇ ಸಣ್ಣಪುಟ್ಟ ವಿವಾದ, ಪ್ರಕರಣಗಳು ಸಿಕ್ಕರೂ ಅವುಗಳನ್ನು ಸಂಕುಚಿತ ರಾಜಕೀಯ ಲಾಭಗಳಿಗಾಗಿ ಕೋಮುವಾದೀಕರಿಸಿ ಕೋಮು ವಿದ್ವೇಷವನ್ನು ಹರಡಲು ಬಳಸುವ ಕೆಲಸವನ್ನು ಭಾರತೀಯ ಜನತಾ ಪಕ್ಷ ಮತ್ತು ಸಂಘ ಪರಿವಾರವು ನಿರಂತರವಾಗಿ ನಡೆಸುತ್ತಾ ಬರುತ್ತಿದೆ. ಪ್ರಸಕ್ತ ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಈ ಪ್ರಯತ್ನಗಳನ್ನು ತೀವ್ರಗೊಳಿಸಿರುವುದು ಅತ್ಯಂತ ದುರದೃಷ್ಟಕರ ಹಾಗೂ ಆತಂಕಕಾರಿ.

ಮಾರ್ಚ್ 17, 2024 ರಂದು ಸಂಜೆ ಬೆಂಗಳೂರಿನ ನಗರ್ತಪೇಟೆಯ ಮೊಬೈಲ್ ಅಂಗಡಿ ಮಾಲೀಕ ಮತ್ತು ಯುವಕರ ಗುಂಪಿನ ನಡುವೆ ಬಿಸಿಯಾದ ಮಾತುಕತೆ ಬಳಿಕ ನಡೆದ ಹಲ್ಲೆ ಪ್ರಕರಣದಲ್ಲಿ ದೂರು, ಪ್ರಥಮ ಮಾಹಿತಿ ವರದಿ ಈಗಾಗಲೇ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಪೊಲೀಸರು ಆರೋಪಿಗಳಲ್ಲಿ ಐವರನ್ನು ತ್ವರಿತವಾಗಿ ಬಂಧಿಸಿದ್ದಾರೆ. ಉಳಿದವರ ಬಂಧನದ ಪ್ರಯತ್ನವನ್ನು ಮುಂದುವರಿಸಿದ್ದಾರೆ.

ಮೊಬೈಲ್ ಅಂಗಡಿಯ ಮಾಲಿಕರು ಮೊದಲು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಾಗ ಈಗ ಕೆಲವರು ಆರೋಪಿಸುತ್ತಿರುವಂತೆ ಹನುಮಾನ್ ಚಾಲೀಸಾ ಹಾಡು ಹಾಕಿದ್ದಕ್ಕೆ ಆಕ್ಷೇಪಿಸಿ ಆರೋಪಿಗಳು ಹಲ್ಲೆ ನಡೆಸಿದರು ಎಂದು ದೂರು ನೀಡಿರುವುದಿಲ್ಲ. ಅಂಗಡಿ ಮಾಲೀಕ ಎರಡನೇ ಬಾರಿ ದೂರು ದಾಖಲಿಸಿದಾಗ ಮೊದಲ ದೂರಿನಲ್ಲಿ ಇಲ್ಲದಿದ್ದ ಈ ಅಂಶ ಸೇರಿದೆ. ಅಂಗಡಿ ಮಾಲಿಕರ ಮೇಲೆ ಹಲ್ಲೆ ನಡೆಸಿದ ಆರೋಪಿಗಳಲ್ಲಿ ಮುಸ್ಲಿಮರಲ್ಲದೇ ಇಬ್ಬರು ಹಿಂದೂ ಯುವಕರೂ ಇದ್ದಾರೆ. ಈ ವಿವರಗಳು ಮೇಲ್ನೋಟಕ್ಕೆ ಇದು ಅವರವರ ಧಾರ್ಮಿಕ ನಂಬಿಕೆಗಳನ್ನು ಗೌರವಿಸುವ ವರ್ತನೆ ಅಥವಾ ಕೋಮು ಘರ್ಷಣೆ ಅಲ್ಲ ಎಂಬುದನ್ನು ಸೂಚಿಸುತ್ತದೆ. ಆದರೆ ಭಾರತೀಯ ಜನತಾ ಪಕ್ಷದ ಬೆಂಗಳೂರು ಕೇಂದ್ರ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ, ಬಿಜೆಪಿಯ ನಾಯಕ ಸುರೇಶ್ ಕುಮಾರ್ ಶಾಸಕರು, ಸಂಸದ ತೇಜಸ್ವಿ ಸೂರ್ಯ, ಇತರೆ ಹಿರಿಯ ಮುಖಂಡರು ಹಾಗೂ ಹಿಂದೂ ಜಾಗರಣ ವೇದಿಕೆ, ಭಜರಂಗದಳ ಮುಖಂಡರು ಈ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಿದ ಮೇಲೆ ಅಂಗಡಿಯಲ್ಲಿ ಹನುಮಾನ್ ಚಾಲೀಸ ಹಾಕಿದ್ದಕ್ಕಾಗಿ ಆಕ್ಷೇಪ ಎತ್ತಿ ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಲಾಗಿದೆ ಎಂದು ಹೊಸ ದೂರು ದಾಖಲಿಸಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈ ವಿಷಯದಲ್ಲಿ ಸ್ಥಳೀಯರು ಅಂಗಡಿಯಲ್ಲಿ ಹಾಕಿದ್ದದ್ದು, ಹಿಂದಿ ಭಕ್ತಿ ಗೀತೆಗಳು ಎಂದು ಮಾಹಿತಿ ನೀಡಿದ್ದಾರೆಂದು, ವಿಚಾರಣೆ ನಡೆಯುತ್ತಿದೆ ಎಂದೂ ಪೋಲಿಸರು ತಿಳಿಸಿದ್ದಾರೆ. ಆ ಪ್ರದೇಶದಲ್ಲಿ ನಮಾಜು ಮಾಡುವ ಮಸೀದಿಯು ನಿಕಟದಲ್ಲಿ ಇಲ್ಲ ಎಂದು ಹೇಳಲಾಗುತ್ತಿದೆ. ಮೊಬೈಲ್ ವ್ಯವಹಾರದಲ್ಲಿ ಬಂದಿರುವ ಸಮಸ್ಯೆಗಳು ಸಹ ಈ ವಾಗ್ವಾದ ಮತ್ತು ಜಗಳಕ್ಕೆ ಕಾರಣವೆಂದು ಸಹ ಹೇಳಲಾಗುತ್ತಿದೆ. ಈ ಒಟ್ಟು ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ಆಳವಾದ ತನಿಖೆಯನ್ನು ಪೊಲೀಸ್ ಇಲಾಖೆ ನಡೆಸಿ ತಪ್ಪಿತಸ್ಥರ ಮೇಲೆ ಕಠಿಣ ಕಾನೂನು ಕ್ರಮವನ್ನು ಜರುಗಿಸಬೇಕಾಗಿದೆ. ಮುಖ್ಯವಾಗಿ ಕಾರಣ ಏನೇ ಇದ್ದರೂ ಪರಸ್ಪರ ಈ ರೀತಿಯಲ್ಲಿ ಹೊಡೆದಾಡಿಕೊಳ್ಳುವುದನ್ನು ಖಂಡಿತಕ್ಕೂ ಒಪ್ಪಲಾಗುವುದಿಲ್ಲ. ಕಾನೂನು ಕ್ರಮಕ್ಕೆ ಅರ್ಹವಾದ ಘಟನೆಯಾಗಿದೆ.

ಇಲ್ಲಿ ಕೆಲವು ಬಹುಮುಖ್ಯವಾದ ಅಂಶಗಳನ್ನು ಗಮನಿಸಬೇಕಾಗಿದೆ. ಭಾರತೀಯ ಜನತಾ ಪಕ್ಷವು ನಮ್ಮ ರಾಜ್ಯದ ಮತ್ತು ದೇಶದ ಜನರ ಜ್ವಲಂತ ಸಮಸ್ಯೆಗಳಾದ ಬರ, ನಿರುದ್ಯೋಗ, ಕೃಷಿ ಬಿಕ್ಕಟ್ಟು, ಪಡಿತರದ ಪ್ರಶ್ನೆ, ಬೆಲೆ ಏರಿಕೆ, ರಾಜ್ಯಗಳಿಗೆ ತೆರಿಗೆ ಪಾಲಿನಲ್ಲಿ ಅನ್ಯಾಯ, ಸಾಮಾಜಿಕ ಅನ್ಯಾಯದ ಪ್ರಶ್ನೆಗಳು, ಮುಂತಾದ ಜನರ ಬದುಕಿನ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಚುನಾವಣೆಯನ್ನು ಎದುರಿಸಲು ಸಿದ್ಧವಿಲ್ಲ. ತಾನು ಜಾರಿಗೆ ತಂದಿರುವ, ಅನುಸರಿಸುವ ನೀತಿಗಳನ್ನು ಜನತೆಯ ತೀರ್ಪಿಗೆ ನಿಷ್ಕರ್ಷಕ್ಕೆ ಒಳಪಡಿಸಲು ಸಿದ್ಧವಿಲ್ಲ. ಬದಲು ಸಿಗುವ ಅವಕಾಶಗಳನ್ನು ಬಳಸಿ ಕೋಮು ಉದ್ವಿಗ್ನತೆ ಸೃಷ್ಟಿಸಿ, ಕೋಮು ದ್ವೇಷ ಹರಡಿ, ಕೋಮು ಧ್ರುವೀಕರಣ ಸೃಷ್ಟಿಸುವ ಮೂಲಕ ಚುನಾವಣೆಯನ್ನು ಗೆಲ್ಲಲು ಅದು ಹೊರಟಿದೆ. ಈ ಪ್ರಕರಣದಲ್ಲಿ ನಗರ್ತಪೇಟೆ, ಕಬ್ಬನ್ ಪೇಟೆಗಳಲ್ಲಿ ಸಂಘ ಪರಿವಾರದ ಮುಖಂಡರು ಅನುಮತಿ ಇಲ್ಲದೇ ಪ್ರತಿಭಟನೆಗಳನ್ನು ನಡೆಸಿ ದ್ವೇಷ ಭಾಷಣಗಳನ್ನು ಮಾಡಿದ್ದಾರೆ. ಚುನಾವಣಾ ಆಯೋಗದ ಸೂಚನೆಯ ಮೇರೆಗೆ ಸಂಸದ ತೇಜಸ್ವಿ ಸೂರ್ಯ ವಿರುದ್ಧ ದ್ವೇಷ ಭಾಷಣದ ಕಾರಣಕ್ಕಾಗಿ ಪ್ರಕರಣ ದಾಖಲಾಗಿದೆ. ತಮಿಳುನಾಡು ಮತ್ತು ಕೇರಳದ ಜನರ ವಿರುದ್ಧ ದ್ವೇಷ ಭಾವನೆ ಬರುವಂತೆ ಮಾತಾಡಿದ ಕಾರಣಕ್ಕಾಗಿ ಶೋಭಾ ಕರಂದ್ಲಾಜೆ ವಿರುದ್ಧವೂ ಪ್ರಕರಣ ದಾಖಲಾಗಿದೆ. ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ.

ಬೆಂಗಳೂರಿನಂತಹ ಮಹಾನಗರದಲ್ಲಿ ಹಲ್ಲೆ, ಕೊಲೆ, ಸುಲಿಗೆ ಯತ್ನದಂತಹ ಹಲವು ಪ್ರಕರಣಗಳು ನಿತ್ಯವೂ ವರದಿಯಾಗುತ್ತಿರುತ್ತವೆ. ಇಂತಹ ವಿಷಯಗಳಲ್ಲಿ ಕಾನೂನು ತನ್ನ ಬಿಗಿಕ್ರಮದ ಮೂಲಕ ಅಪರಾಧಗಳನ್ನು ನಿಯಂತ್ರಿಸಬೇಕು. ಆದರೆ ಇಂತಹ ಪ್ರತಿ ಸಂದರ್ಭವನ್ನು ದ್ವೇಷ ಹರಡಲು ಬಳಸಿದರೆ ಅದು ಸಮಾಜಕ್ಕೆ ಗಂಭೀರವಾದ ಹಾನಿಯನ್ನು ಮಾಡುತ್ತದೆ. ಇಂತಹದ್ದಕ್ಕೆ ಸರಕಾರ, ಚುನಾವಣಾ ಆಯೋಗಗಳು ಅವಕಾಶ ನೀಡಬಾರದು. ಜಾಗೃತ ನಾಗರಿಕರೂ ಇವನ್ನು ಸಹಿಸಬಾರದು. ಈ ಪ್ರಕರಣದಲ್ಲಿ ದ್ವೇಷ ಭಾಷಣ ಮಾಡಿರುವ ಉಳಿದವರ ವಿರುದ್ಧವೂ ಪ್ರಕರಣ ದಾಖಲಿಸಿ ಬಿಗಿಯಾದ ಕಾನೂನು ಕ್ರಮಗಳನ್ನು ವಹಿಸಬೇಕು. ಅತ್ಯಂತ ಸೂಕ್ಷ್ಮವಾಗಿರುವ ಈ ಸಂದರ್ಭದಲ್ಲಿ ರಾಜ್ಯದ ಜನತೆ ಕೋಮುವಾದಿ ವಿಭಜನೆಯ ಸಂಕುಚಿತ ರಾಜಕಾರಣದ ತಂತ್ರಗಳಿಗೆ ಬಲಿಯಾಗದೇ ಶಾಂತಿ, ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕು.

ಬಿಜೆಪಿ ಜೆಡಿಎಸ್ ಮೈತ್ರಿ: ಒಳಗೂ ಇದೇ ಕದನದ ಕಣ

ಈ ವಾರ

ಎಸ್.ವೈ.ಗುರುಶಾಂತ್

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈತ್ರಿಯನ್ನು ಮಾಡಿಕೊಂಡಿರುವ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ನಡುವೆ ಸ್ಥಾನ ಹೊಂದಾಣಿಕೆಗೆ ಸಂಬಂಧಿಸಿದಂತೆ ತೀವ್ರವಾದ ಭಿನ್ನಾಭಿಪ್ರಾಯಗಳು ಮತ್ತು ಅತೃಪ್ತಿ ವ್ಯಕ್ತವಾಗಿದೆ. ತಮ್ಮ ಶಕ್ತಿಯನ್ನು ಲಕ್ಷಿಸಿ, ಬಿಜೆಪಿ ನಾಯಕರು ಕನಿಷ್ಠ ನಾಲ್ಕು ಇಲ್ಲವೇ ಹೋಗಲಿ ಮೂರು ಕ್ಷೇತ್ರಗಳಲ್ಲಾದರೂ ಸ್ಪರ್ಧಿಸಲು ಅವಕಾಶವಾಗುತ್ತದೆ ಎನ್ನುವ ಮಹದಾಸೆ ಇರಿಸಿಕೊಂಡಿದ್ದ ಜೆಡಿಎಸ್ ನಾಯಕರಿಗೆ ಬಿಜೆಪಿ ಹೈಕಮಾಂಡ್ ನ ಹಾಗೂ ರಾಜ್ಯದ ನಾಯಕರ ವರ್ತನೆಗಳಿಂದ ಸಾಕಷ್ಟು ಬೇಸರ ಮತ್ತು ನೋವು ಉಂಟಾಗಿದೆ ಎನ್ನುವುದನ್ನು ಜೆಡಿಎಸ್ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೊರಹಾಕಿದ್ದಾರೆ. ಈಗಾಗಲೇ ಒಂದೊಂದು ಕಂತಿನಲ್ಲಿ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸುತ್ತಿರುವ ಬಿಜೆಪಿಯ ವರ್ತನೆ ಮೈತ್ರಿಯನ್ನು ಬಲಗೊಳಿಸುವಲ್ಲಿ ಸಹಾಯಕವಲ್ಲ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಅಂದರೆ ಎರಡು ಲೋಕಸಭಾ ಕ್ಷೇತ್ರಗಳು ಅದರಲ್ಲೂ ಮಂಡ್ಯ ಮತ್ತು ಹಾಸನದ ಕ್ಷೇತ್ರಗಳು ಎರಡರಲ್ಲಿ ಮಾತ್ರವೇ ಜೆಡಿಎಸ್ ಜೊತೆಗೆ ಮೈತ್ರಿ ಮತ್ತು ಸ್ಪರ್ಧೆಗೆ ಅವಕಾಶ ಎನ್ನುವ ಒಟ್ಟು ಬಿಜೆಪಿ ಇಂಗಿತದಲ್ಲಿ ಇಂತಹ ಮಾತುಗಳು ಹೊರಬಂದಿವೆ. 'ಈ ಎರಡು ಕ್ಷೇತ್ರಗಳನ್ನು ಪಡೆಯಲಿಕ್ಕಾಗಿಯೇ ಇಷ್ಟೊಂದು ಹರಸಾಹಸ ಪಡಬೇಕಾಗಿತ್ತೇ? ಎರಡು ಕ್ಷೇತ್ರಗಳು ಸ್ವತಂತ್ರವಾಗಿ ಗೆಲ್ಲುವ ಸಾಮರ್ಥ್ಯ ಇರುವಂತಹ ಕ್ಷೇತ್ರಗಳು. ರಾಜ್ಯದಲ್ಲಿ ಜೆಡಿಎಸ್ ನ ಶಕ್ತಿ ಏನು ಎಂಬುದು ಬಿಜೆಪಿಗೆ ಗೊತ್ತಿದೆ. ಹೀಗಾಗಿ ಪರಸ್ಪರ ಲಾಭವನ್ನು ಪಡೆಯಬೇಕಾದರೆ ಕನಿಷ್ಠ ಮೂರು ಲೋಕಸಭಾ ಸ್ಥಾನಗಳಲ್ಲಾದರೂ ಜೆಡಿಎಸ್ ಸ್ಪರ್ಧಿಸುವಂತೆ ಆಗಬೇಕು ಎಂಬುದು ಅವರ ಆಗ್ರಹ. ಮಂಡ್ಯ, ಹಾಸನ ಅಲ್ಲದೆ ಕೋಲಾರ ಕ್ಷೇತ್ರವನ್ನು ಜೆಡಿಎಸ್ ಕೇಳಿದೆ. ಮತ್ತು ಅಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಜೆಡಿಎಸ್ ಪ್ರಯತ್ನ ನಡೆಸಿದೆ. ಆದರೆ ಕೋಲಾರದ ಜಿಲ್ಲೆಯಿಂದಲೇ ಜೆಡಿಎಸ್ ಸ್ಪರ್ಧಿಸಲು ಅವಕಾಶ ಮಾಡಿಕೊಡುವುದನ್ನು ಆ ಪಕ್ಷದ ಹಿರಿಯ ನಾಯಕರು ಮತ್ತು ವಿಶೇಷವಾಗಿ, ಬಿಜೆಪಿಯ ಹಾಲಿ ಸಂಸತ್ ಸದಸ್ಯರಾಗಿರುವ ಮುನಿಸ್ವಾಮಿ ಅವರು ವ್ಯಂಗ್ಯದ ಮೂಲಕ ಟೀಕಿಸಿದ್ದಾರೆ.

ಬೆಂಗಳೂರು ಗ್ರಾಮಾಂತರದಲ್ಲಿ ಮಾಜಿ ಪ್ರಧಾನಿ ದೇವೇಗೌಡ ರವರ ಅಳಿಯರಾದ ಡಾ. ಸಿ.ಎನ್.ಮಂಜುನಾಥ್ ರವರನ್ನು ಅಭ್ಯರ್ಥಿಯಾಗಿಸಿರುವುದು ಕೂಡ ಬಿಜೆಪಿ ಪಕ್ಷದಿಂದಲೇ. ಹೀಗಾಗಿ ಜೆಡಿಎಸ್ ಪಾಲಿಗೆ ಕೇವಲ ಎರಡು ಲೋಕಸಭಾ ಸ್ಥಾನಗಳಲ್ಲಿ ಮಾತ್ರವೇ ಸ್ಪರ್ಧಿಸುವಂತೆ ಮಾಡಿದೆ.

ಜೆ.ಡಿ.ಎಸ್. ನ ನಾಯಕ ಕುಮಾರಸ್ವಾಮಿಯವರು ತಮ್ಮ ಅಸಹನೆಯನ್ನು ವ್ಯಕ್ತಪಡಿಸಿ ಬಿಜೆಪಿ ನಾಯಕರ ವರ್ತನೆಯನ್ನು ವಿರೋಧಿಸಿದ ಬಳಿಕ ಈ ಸಮಸ್ಯೆಗಳೆಲ್ಲವೂ ಸುಖಾಂತ್ಯವಾಗಲಿವೆ, ಸ್ಪರ್ದೆ ಸರಳವಾಗಲಿದೆ ಎಂದು ಬಿಜೆಪಿಯ ಹೇಳಿಕೆ ಬಂದಿದೆಯಾದರೂ ಅದು ಅಷ್ಟು ಸುಲಭವಿದ್ದಂತೆ ಕಾಣುವುದಿಲ್ಲ.

ಕೋಲಾರದಲ್ಲಿ ಹಾಲಿ ಸಂಸದರಾಗಿರುವ ಮುನಿಸ್ವಾಮಿ ಅವರು ಅಷ್ಟು ಸುಲಭದಲ್ಲಿ ಸ್ಪರ್ಧೆಯನ್ನು ಬಿಟ್ಟುಕೊಡುವ ಸ್ಥಿತಿಯಲ್ಲಿ ಇಲ್ಲ. ಅಲ್ಲಿ ಪರಿಸ್ಥಿತಿ ಹೀಗಿದ್ದರೆ ಮತ್ತೊಂದು ಕಡೆ ಹಾಸನದಲ್ಲಿ ಜೆಡಿಎಸ್ ನ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ತೀವ್ರತರವಾದ ವಿರೋಧದ ಅಲೆ ಇರುವುದು ಕೂಡ ನಿರಾಕರಿಸುವಂತಿಲ್ಲ. ಹೀಗಾಗಿ ಕುಮಾರಸ್ವಾಮಿ ಅವರನ್ನು ಒಳಗೊಂಡು ರೇವಣ್ಣ ಮತ್ತು ಅವರ ಕುಟುಂಬ ಜನತೆಯಲ್ಲಿ ತಮ್ಮನ್ನು ಕ್ಷಮಿಸುವಂತೆ ಮನವಿ ಮಾಡುತ್ತಿದ್ದಾರೆ ಎನ್ನುವ ವರದಿಗಳು ಕೂಡ ಅಲ್ಲಿಯ ಸ್ಥಿತಿಯನ್ನು ಮನಗಾಣಿಸುತ್ತವೆ. ದೇವೇಗೌಡರ ಕುಟುಂಬ ಜನರ ನಡುವೆ ಹೀಗೆ ಕ್ಷಮಿಸಬೇಕು ಎಂದು ಕೈಮುಗಿದು ಕೇಳಿಕೊಂಡಿರುವುದು ಮೊಟ್ಟ ಮೊದಲು ಎಂದು ಹೇಳಲಾಗುತ್ತಿದೆ. ಮೇಲಾಗಿ ಹಾಸನದ ಬಿಜೆಪಿಯ ನಾಯಕರು ಅಲ್ಲಿರುವ ಶಾಸಕರುಗಳು ಜೆಡಿಎಸ್ ಗೆ ಈ ಸ್ಥಾನವನ್ನು ಕೊಡುವುದಕ್ಕೆ ವಿರೋಧವಾಗಿದ್ದಾರೆ. ಮತ್ತು ಅಂತಹ ಮೈತ್ರಿ ಪಾಲಿಸಬೇಕಾದ ಸಂದರ್ಭ ಬಂದರೆ ಸಹಕಾರ ನೀಡದೆ ಇರಲು ನಿರ್ಧರಿಸಿದ್ದಾರೆ. ಯಾವುದೇ ರೀತಿಯಲ್ಲಿಯೂ ಒಕ್ಕಲಿಗರ ಪ್ರದೇಶದಲ್ಲಿ ಅದರಲ್ಲೂ ಹಾಸನದಲ್ಲಿ ನೆಲೆಯೂರಬೇಕು ಎನ್ನುವ ಬಿಜೆಪಿ ಸಂಘ ಪರಿವಾರದ ಪ್ರಯತ್ನದ ನಡುವೆ ಈ ಹೊಂದಾಣಿಕೆ ಹೇಗಿರುತ್ತೆ? ಅದರ ಫಲಿತಾಂಶ ಏನಿರುತ್ತೆ ಎನ್ನುವುದನ್ನು ಕೂಡ ಹೇಳುವುದು ಕಷ್ಟ.

ಮಂಡ್ಯ ಕ್ಷೇತ್ರವು ಕೂಡ ಜೆಡಿಎಸ್ ನ ಪಾಲಿಗೆ ಸುಲಭದ ಕ್ಷೇತ್ರವೇನಲ್ಲ. ಅಲ್ಲಿಯೂ ತೀವ್ರತರವಾದ ಸ್ಪರ್ಧೆ ಏರ್ಪಡಲಿದೆ. ಜೆಡಿಎಸ್ ಗೆ ಆ ಕ್ಷೇತ್ರವನ್ನು ಬಿಟ್ಟು ಕೊಡುವ ಕಾರಣದಿಂದಲೂ ಹಾಲಿ ಸಂಸದೆ ಸುಮಲತಾ ರವರು ತಮ್ಮ ಕ್ಷೇತ್ರವನ್ನು ಬದಲಿಸಬೇಕು ಇಲ್ಲವೇ ಪಕ್ಷವನ್ನೇ ಬದಲಿಸಬೇಕಾಗಿ ಬರಬಹುದು! ಸುಮಲತಾ ಅವರನ್ನು ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಅಭ್ಯರ್ಥಿಯನ್ನಾಗಿಸಬೇಕು ಎನ್ನುವ ಚರ್ಚೆಗಳು ಬಿಜೆಪಿ ವಲಯದಲ್ಲಿ ಚರ್ಚೆಗಳಾಗುತ್ತವೆಯಾದರೂ ಆ ಕ್ಷೇತ್ರವನ್ನು ಅಷ್ಟು ಸುಲಭದಲ್ಲಿ ಬಿಟ್ಟುಕೊಡಲು ಮಾಜಿ ಸಚಿವ ಸುಧಾಕರ್ ಅವರು ಸಿದ್ದರಿಲ್ಲ. ಬದಲಾಗಿ, ಇನ್ನು ಹಲವು ಆಕಾಂಕ್ಷಿಗಳು ಕಾದು ಕುಳಿತಿದ್ದಾರೆ.

ಪ್ರಾಯೋಗಿಕವಾಗಿ ಬಿಜೆಪಿಯೊಂದಿಗೆ ಜೆಡಿಎಸ್ ಪಕ್ಷ ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡಿರುವುದು ವಾಸ್ತವದಲ್ಲಿ ಅಂತಹ ಸಕಾರಾತ್ಮಕ ಫಲಿತಾಂಶವನ್ನು ಆ ಪಕ್ಷಕ್ಕೆ ಕೊಡುತ್ತದೆ ಎಂದು ಭಾವಿಸುವಂತಿಲ್ಲ. ಈ ಕ್ಷೇತ್ರಗಳಲ್ಲಿ ಗೆದ್ದು ಬಂದರೆ ಮುಂದೆ ಕೇಂದ್ರದಲ್ಲಿ ಸಚಿವ ಸ್ಥಾನ ಸಿಗಬಹುದು ಎಂಬ ನಿರೀಕ್ಷೆ ಏನೋ ಇದೆ. ಆದರೆ ಆರಂಭದಲ್ಲೇ ಹತ್ತಾರು ಅಡ್ಡಿ ಆತಂಕಗಳು ಜೆಡಿಎಸ್ ನ ಎದುರಿಗೆ ಇರುವುದು ಗೆಲ್ಲುವ ಸಾಧ್ಯತೆಯ ಅಂಶವನ್ನು ಮಂಕಾಗಿಸಿದೆ. ಹಲವು ಭಿನ್ನಾಭಿಪ್ರಾಯ ಮತ್ತು ಒಳ ಹಣಹಣಿ ಹೊರತಾಗಿಯೂ ಪರಿಹಾರ ಸಿಕ್ಕೆ ಸಿಗುತ್ತದೆ ಎಂದು ಆಶಾಭಾವನೆಯಿಂದ ನಾಯಕರು ಮಾತನಾಡಿಕೊಂಡರೂ ಇಷ್ಟು ದೂರ ಬಂದ ಜೆಡಿಎಸ್ ಗೆ ಇದು ನುಂಗಲಾರದ ಬಿಸಿ ಕೆಂಡವಾಗಿ ಕುಳಿತಿದೆ ಎನ್ನುವುದು ಸತ್ಯ.

ಹೃದ್ರೋಗದ ಶಸ್ತ್ರಚಿಕಿತ್ಸೆಗಾಗಿ ಚೆನ್ನೈ ಗೆ ಹೋಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಮಾರ್ಚ್ 25 ರ ಸುಮಾರಿಗೆ ವಾಪಸ್ ಆಗಲಿದ್ದು, ಆಗ ಸ್ಪರ್ಧಿಸುವ ಕ್ಷೇತ್ರಗಳು ಮತ್ತು ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳ್ಳಲಿದೆ ಎಂದು ಹೇಳಲಾಗುತ್ತಿದೆ. ಅಲ್ಲಿಯವರೆಗೆ ಬಿಜೆಪಿ ಜೆಡಿಎಸ್ಸಿನ ಕಾರ್ಯಕರ್ತರು ಪರಸ್ಪರ ಒಗ್ಗಟ್ಟಿನಿಂದ ಮೈತ್ರಿ ಉಳಿಸಿಕೊಂಡು ಕೆಲಸ ಮಾಡಬೇಕು ಎಂದು ಹೆಚ್.ಡಿ.ಕೆ. ಕರೆ ನೀಡಿದ್ದಾರೆ. ಅಷ್ಟರಮಟ್ಟಿಗೆ ಮೈತ್ರಿ ಉಳಿಸಿಕೊಳ್ಳಬೇಕು ಎನ್ನುವ ಹಂಬಲದ ಸಂದೇಶವನ್ನು ರವಾನಿಸಿದ್ದಾರೆ.

* * *

ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಮೊದಲ ಕಂತಿನ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ ನಂತರ ಎರಡನೆಯ ಪಟ್ಟಿಯೂ ಪ್ರಕಟವಾಗಿದೆ. ಕಾಂಗ್ರೆಸ್ ಹಿಂದಿನ ಏಳು ಅಭ್ಯರ್ಥಿಗಳ ಜೊತೆಗೆ 17 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಉಳಿದ ನಾಲ್ಕು ಕ್ಷೇತ್ರಗಳಿಗೆ ವಿಶೇಷವಾಗಿ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಬಳ್ಳಾರಿ ಈ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಅಂತಿಮವಾಗಬೇಕು. ಇಲ್ಲಿಯೇ

ಪುಟ 15 ಕ್ಕೆ





ಸಂವಿಧಾನ ಮತ್ತು ಮಹಿಳೆ......... ಪುಟ 2 ರಿಂದ

ಮೌಲ್ಯಗಳು ಅವೇ ಚಲಿಸಿ ಮಹಿಳೆಯರನ್ನು ಉದ್ಧಾರ ಮಾಡುವುದಿಲ್ಲ. ಸಂವಿಧಾನಿಕ ಮೌಲ್ಯಗಳು ಆಚರಣೆಗೆ ಬರಬೇಕಾದರೆ ಸಮಾನತೆ, ಸ್ವಾತಂತ್ರ್ಯಗಳಿರುವ ಸಮಾಜ, ಅರ್ಥ, ಸಂಸ್ಕೃತಿ, ರಾಜಕೀಯಗಳಿರಬೇಕು. ಇಂತಹ ಸಮಾಜ, ಅರ್ಥ, ರಾಜಕೀಯಗಳನ್ನು ರೂಪಿಸುವ ಜವಾಬ್ದಾರಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳದ್ದು. ಈ ಸಂಸ್ಥೆಗಳಲ್ಲಿ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದರೆ ಮಹಿಳಾ ಆದ್ಯತೆಗಳನ್ನು ಪ್ರತಿನಿಧಿಸುವ ಸಮಾಜ, ಅರ್ಥ, ರಾಜಕೀಯಗಳು ರೂಪುಗೊಳ್ಳಲು ಸಾಧ್ಯ. ಆದರೆ ವಾಸ್ತವ ಆ ರೀತಿ ಇಲ್ಲ. ಸಮಾಜದಲ್ಲಿ ಶೇಕಡ ಐವತ್ತರ ಆಸುಪಾಸಿನಲ್ಲಿರುವ ಮಹಿಳೆಯರು ಶಾಸಕಾಂಗದಲ್ಲಿ ಶೇಕಡ ಐದರ ಆಸುಪಾಸಿನಲ್ಲಿಲ್ಲ. ನ್ಯಾಯಾಂಗದಲ್ಲೂ ಮಹಿಳೆಯರ ಪಾಲುಗೊಳ್ಳುವಿಕೆ ತುಂಬಾ ಕಡಿಮೆ ಇದೆ. ಶಾಸಕಾಂಗ, ನ್ಯಾಯಾಂಗಗಳಿಗೆ ಹೋಲಿಸಿದರೆ ಕಾರ್ಯಾಂಗ, ಮಾಧ್ಯಮಗಳಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆ ಉತ್ತಮ ಇದೆ. ಆದರೆ ಇದು ನಿರ್ಣಾಯಕ ಪಾಲುಗೊಳ್ಳುವಿಕೆಯಲ್ಲ. ಅಂದರೆ ಈ ಎರಡೂ ಅಂಗಗಳಲ್ಲೂ ಮಹಿಳೆಯರು ಉನ್ನತ ಸ್ಥಾನಗಳಲ್ಲಿರುವುದು ವಿರಳ. ಹೀಗೆ ಮಹಿಳೆಯರ ಆದ್ಯತೆಗಳನ್ನು ಮುಂಚೂಣಿಗೆ ತರಲು ಸಾಧ್ಯವಿರುವ ಎಲ್ಲ ಸಂಸ್ಥೆಗಳಲ್ಲೂ ಮಹಿಳೆಯರು ಪಾಲುಗೊಳ್ಳುವಿಕೆ ಕಡಿಮೆ ಇದೆ. ಇದರಿಂದಾಗಿ ಮಹಿಳೆಯರ ಸಮಾನತೆ, ಸ್ವಾತಂತ್ರ್ಯಗಳಿಗೆ ಒತ್ತು ನೀಡುವ ಸಮಾಜ, ಅರ್ಥ, ರಾಜಕೀಯ ಪರಿಸರ ಸೃಷ್ಟಿಯಾಗಿಲ್ಲ.

ಅಷ್ಟು ಮಾತ್ರವಲ್ಲ ಸಂವಿಧಾನ ಮತ್ತು ಮಹಿಳೆ ಸಂಧಿಸುವ ಜಾಗದಲ್ಲಿ ಪುರುಷರಿದ್ದಾರೆ. ಜೊತೆಗೆ ಈ ಪುರುಷರು ಇಡಿಯಾಗಿಲ್ಲ; ಬಿಡಿಬಿಡಿಯಾಗಿದ್ದಾರೆ. ಜೊತೆಗೆ ಇವರ ಆದ್ಯತೆಗಳೇ ಬೇರೆ. ಇವರಲ್ಲಿ ಒಂದು ಗುಂಪು ನಮ್ಮ ಸಂಸ್ಕೃತಿ, ಚರಿತ್ರೆ ಮಹಿಳೆಯನ್ನು ಎರಡನೇ ದರ್ಜೆ ಸ್ಥಾನಕ್ಕೆ ತಳ್ಳಿದೆ. ಆದುದರಿಂದ ಸಂವಿಧಾನ ಪ್ರತಿಪಾದಿಸುವ ಮೌಲ್ಯದಿಂದ ಮಹಿಳೆಯನ್ನು ನೋಡಬೇಕೆಂದು ಒತ್ತಾಯಿಸುತ್ತಿದೆ. ಮತ್ತೊಂದು ಗುಂಪು ಸಂವಿಧಾನ ಪ್ರತಿಪಾದಿಸುವ ಮೌಲ್ಯಕ್ಕಿಂತ ನಮ್ಮ ಚರಿತ್ರೆ, ಸಂಸ್ಕೃತಿ ಪ್ರತಿಪಾದಿಸುವ ಮೌಲ್ಯಗಳು ಮಹಿಳೆಗೆ ಹೆಚ್ಚು ಅನುಕೂಲ ಎಂದು ವಾದಿಸುತ್ತಿದೆ. ಇದೇ ದೃಷ್ಟಿಯಿಂದ ಮಹಿಳಾ ಸಮಸ್ಯೆಗಳನ್ನು ಈ ಗುಂಪು ನೋಡಿ ಪರಿಹರಿಸುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಇತ್ತೀಚಿಗೆ ತುಂಬಾ ಪ್ರಚಾರದಲ್ಲಿದ್ದ ಮುಸ್ಲಿಮ್ ಮಹಿಳೆಯರ ತಲಾಕ್ ಕೇಸ್. ಮುಸ್ಲಿಮ್ ಸಂಸ್ಕೃತಿಯ ತಲಾಕ್ ಪದ್ಧತಿಯಿಂದಾಗಿ ಮುಸ್ಲಿಮ್ ಮಹಿಳೆಯರು ಹೆಚ್ಚು ಲಿಂಗ ಅಸಮಾನತೆ ಎದುರಿಸುತ್ತಿದ್ದಾರೆ. ತಲಾಕ್ ನಿಷೇಧಗೊಂಡರೆ ಮುಸ್ಲಿಮ್ ಮಹಿಳೆಯರು ಕೂಡ ಬಹುಸಂಖ್ಯಾತ ಸಮುದಾಯದ ಮಹಿಳೆಯರಂತೆ ಲಿಂಗ ಸಮಾನತೆ ಅನುಭವಿಸಬಹುದೆನ್ನುವುದು ತಲಾಕ್ ನಿಷೇಧಕ್ಕೆ ನೀಡುವ ಕಾರಣ.

ತಲಾಕ್ ನಿಷೇಧಿಸಬೇಕೆಂದು ಒತ್ತಾಯಿಸುವವರಲ್ಲಿ ಬಹುತೇಕರು ಚರಿತ್ರೆ, ಸಂಸ್ಕೃತಿಯಿಂದ ಬಂದ ಮೌಲ್ಯಗಳಿಂದ ಮಹಿಳೆಯನ್ನು ನೋಡಬೇಕೆನ್ನುವವರು. ಇದನ್ನು ನಕಾರಾತ್ಮಕವಾಗಿ ನೋಡುವ ಅಗತ್ಯವಿಲ್ಲ. ಬಹುಸಂಖ್ಯಾತರಿಗೆ ಅಲ್ಪಸಂಖ್ಯಾತರ ಮೇಲಿನ ಕಾಳಜಿಯನ್ನು ಹಿರಿಯರಿಗೆ ಕಿರಿಯರ ಬಗ್ಗೆ, ಗುರುಗಳಿಗೆ ಅನುಯಾಯಿಗಳ ಬಗ್ಗೆ, ನಾಯಕರಿಗೆ ಬೆಂಗಲಿಗರ ಬಗ್ಗೆ ಇರುವ ಕಾಳಜಿ ದೃಷ್ಟಿಯಿಂದ ನೋಡಬಹುದು. ಆದರೆ ಈ ಕಾಳಜಿ ಕಾನೂನುಗಿಂತ ಹೆಚ್ಚು ಹಿರಿಯರ ಅಥವಾ ನಾಯಕರ ಆದರ್ಶ ಬದುಕಿನಿಂದ, ನುಡಿ ಮತ್ತು ನಡೆಗಳ ನಡುವಿನ ಸಂಬಂಧಗಳಿಂದ ಕೆಲಸ ಮಾಡುವುದು. ಹಿರಿಯರು ಅಥವಾ ನಾಯಕರು ತಮಗೊಂದು ನ್ಯಾಯ ಊರಿಗೊಂದು ನ್ಯಾಯ ಎನ್ನುವ ರೀತಿಯಲ್ಲಿ ವ್ಯವಹರಿಸಿದರೆ ಅಥವಾ ನಾಯಕರ ನುಡಿ ಮತ್ತು ನಡೆ ನಡುವೆ ಸಂಬಂಧವೇ ಇಲ್ಲದಿದ್ದರೆ ಈ ಕಾಳಜಿ ಕೆಲಸ ಮಾಡುವುದಿಲ್ಲ. ಅಲ್ಪ ಸಂಖ್ಯಾತ ಮಹಿಳೆಯರ ದುಃಸ್ಥಿತಿ ಬಗೆಗಿನ ಬಹುಸಂಖ್ಯಾತರ ಕಾಳಜಿಯನ್ನು ಅಲ್ಪಸಂಖ್ಯಾತರು ಗಂಭೀರವಾಗಿ ಪರಿಗಣಿಸಬೇಕಾದರೆ ಬಹುಸಂಖ್ಯಾತರು ತಮ್ಮ ಮಹಿಳೆಯರನ್ನು ಚೆನ್ನಾಗಿ ನೋಡಿಕೊಂಡ ಮಾದರಿ ಬೇಕು. ಇಂತಹ ಮಾದರಿಯನ್ನು ಬಹುಸಂಖ್ಯಾತರು ಸೆಟ್ ಮಾಡಿದ್ದಾರೆಯೇ? ಎನ್ನುವ ಪ್ರಶ್ನೆಗೆ ಖಂಡಿತವಾಗಿಯೂ ಇಲ್ಲ ಎನ್ನುವುದೇ ಉತ್ತರ.

ವರದಕ್ಷಿಣೆ, ಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯ ಇವೆಲ್ಲ ಮಹಿಳೆಯ ಎರಡನೇ ದರ್ಜೆ ಸ್ಥಾನಮಾನದಿಂದ ಸೃಷ್ಟಿಯಾಗುವ ಸಮಸ್ಯೆಗಳು. ವರದಕ್ಷಿಣೆ, ಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯಗಳನ್ನು ನಿಷೇಧಿಸುವ ಕಾನೂನುಗಳಿವೆ. ಹಾಗೆಂದು ವರದಕ್ಷಿಣೆ ತೆಗೆದುಕೊಳ್ಳುವುದು ಕಡಿಮೆಯಾಗಿಲ್ಲ. ಭ್ರೂಣ ಹತ್ಯೆ ನಿಷೇಧ ಕಾಯಿದೆಯ ನಡುವೆಯೂ ಸೆನ್ಸಸ್‌ನಿಂದ ಸೆನ್ಸಸ್‌ಗೆ ಲಿಂಗಾನುಪಾತ ಕಡಿಮೆಯಾಗುತ್ತಿದೆ. ಕೆಲವು ರಾಜ್ಯಗಳಲ್ಲಿ ಇಂದು ಪ್ರತಿ ಸಾವಿರ ಪುರುಷರಿಗೆ ಎಂಟುನೂರು ಒಂಬೈನೂರರ ಅಸುಪಾಸಿನಲ್ಲಿ ಮಹಿಳೆಯರಿದ್ದಾರೆ. ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ವಯಸ್ಸಿಗೆ ಬಂದ ಯುವಕರಿಗೆ ಮದುವೆಯಾಗಲು ಯುವತಿಯರಿಲ್ಲವೆಂದು ದಕ್ಷಿಣ ಭಾರತದ ರಾಜ್ಯಗಳಿಂದ ಮದುವೆಯಾಗುವುದು ಹಲವು ವರ್ಷಗಳಿಂದ ನಡೆಯುತ್ತಿದೆ. ಇನ್ನು ಲೈಂಗಿಕ ದೌರ್ಜನ್ಯಗಳ ಕತೆ ಹೇಳುವುದೇ ಬೇಡ. ಆರು ವರ್ಷದ ಮಗುವಿನಿಂದ ಹಿಡಿದು ಆರುವತ್ತು ವರ್ಷದ ಮುದುಕಿಯರನ್ನೂ ರೇಪಿಸ್ಟ್‌ಗಳು ಬಿಟ್ಟಿಲ್ಲ. ಬಹುಸಂಖ್ಯಾತ ಸಮುದಾಯದ ಮಹಿಳೆಯರು ಇಷ್ಟೊಂದು ಕಷ್ಟನಷ್ಟಗಳನ್ನು ಎದುರಿಸುತ್ತಿರುವಾಗ ಬಹುಸಂಖ್ಯಾತರು ಗೋರಕ್ಷಣೆಯನ್ನು ಗಂಭೀರವಾಗಿ ತೆಗೆದುಕೊಂಡಷ್ಟು ಮಹಿಳಾ ದೌರ್ಜನ್ಯ, ಭ್ರೂಣ ಹತ್ಯೆಗಳನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ.

ಲಿಂಗ ಸಮಾನತೆಗಾಗಿ ಪಾರ್ಲಿಮೆಂಟ್ ಹಾಗೂ ಎಸೆಂಬ್ಲಿ ಸೀಟುಗಳಲ್ಲಿ ಮೂರನೇ ಒಂದರಷ್ಟು ಸೀಟುಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆಂದು ಹಲವು ವರ್ಷಗಳಿಂದ ಮಹಿಳೆಯರು ಹೋರಾಡುತ್ತಿದ್ದಾರೆ. ಆದರೆ ಮಹಿಳೆಯರ ಕೂಗನ್ನು ಕೇಳುವವರೇ ಇಲ್ಲ. ಮುಸ್ಲಿಮ್ ಮಹಿಳೆಯರು ಸುಲಭದ ವಿಚ್ಛೇಧನದಿಂದ ಕಷ್ಟ ಅನುಭವಿಸಿದರೆ ಬಹುಸಂಖ್ಯಾತ ಸಮುದಾಯದ ಮಹಿಳೆಯರು ಕಷ್ಟದ ವಿಚ್ಛೇಧನದಿಂದ ನಷ್ಟ ಅನುಭವಿಸುತ್ತಿದ್ದಾರೆ. ವಿಚ್ಛೇಧನವನ್ನು ಸರಳಗೊಳಿಸುವ ಹಿಂದೂ ವಿವಾಹ ತಿದ್ದುಪಡಿ ಬಿಲ್ ಸಿದ್ದಗೊಂಡು ಹಲವು ವರ್ಷಗಳಾದವು. ಆದರೆ ಅದಕ್ಕೆ ಇನ್ನೂ ಪಾರ್ಲಿಮೆಂಟ್ ಒಪ್ಪಿಗೆ ಸಿಕ್ಕಿಲ್ಲ. ಹೀಗೆ ತಮ್ಮ ಸಮುದಾಯದ ಮಹಿಳೆಯರ ಲಿಂಗ ಸಮಾನತೆಗಿರುವ ಕಾಯಿದೆಗಳನ್ನೇ ಗಂಭೀರವಾಗಿ ಪರಿಗಣಿಸದಿರುವ ಮೆಜಾರಿಟಿ ಸಮುದಾಯದವರು ಮುಂದಿಡುವ ಅಲ್ಪಸಂಖ್ಯಾತ ಮಹಿಳೆಯರ ಲಿಂಗ ಸಮಾನತೆಗಾಗಿ ತಲಾಕ್ ನಿಷೇಧ ಎನ್ನುವ ವಾದವನ್ನು ಅಲ್ಪಸಂಖ್ಯಾತರು ಸಂದೇಹದಿಂದ ನೋಡುವುದರಲ್ಲಿ ಆಶ್ಚರ್ಯವೇನಿಲ್ಲ. ದುರಂತವೆಂದರೆ ಮಹಿಳಾ ಪ್ರಶ್ನೆಯನ್ನು ನಮ್ಮ ಚರಿತ್ರೆ, ಸಂಸ್ಕೃತಿ ದೃಷ್ಟಿಯಿಂದ ನೋಡಬೇಕೆನ್ನುವವರನ್ನು ಬೆಂಬಲಿಸುವ ಮಹಿಳೆಯರಿದ್ದಾರೆ. ಈ ದೃಷ್ಟಿಕೋನವನ್ನು ಪ್ರತಿಪಾದಿಸುವ ರಾಜಕೀಯ ಪಕ್ಷಗಳು ತಮ್ಮ ಮಹಿಳಾವಿಂಗ್‌ಗಳನ್ನು ಹೊಂದಿವೆ. ಅಷ್ಟು ಮಾತ್ರವಲ್ಲ ಇಂತಹ ಮಹಿಳಾವಿಂಗ್‌ಗಳು ಮಹಿಳೆಯರನ್ನು ಶತಮಾನಗಳಿಂದ ಜೀತದಾಳುಗಳ ರೀತಿಯಲ್ಲಿ ದುಡಿಸಿಕೊಳ್ಳುವ ಸಂಬಂಧ, ಸಂಸ್ಥೆಗಳಿಂದ ಬಿಡುಗಡೆಗೊಳಿಸುವ ಕ್ರಮಗಳ ವಿರುದ್ಧ ಹೋರಾಡುತ್ತಿವೆ.

ಸಮಾರೋಪ

ಸಂವಿಧಾನ ಪ್ರತಿಪಾದಿಸುವ ಸಾಮಾಜಿಕ ಪರಿವರ್ತನೆ, ಸಮಾನತೆ ಹಾಗು ಸ್ವಾತಂತ್ರ್ಯದ ಕಲ್ಪನೆಗಳಿಗೂ ಆಚರಣೆಯಲ್ಲಿರುವ ಸಾಮಾಜಿಕ ಪರಿವರ್ತನೆ, ಸಮಾನತೆ ಹಾಗು ಸ್ವಾತಂತ್ರ್ಯಗಳಿಗೂ ಅಂತರವಿದೆ. ಸಂಬಂಧ, ಸಂಸ್ಥೆ, ಮೌಲ್ಯಗಳ ಪರಿವರ್ತನೆಗೆ ಸಂವಿಧಾನ ಹೆಚ್ಚು ಒತ್ತು ನೀಡಿದರೆ ಆಚರಣೆಯಲ್ಲಿರುವ ಸಾಮಾಜಿಕ ಪರಿವರ್ತನೆಯಲ್ಲಿ ತಾಂತ್ರಿಕ ಆಧುನೀಕರಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಗಂಡು ಹೆಣ್ಣಿನ ಸಂಬಂಧ, ಜಾತಿ, ಧರ್ಮಗಳ ನಡುವಿನ ಸಂಬಂಧಗಳ ನೆಲೆಗಟ್ಟು ಸಮಾನತೆಯಾಗಿರಬೇಕು, ಸಮಾನತೆಯನ್ನು ಪ್ರತಿಪಾದಿಸುವ ಸಂಸ್ಥೆ, ಮೌಲ್ಯಗಳನ್ನು ಕಟ್ಟಿಕೊಳ್ಳಬೇಕೆಂದು ಸಂವಿಧಾನ ಪ್ರತಿಪಾದಿಸಿದರೆ ತಾಂತ್ರಿಕ ಆಧುನೀಕರಣದ ಮೂಲಕ ಸಾಮಾಜಿಕ ಪರಿವರ್ತನೆಗೆ ಪ್ರಯತ್ನಿಸುವವರಿಗೆ ಸರಕುಸೇವೆಗಳ ಉತ್ಪಾದನೆಯಲ್ಲಿ ಆಧುನಿಕ ತಂತ್ರಜ್ಞಾನಗಳ ಬಳಕೆ ಮುಖ್ಯವಾಗಿದೆ. ಆಧುನಿಕ ಸರಕುಸೇವೆಗಳನ್ನು– ಸ್ಟಾರ್ ಹೊಟೇಲ್‌ಗಳಲ್ಲಿ ಊಟಮಾಡುವುದು, ಆಧುನಿಕ ಉಡುಪು ಧರಿಸುವುದು, ಟಿವಿ, ಫ್ರಿಡ್ಜ್ ಇತ್ಯಾದಿ ಆಧುನಿಕ ಸರಕುಸೇವೆಗಳನ್ನು ಅನುಭೋಗಿಸುವುದು ಪರಿವರ್ತನೆಯಾಗಿದೆ. ಹೀಗೆ ಸಂವಿಧಾನಿಕ ಮೌಲ್ಯಗಳನ್ನು ಸರಳೀಕೃತವಾಗಿ ವ್ಯಾಖ್ಯಾನಿಸುವ ಮತ್ತು ಆಚರಿಸುವ ಪ್ರಯತ್ನವನ್ನು ಅಧಿಕಾರಸ್ಥರು ನಡೆಸುತ್ತಲೇ ಬಂದಿದ್ದಾರೆ. ಇದರಿಂದ ಸಂಪನ್ಮೂಲ ಕೆಲವರಲ್ಲೇ ಕ್ರೋಢೀಕರಣಗೊಂಡು ಬಹುತೇಕ ಮಹಿಳೆಯರು ಮೂರು ಹೊತ್ತಿನ ಊಟಕ್ಕೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಸಮಾನತೆ, ಸ್ವಾತಂತ್ರ್ಯಗಳನ್ನು ಸಮಷ್ಠಿಯ ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ವೃದ್ಧಿಸಲು ಬಳಸಬೇಕೆನ್ನುವುದು ಸಂವಿಧಾನದ ಆಶಯ. ಆದರೆ ಇವುಗಳನ್ನು ಸಮಷ್ಠಿಯ ಸಮಾನತೆ, ಸ್ವಾತಂತ್ರ್ಯಗಳನ್ನು ವೃದ್ಧಿಸಲು ಬಳಸುವುದಕ್ಕಿಂತ ಹೆಚ್ಚು ಬಲಾಢ್ಯರ ಆಸಕ್ತಿಗಳನ್ನು ವೃದ್ಧಿಸಲು ಬಳಸಲಾಗುತ್ತಿದೆ. ಹಲವು ಬಾರಿ ಸಮಾನತೆ ಸ್ವಾತಂತ್ರ್ಯಗಳು ಜೊತೆಜೊತೆಗಿರಲು ನಿರಾಕರಿಸುತ್ತವೆ. ಸಮಾನತೆಗೆ ಒತ್ತು ಕೊಟ್ಟರೆ ಸ್ವಾತಂತ್ರ್ಯಕ್ಕೆ ಧಕ್ಕೆ ಆಗುತ್ತದೆಯೆಂದು ಕೆಲವರು ಪ್ರತಿಭಟಿಸಿದರೆ ಅತಿಯಾದ ಸ್ವಾತಂತ್ರ್ಯದಿಂದ ನಮ್ಮ ಸಮಾನತೆಗೆ ತೊಂದರೆಯಾಗುತ್ತಿದೆ ಎಂದು ಜನ ಬೀದಿಗಿಳಿದು ಪ್ರತಿಭಟಿಸುತ್ತಾರೆ. ಇದೇ ರೀತಿ ಮಹಿಳೆ ಕೂಡ ಒಂದು ಗುರುತಲ್ಲ; ಹಲವು ಮಹಿಳೆಯರಿದ್ದಾರೆ. ದಲಿತ ಮಹಿಳೆ, ಬುಡಕಟ್ಟು ಮಹಿಳೆ, ಓಬಿಸಿ ಮಹಿಳೆ, ಲಿಂಗಾಯತ ಮಹಿಳೆ ಹೀಗೆ ಹಲವು ವಿಭಾಗಗಳ ಮಹಿಳೆಯರಿದ್ದಾರೆ. ಅಷ್ಟು ಮಾತ್ರವಲ್ಲ ಭೂರಹಿತ ಅಥವಾ ಬಂಡವಾಳ ರಹಿತ ಮಹಿಳೆ ಮತ್ತು ಭೂಮಿ, ಬಂಡವಾಳಗಳುಳ್ಳ ಮಹಿಳೆಯರಿದ್ದಾರೆ. ಒಂದು ಗುಂಪು ಮಹಿಳೆಯರನ್ನು ಇಡಿಯಾಗಿ ನೋಡಬೇಕೆಂದು ವಾದಿಸಿದರೆ ಮತ್ತೊಂದು ಗುಂಪು ಮಹಿಳೆಯರನ್ನು ಬಿಡಿಬಿಡಿಯಾಗಿ ನೋಡಬೇಕೆಂದು ವಾದಿಸುತ್ತದೆ. ಮಹಿಳೆಯರನ್ನು ಇಡಿಯಾಗಿ ನೋಡಿದರೆ ತಳಸ್ತರದ ಮಹಿಳೆಯರು ಹೆಚ್ಚು ನಷ್ಟ ಅನುಭವಿಸುತ್ತಾರೆ. ಆದುದರಿಂದ ಸಂಪನ್ಮೂಲ, ಅವಕಾಶಗಳನ್ನು ಹಂಚುವಾಗ ಮಹಿಳೆಯರನ್ನು ಬಿಡಿಬಿಡಿಯಾಗಿ ನೋಡುವ ಅವಶ್ಯಕತೆ ಇದೆ.

ಸಂವಿಧಾನ ಪ್ರತಿಪಾದಿಸುವ ಮೌಲ್ಯಗಳು ಅವೇ ಚಲಿಸಿ ಮಹಿಳೆಯರನ್ನು ಉದ್ಧಾರ ಮಾಡುವುದಿಲ್ಲ. ಸಂವಿಧಾನಿಕ ಮೌಲ್ಯಗಳನ್ನು ಪ್ರತಿನಿಧಿಸುವ ಸಮಾಜ, ಅರ್ಥ, ಸಂಸ್ಕೃತಿ, ರಾಜಕೀಯಗಳಿರಬೇಕು. ಇಂತಹ ಸಮಾಜ, ಅರ್ಥ, ರಾಜಕೀಯಗಳನ್ನು ರೂಪಿಸುವ ಜವಾಬ್ದಾರಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳದ್ದು. ಈ ಸಂಸ್ಥೆಗಳಲ್ಲಿ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದರೆ ಮಹಿಳಾ ಆದ್ಯತೆಗಳನ್ನು ಪ್ರತಿನಿಧಿಸುವ ಸಮಾಜ, ಅರ್ಥ, ರಾಜಕೀಯಗಳು ರೂಪುಗೊಳ್ಳಲು ಸಾಧ್ಯ. ಆದರೆ ವಾಸ್ತವ ಆ ರೀತಿ ಇಲ್ಲ. ಜೊತೆಗೆ ಸಂವಿಧಾನ ಮತ್ತು ಮಹಿಳೆ ಸಂಧಿಸುವ ಜಾಗದಲ್ಲಿ ಇತರರಿದ್ದಾರೆ. ಇವರಲ್ಲಿ ಒಂದು ಗುಂಪು ಸಂವಿಧಾನ ಪ್ರತಿಪಾದಿಸುವ ಮೌಲ್ಯಕ್ಕಿಂತ ನಮ್ಮ ಚರಿತ್ರೆ ಸಂಸ್ಕೃತಿ ಪ್ರತಿಪಾದಿಸುವ ಮೌಲ್ಯಗಳು ಮಹಿಳೆಗೆ ಹೆಚ್ಚು ಅನುಕೂಲ ಎಂದು ವಾದಿಸಿದರೆ ಮತ್ತೊಂದು ಗುಂಪು ನಮ್ಮ ಸಂಸ್ಕೃತಿ, ಚರಿತ್ರೆ ಮಹಿಳೆಯನ್ನು ಎರಡನೇ ದರ್ಜೆ ಸ್ಥಾನಕ್ಕೆ ತಳ್ಳಿದೆ, ಸಂವಿಧಾನ ಪ್ರತಿಪಾದಿಸುವ ಮೌಲ್ಯದಿಂದ ಮಹಿಳೆಯನ್ನು ನೋಡಬೇಕೆಂದು ಒತ್ತಾಯಿಸುತ್ತಿದೆ. ಚರಿತ್ರೆಯಿಂದ ಬಂದ ಮೌಲ್ಯಗಳಿಂದ ಮಹಿಳಾ ಪ್ರಶ್ನೆಗಳನ್ನು ನೋಡಬೇಕೆನ್ನುವವರು ಅಧಿಕಾರದ ಚುಕ್ಕಾಣಿ ಹಿಡಿದಾಗ ಮಹಿಳೆಯರನ್ನು ಸಶಕ್ತೀಕರಣಗೊಳಿಸುವುದಕ್ಕಿಂತ ಹೆಚ್ಚು ಅವರ ಸಮಸ್ಯೆಗಳನ್ನು ರಾಜಕೀಯ ದಾಳಗಳಾಗಿ ಬಳಸುವುದು ಹೆಚ್ಚಾಗುತ್ತಿದೆ. ಹೀಗೆ ನಮ್ಮಂತಹ ಶ್ರೇಣೀಕೃತ ಸಮಾಜದಲ್ಲಿ ಮಹಿಳೆ ಮತ್ತು ಸಂವಿಧಾನ ಸಂಬಂಧ ತುಂಬಾ ಸಂಕೀರ್ಣವಾಗಿದೆ.

ಪರಾಮರ್ಶನ ಬರಹಗಳು–(ಲೇಖಕರು ಒಟ್ಟು 23 ಚಿಂತಕರ ಲೇಖನ–ಬರಹಗಳನ್ನು ಉಲ್ಲೇಖಿಸಿ ವಿವರ ನೀಡಿದ್ದಾರೆ. ಸ್ಥಳಾಭಾವದಿಂದ ಅವುಗಳನ್ನು ಪ್ರಕಟಿಸುವುದು ಸಾಧ್ಯವಾಗಿಲ್ಲ.–ಸಂ.)



ಪ್ರಜಾಪ್ರಭುತ್ವ ರಕ್ಷಣೆಗೆ ಈ ಚುನಾವಣೆ ಬಹಳ ಮುಖ್ಯ: ಸೀತಾರಾಂ ಯೆಚೂರಿ

ಬಿಜೆಪಿಯವರಿಗೆ ನಿಜವಾಗಿಯೂ 370 ಅಥವಾ 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ವಿಶ್ವಾಸ ಇದ್ದರೆ, ಅವರು ರಾಜ್ಯಗಳಲ್ಲಿ ವಿರೋಧ ಪಕ್ಷಗಳನ್ನು ವಿಭಜನೆ ಮಾಡುವ ಪ್ರಯತ್ನವನ್ನೇಕೆ ಮಾಡುತ್ತಿದ್ದಾರೆ? ಇದಕ್ಕಾಗಿ ಇಡಿ, ಸಿಬಿಐ ಮತ್ತು ಕೆಲವು ಸಂಸ್ಥೆಗಳನ್ನು ದೊಡ್ಡ ಪ್ರಮಾಣದಲ್ಲಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪ್ರತಿಪಕ್ಷಗಳು ಪ್ರಬಲವಾಗಿರುವ ಪ್ರತಿ ರಾಜ್ಯದಲ್ಲೂ ಪ್ರತಿಪಕ್ಷಗಳನ್ನು ಛಿದ್ರಗೊಳಿಸುವ ಪ್ರಯತ್ನಗಳನ್ನು ಅವರೇಕೆ ಮಾಡುತ್ತಿದ್ದಾರೆ? ಪ್ರತಿಪಕ್ಷಗಳ ನಾಯಕರಿಗೆ ಬೆದರಿಕೆ ಹಾಕಲಾಗುತ್ತಿದೆ. ಅವರನ್ನು ಹೆದರಿಸುತ್ತಿದ್ದಾರೆ. ಅವರನ್ನು ತಮ್ಮ ಪಕ್ಷಕ್ಕೆ ಬರುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿ ತನ್ನ ಗೆಲುವಿನ ಭರವಸೆಯಲ್ಲಿ ಇಷ್ಟೊಂದು ನಿರಾಶೆಗೊಂಡಿರುವುದೇಕೆ? ಇದು ಸೀತಾರಾಂ ಯೆಚೂರಿ ಅವರ ಪ್ರಶ್ನೆ. ಅವರು ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿನ ಸಾರಾಂಶ ಇಲ್ಲಿದೆ.

“ಇದು ದೇಶದ ಉಳಿವಿಗಾಗಿ ನಡೆಯುತ್ತಿರುವ ಚುನಾವಣೆಗಳು. ನಾವು ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಉಳಿಸಿಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಈ ಚುನಾವಣೆಗಳು ನಿರ್ಧರಿಸುತ್ತದೆ. ಏಕೆಂದರೆ ಕಳೆದ ಹತ್ತು ವರ್ಷಗಳಲ್ಲಿ ಹಲವಾರು ಗಂಭೀರ ಉಲ್ಲಂಘನೆಗಳಾಗಿವೆ. ಇದು ಸಂವಿಧಾನದ ಮೂಲ ಸ್ತಂಭದ ಮೇಲಿನ, ಸಾಂವಿಧಾನಿಕ ಮೌಲ್ಯಗಳ ಮೇಲಿನ ದಾಳಿ ಎಂದು ನಾನು ಪರಿಗಣಿಸುತ್ತೇನೆ. ಜಾತ್ಯತೀತ, ಪ್ರಜಾಪ್ರಭುತ್ವ ಮೂಲಾಧಾರವಾಗಿದೆ. ಆರ್ಥಿಕ ಸಾರ್ವಭೌಮತ್ವ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ತತ್ವ ಇತರ ಆಧಾರ ಸ್ತಂಭಗಳಾಗಿವೆ” ಎನ್ನುತ್ತಾರೆ ಯೆಚೂರಿಯವರು.

ಸಾರ್ವಜನಿಕ ಹಕ್ಕುಗಳನ್ನು ರಕ್ಷಿಸುವುದು ಮೈತ್ರಿಕೂಟದ ಉದ್ದೇಶವಾಗಿದೆ

ನಾವು ನಮ್ಮ ಭಾರತದ ಗಣರಾಜ್ಯದ ಜಾತ್ಯತೀತ, ಪ್ರಜಾಸತ್ತಾತ್ಮಕ ಸ್ವರೂಪವನ್ನು ಕಾಪಾಡಿಕೊಳ್ಳಬಹುದೇ ಅಥವಾ ಅದನ್ನು ಮತ್ತಷ್ಟು ಸವೆಯಲು ಬಿಡುವುದೇ? ಪ್ರಸ್ತುತ ಪರಿಸ್ಥಿತಿಯಲ್ಲಿ ಇವು ಪ್ರಮುಖ ಅಂಶಗಳು. ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ‘ಇಂಡಿಯಾ’ ಕೂಟವನ್ನು ರಚಿಸಲಾಗಿದೆ. ಮೈತ್ರಿಕೂಟದಲ್ಲಿನ ಪಾಲುದಾರ ಪಕ್ಷಗಳಿಗೆ ಜನರ ನಡುವೆ ಆಳವಾದ ತಳಹದಿ ಇದೆ. ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಜನರ ಮಾನವ ನಾಗರಿಕ ಹಕ್ಕುಗಳನ್ನು ರಕ್ಷಿಸುವ ಮತ್ತು ಅವುಗಳನ್ನು ಮತ್ತಷ್ಟು ಬಲಪಡಿಸುವ ಅವಶ್ಯಕತೆಯಿದೆ. ಆ ಉದ್ದೇಶದಿಂದ ಇಂಡಿಯಾ ಒಕ್ಕೂಟವನ್ನು ರಚಿಸಲಾಯಿತು. ಸಂವಿಧಾನವು ಜನರ ಹಕ್ಕುಗಳನ್ನು ಖಾತರಿಪಡಿಸುತ್ತದೆ. ಅತ್ಯಂತ ಪ್ರಮುಖ ವಿಷಯವೆಂದರೆ, ಸಂವಿಧಾನವು ಒದಗಿಸಿರುವ ಸಮಾನತೆಯ ಹಕ್ಕು, ನ್ಯಾಯ ಪಡೆಯುವ ಹಕ್ಕು. ಮೈತ್ರಿ ಪಕ್ಷಗಳು ಇದಕ್ಕೆ ಬದ್ಧವಾಗಿವೆ’ ಎಂದು ಯೆಚೂರಿ ಹೇಳಿದರು.

ಮೌಲ್ಯಗಳು ಮುಖ್ಯ

ಇಂಡಿಯಾ ವೇದಿಕೆಯಲ್ಲಿ 40 ವಿರೋಧ ಪಕ್ಷಗಳಿವೆ. ಕಳೆದ ವರ್ಷ ಜೂನ್ 18 ರಂದು ಪಾಟ್ನಾದಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯಲ್ಲಿ ಈ ಒಕ್ಕೂಟ ಹೊರಹೊಮ್ಮಿತು. ಆದರೆ ನಂತರ ಬಿಹಾರದಲ್ಲಿ ಜೆಡಿಯು ಮತ್ತು ಉತ್ತರ ಪ್ರದೇಶದಲ್ಲಿ ಆರ್.ಎಲ್.ಡಿ. ಇಂಡಿಯಾ ಒಕ್ಕೂಟವನ್ನು ತೊರೆದವು. ಸೀಟು ಹೊಂದಾಣಿಕೆಯ ವಿಳಂಬದಿಂದಾಗಿ ಮೈತ್ರಿಕೂಟಕ್ಕೆ ಹಿನ್ನಡೆಯಾಗಿದೆ. ಇದಕ್ಕೆ ಪ್ರತಿಕ್ರಿಯಿಸಿದ ಯೆಚೂರಿ, “ಸೀಟು ಹೊಂದಾಣಿಕೆ ಕುರಿತು ಚರ್ಚೆಗಳು ಸಕಾರಾತ್ಮಕವಾಗಿ ನಡೆಯುತ್ತಿದ್ದು, ಶೀಘ್ರವೇ ಮುಕ್ತಾಯವಾಗಲಿದೆ. ಚುನಾವಣಾ ರಾಜಕೀಯ, ಸೀಟು ಹೊಂದಾಣಿಕೆ, ಮೈತ್ರಿ ಎನ್ನುವುದು ಸಂಖ್ಯೆಗಳಿಗೆ ಸಂಬಂಧಿಸಿದ ಲೆಕ್ಕಾಚಾರವಲ್ಲ. ಅವು ರಾಜಕೀಯ. ಎರಡು ಎರಡು ಸೇರಿದರೆ ನಾಲ್ಕಾಗುತ್ತದೆ ವಿನಃ ಅವುಗಳನ್ನು ಕಳೆಯುವುದಲ್ಲ. ಹಾಗಿರುವಾಗ ಯಾರು ಹೋಗುತ್ತಾರೆ, ಯಾರು ಬರುತ್ತಾರೆ ಎಂಬುದು ಪ್ರಶ್ನೆಯಲ್ಲ. ಯಾವ ಮೌಲ್ಯಗಳ ಮೇಲೆ ಯಾರು ಸೇರುತ್ತಿದ್ದಾರೆ ಎಂಬುದು ಇಲ್ಲಿ ಮುಖ್ಯವಾದ ವಿಷಯ” ಎಂದು ಹೇಳಿದರು.

ಚುನಾವಣೆಯನ್ನು ವ್ಯಾಪಾರ ಎಂದು ಭಾವಿಸಿದರೆ

ನೀವು ಚುನಾವಣೆಯನ್ನು ಒಂದು ವ್ಯಾಪಾರ ಎಂದು ಭಾವಿಸಿದರೆ ಪಕ್ಷಾಂತರಗಳು ಅಥವಾ ಅಂತಹ ವಿಷಯಗಳು ನಡೆಯುತ್ತವೆ. ಅದು ಬೇರೆ ವಿಷಯ. ಆದರೆ ಅವುಗಳು ರಾಜಕೀಯವಲ್ಲ. ಈಗ ಜನರಿಗೆ ತಮ್ಮ ಜೀವನೋಪಾಯವೇ ಮುಖ್ಯ ಸಮಸ್ಯೆಯಾಗಿದೆ. ಜನರನ್ನು ಚಿಂತೆಗೀಡು ಮಾಡುವ ಪ್ರಮುಖ ಸಮಸ್ಯೆಯೆಂದರೆ ಅವರ ಜೀವನ ಮಟ್ಟ. ಕಳೆದ ಹತ್ತು ವರ್ಷಗಳಲ್ಲಿ ಉದ್ಯೋಗ ಮಟ್ಟದಲ್ಲಿ ಯಾವುದೇ ಸುಧಾರಣೆಯಾಗಿಲ್ಲ ಎಂದು ಅಂಕಿಅಂಶಗಳು ತೋರಿಸುತ್ತವೆ. ಆರ್ಥಿಕ ನೀತಿಗಳೇ ಈ ವಿನಾಶಕ್ಕೆ ಕಾರಣ. ಆರ್ಥಿಕ ವ್ಯವಸ್ಥೆ ಮಾತ್ರವಲ್ಲ, ಜನರ ಬದುಕನ್ನೂ ಇವು ನಾಶ ಮಾಡಿವೆ. ಉದ್ಯೋಗ ಕೂಡಾ ಜನರ ಮುಂದಿರುವ ಪ್ರಮುಖ ಸಮಸ್ಯೆಯಾಗಿದೆ. ಬಿಜೆಪಿಯು ಧಾರ್ಮಿಕ ಏಕೀಕರಣ, ದ್ವೇಷ ಮತ್ತು ವಿಷಕಾರಿ ಪ್ರಚಾರದ ಮೂಲಕ ಜನರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದೆ. ಆದರೆ ಅವರ ಈ ಪ್ರಯತ್ನಗಳು ಫಲ ನೀಡುವುದಿಲ್ಲ.

ಬಿಜೆಪಿಗೆ ನಿರಾಸೆಗಳೇಕೆ?

ಬಿಜೆಪಿಯವರಿಗೆ ನಿಜವಾಗಿಯೂ 370 ಅಥವಾ 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ವಿಶ್ವಾಸ ಇದ್ದರೆ, ಅವರು ರಾಜ್ಯಗಳಲ್ಲಿ ವಿರೋಧ ಪಕ್ಷಗಳನ್ನು ವಿಭಜನೆ ಮಾಡುವ ಪ್ರಯತ್ನವನ್ನೇಕೆ ಮಾಡುತ್ತಿದ್ದಾರೆ? ಇದಕ್ಕಾಗಿ ಇಡಿ, ಸಿಬಿಐ ಮತ್ತು ಕೆಲವು ಸಂಸ್ಥೆಗಳನ್ನು ದೊಡ್ಡ ಪ್ರಮಾಣದಲ್ಲಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪ್ರತಿಪಕ್ಷಗಳು ಪ್ರಬಲವಾಗಿರುವ ಪ್ರತಿ ರಾಜ್ಯದಲ್ಲೂ ಪ್ರತಿಪಕ್ಷಗಳನ್ನು ಛಿದ್ರಗೊಳಿಸುವ ಪ್ರಯತ್ನಗಳನ್ನು ಅವರೇಕೆ ಮಾಡುತ್ತಿದ್ದಾರೆ? ಪ್ರತಿಪಕ್ಷಗಳ ನಾಯಕರಿಗೆ ಬೆದರಿಕೆ ಹಾಕಲಾಗುತ್ತಿದೆ. ಅವರನ್ನು ಹೆದರಿಸುತ್ತಿದ್ದಾರೆ. ಅವರನ್ನು ತಮ್ಮ ಪಕ್ಷಕ್ಕೆ ಬರುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿ ತನ್ನ ಗೆಲುವಿನ ಭರವಸೆಯಲ್ಲಿ ಇಷ್ಟೊಂದು ನಿರಾಶೆಗೊಂಡಿರುವುದೇಕೆ? ಒಂದೊಮ್ಮೆ ವಿರೋಧ ಪಕ್ಷದ ನಾಯಕರು ತಮ್ಮ ಪಕ್ಷಕ್ಕೆ ಬಂದರೆ ಅವರ ಮೇಲಿರುವ ಪ್ರಕರಣಗಳೆಲ್ಲಾ ಮುಚ್ಚಿಹೋಗುತ್ತವೆ ಎಂದು ಯೆಚೂರಿ ವ್ಯಂಗ್ಯ ಮಾತುಗಳಲ್ಲಿ ಹೇಳಿದರು. ಬಿಜೆಪಿ ಪಕ್ಷಕ್ಕೆ ಸೇರಲು ಒಪ್ಪದವರು, ಅಂದರೆ ಬಿಜೆಪಿಯವರ ಒತ್ತಡಕ್ಕೆ ಮಣಿಯದವರು ಜೈಲಿಗೆ ಹೋಗುತ್ತಾರೆ ಎಂದು ಯೆಚೂರಿ ಹೇಳಿದರು.

ಮುಕ್ತವಾದ ಚುನಾವಣೆಗಳು ಮುಖ್ಯ

370 ಸ್ಥಾನಗಳನ್ನು ಗೆಲ್ಲುವ ಬಿಜೆಪಿಯ ಗುರಿಯ ಬಗ್ಗೆ ಕೇಳಿದ ಪ್ರಶ್ನೆಗೆ ಯೆಚೂರಿ ಅವರು, “ಇದು ಚುನಾವಣೆಗಳು ಮುಕ್ತ ಮತ್ತು ನ್ಯಾಯಸಮ್ಮತವಾಗಿದೆಯೇ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಅವರು ಚುನಾವಣಾ ಬಾಂಡ್‌ಗಳು, ಪಿಎಂ ಕೇರ್ಸ್ ಫಂಡ್ ಹೀಗೆ ಎಲ್ಲಾ ರೀತಿಯಲ್ಲಿಯೂ ಬಿಜೆಪಿ ಪಕ್ಷಕ್ಕೆ ಕೋಟ್ಯಂತರ ರೂಪಾಯಿ ಬಂದಿದೆ. ಇದು ವಿಶ್ವದ ಅತ್ಯಂತ ದುಬಾರಿ ಚುನಾವಣೆಯಾಗಲಿದೆ. ಇವಿಎಂಗಳ ಬಗ್ಗೆಯೂ ಹಲವು ಅನುಮಾನಗಳಿವೆ. ವಿವಿಪ್ಯಾಟ್‌ಗಳು ಮತ್ತು ಇವಿಎಂಗಳ ಬಗ್ಗೆ ಅನುಮಾನಗಳನ್ನು ನಿವಾರಿಸಲು ನಮ್ಮ ಪಕ್ಷದ ನಿಯೋಗವು ಚುನಾವಣಾ ಆಯೋಗವನ್ನು ಭೇಟಿ ಮಾಡಲು ಯೋಚಿಸಿದೆ. ಆದರೆ ನಮ್ಮ ಮನವಿಯನ್ನು ಚುನಾವಣಾ ಆಯೋಗ ಸ್ವೀಕರಿಸಲಿಲ್ಲ ಎಂಬುದು ಬೇಸರದ ಸಂಗತಿ. ಈ ಎಲ್ಲಾ ಪ್ರಶ್ನೆಗಳು ಇಲ್ಲಿವೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಎಂದರೆ ಎಲ್ಲರಿಗೂ ಸಮಾನ ಅವಕಾಶಗಳು. ಆದರೆ ಇಲ್ಲಿ ಹಾಗಲ್ಲ. ಸರ್ಕಾರಿ ವಿಮಾನಗಳು ಇಂದಿಗೂ ದುರ್ಬಳಕೆಯಾಗುತ್ತಿವೆ. ಪ್ರಧಾನಿ ಮತ್ತು ಇತರ ನಾಯಕರನ್ನು ರಾಜಕೀಯ ಸಭೆಗಳಿಗೆ ಕರೆದೊಯ್ಯಲು ಸಶಸ್ತ್ರ ಪಡೆಗಳ ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತಿದೆ” ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಷ್ಟೆಲ್ಲಾ ನಡೆಯುತ್ತಿದ್ದರೂ ಚುನಾವಣಾ ಆಯೋಗಕ್ಕೆ ನೀತಿ ಸಂಹಿತೆ ಉಲ್ಲಂಘನೆಯಾಗುತ್ತಿದೆ ಎಂದು ಅನಿಸುತ್ತಿಲ್ಲ ಎಂದು ಯೆಚೂರಿ ಟೀಕಿಸಿದರು. ಚುನಾವಣಾ ಆಯೋಗ ಎಷ್ಟು ಮುಕ್ತವಾಗಿ ಮತ್ತು ನಿಷ್ಪಕ್ಷಪಾತವಾಗಿ ಚುನಾವಣೆಯನ್ನು ನಡೆಸುತ್ತದೆ ಎಂಬುದರ ಮೇಲೆ ಎಲ್ಲವೂ ಅವಲಂಬಿತವಾಗಿದೆ ಎಂದರು. ಆಗ ಚುನಾವಣಾ ಫಲಿತಾಂಶಗಳು ಬಿಜೆಪಿ ಈಗ ಹೇಳುವುದಕ್ಕಿಂತ ಭಿನ್ನವಾಗಿರುತ್ತವೆ ಎಂದು ಯೆಚೂರಿ ಹೇಳಿದರು.

ಕೃಪೆ: ಪ್ರಜಾಶಕ್ತಿ

ILO ಅಧ್ಯಯನ ವರದಿ: ಕಡ್ಡಾಯ ಕಾರ್ಮಿಕರ ಶೋಷಣೆಯಿಂದ ವರ್ಷಕ್ಕೆ 2.7 ಲಕ್ಷ ಕೋಟಿ ರೂಪಾಯಿ ಅಕ್ರಮ ಗಳಿಕೆ

ನವದೆಹಲಿ: ಕಾರ್ಮಿಕರನ್ನು ಕಡ್ಡಾಯ (compulsory) ದುಡಿಮೆಗೆ ಬಳಸಿಕೊಳ್ಳುವ ಮೂಲಕ ಉದ್ಯಮಗಳು ವರ್ಷಕ್ಕೆ 36 ಬಿಲಿಯನ್ ಡಾಲರ್ (2.7 ಲಕ್ಷ ಕೋಟಿ ರೂಪಾಯಿ) ಅಕ್ರಮ ಲಾಭ ಗಳಿಸುತ್ತಿವೆ ಎಂದು ಜಿನೀವಾದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಮಾರ್ಚ್ 19, 2024 ರಂದು ಬಿಡುಗಡೆ ಮಾಡಿದ ವರದಿಯೊಂದು ಹೇಳಿದೆ. ಈ ಅಕ್ರಮ ಲಾಭಗಳು 2014 ರಿಂದ ಶೇಕಡಾ 37 ರಷ್ಟು ಹೆಚ್ಚಾಗಿದೆ ಎಂದು ಸಮೀಕ್ಷೆ ಬಹಿರಂಗಪಡಿಸಿದೆ. ಸರ್ಕಾರದ ನಿರ್ಲಕ್ಷ್ಯದಿಂದ ಪ್ರತಿ ವರ್ಷ ಕಡ್ಡಾಯ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದ್ದು, ಕಾರ್ಮಿಕರ ಶೋಷಣೆಯಿಂದ ಉದ್ಯಮ ಸಂಸ್ಥೆಗಳು ಗಳಿಸುವ ಲಾಭ ಹೆಚ್ಚುತ್ತಿದೆ ಎಂದು ಆ ವರದಿ ಹೇಳಿದೆ.

ವರದಿಯ ಪ್ರಕಾರ, 2021 ರಲ್ಲಿ ವಿಶ್ವದಲ್ಲಿ 2.76 ಕೋಟಿ ಜನರು (ಪ್ರತಿ ಸಾವಿರ ಜನರಿಗೆ 3.5 ಜನರು) ಕಡ್ಡಾಯ ಕಾರ್ಮಿಕರಾಗುತ್ತಾರೆ. 2016 ಮತ್ತು 2021 ರ ನಡುವೆ, ಕಡ್ಡಾಯ ಕಾರ್ಮಿಕರ ಸಂಖ್ಯೆ 27 ಲಕ್ಷ ಹೆಚ್ಚಾಗಿದೆ.

‘ಪ್ರಾಫಿಟ್ಸ್ ಅಂಡ್ ಪ್ರಾಪರ್ಟಿ: ದಿ ಎಕನಾಮಿಕ್ಸ್ ಆಫ್ ಪೋರ್ಟೆಡ್ ಲೇಬರ್’ ಎಂಬ ಶೀರ್ಷಿಕೆಯೊಂದಿಗೆ ಈ ಸಮೀಕ್ಷೆಯನ್ನು ಭಾರತ ಹಾಗೂ ಸೌದಿ ಅರೇಬಿಯಾ ಮತ್ತು ಕತಾರ್‌ನಲ್ಲಿರುವ ಕಾರ್ಮಿಕರ ಮೇಲೆ ನಡೆಸಲಾಯಿತು. ಮಾನವ ಕಳ್ಳಸಾಗಣೆದಾರರು ಮತ್ತು ಅಪರಾಧಿಗಳು ಬಲಿಪಶುಗಳಿಂದ 10,000 ಡಾಲರ್ ಗಳಿಸುತ್ತಾರೆ ಎಂದು ಅಂದಾಜಿಸಲಾಗಿದೆ. ಒಂದು ದಶಕದ ಹಿಂದೆ ಈ ಗಳಿಕೆಯು (ಅಂದಿನ ಹಣದುಬ್ಬರಕ್ಕೆ ಸರಿಹೊಂದಿಸಲ್ಪಟ್ಟಿದೆ) 8,269 ಡಾಲರ್ ಆಗಿತ್ತು ಎಂದು ಹೇಳಿದೆ.

ಕಡ್ಡಾಯ ಕಾರ್ಮಿಕರಿಂದ ಒಟ್ಟು ವಾರ್ಷಿಕ ಅಕ್ರಮ ಲಾಭವು ಯುರೋಪ್ ಮತ್ತು ಮಧ್ಯ ಏಷ್ಯಾ ದೇಶಗಳಲ್ಲಿ 84 ಶತಕೋಟಿ ಡಾಲರ್, ಏಷ್ಯಾ ಮತ್ತು ಪೆಸಿಫಿಕ್ ದೇಶಗಳಲ್ಲಿ 62 ಶತಕೋಟಿ ಡಾಲರ್, ಅಮೆರಿಕ 52 ಶತಕೋಟಿ ಡಾಲರ್, ಆಫ್ರಿಕಾ 20 ಶತಕೋಟಿ ಡಾಲರ್ ಮತ್ತು ಅರಬ್ ದೇಶಗಳಲ್ಲಿ 18 ಶತಕೋಟಿ ಡಾಲರ್ ಇದೆ ಎಂದು ಹೇಳಲಾಗಿದೆ.

ಕೃಪೆ: ಪ್ರಜಾಶಕ್ತಿ

ಸಿಪಿಐ(ಎಂ) ಸ್ಪರ್ಧಿಸುವ 39 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

2024 ರ ಲೋಕಸಭಾ ಚುನಾವಣೆಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)– ಸಿಪಿಐ(ಎಂ) ತನ್ನ 39 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಕರ್ನಾಟಕದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರವೂ ಸೇರಿದೆ. ಈ ಕ್ಷೇತ್ರದಲ್ಲಿ ಎಂ.ಪಿ. ಮುನಿವೆಂಕಟಪ್ಪ ಸ್ಪರ್ಧಿಸಲಿದ್ದಾರೆ. ಪಕ್ಷ ಬಿಡುಗಡೆ ಮಾಡಿರುವ ಮೊದಲೆರಡು ಪಟ್ಟಿಗಳಲ್ಲಿ ಕೇರಳದ 15 ಕ್ಷೇತ್ರಗಳು, ಪಶ್ಚಿಮ ಬಂಗಾಳದ 13 ಕ್ಷೇತ್ರಗಳೂ ಸೇರಿದಂತೆ ಒಟ್ಟು 13 ರಾಜ್ಯಗಳ 39 ಕ್ಷೇತ್ರಗಳ ಹೆಸರು ಮತ್ತು ಅಭ್ಯರ್ಥಿಗಳ ಹೆಸರುಗಳಿವೆ.

ಕೇರಳದಲ್ಲಿ 15 ಕ್ಷೇತ್ರಗಳು:

1) ಕಾಸರಗೋಡು– ಎಂ.ವಿ. ಬಾಲಕೃಷ್ಣನ್ ಮಾಸ್ಟರ್
2) ಕಣ್ಣೂರು– ಎಂ.ವಿ. ಜಯರಾಜನ್
3) ವಡಕರ– ಕೆ.ಕೆ. ಶೈಲಜಾ ಟೀಚರ್ (ಮಹಿಳಾ ಮೀಸಲು)
4) ಕೊಝಿಕ್ಕೋಡ್– ಎಲಮರಮ್ ಕರೀಂ
5) ಪೊನ್ನಾನಿ– ಕೆ.ಎಸ್. ಹಂಸ
6) ಮಲಪ್ಪುರಂ– ವಿ. ವಸೀಫ್
7) ಆಲತ್ತೂರ್ (SC)– ಕೆ. ರಾಧಾಕೃಷ್ಣನ್
8) ಪಾಲಕ್ಕಾಡ್– ಎ. ವಿಜಯರಾಘವನ್
9) ಚಾಲಕುಡಿ– ಸಿ. ರವೀಂದ್ರನಾಥ್
10) ಎರ್ನಾಕುಲಂ– ಕೆಜೆ. ಶೈನ್ ಟೀಚರ್ (ಮಹಿಳಾ ಮೀಸಲು)
11) ಇಡುಕ್ಕಿ– ಜಾಯ್ಸ್ ಜಾರ್ಜ್
12) ಆಲಪ್ಪುಳ– ಎ.ಎಂ. ಆರಿಫ್
13) ಪತ್ತನಂತಿಟ್ಟ– ಟಿ.ಎಂ. ಥಾಮಸ್ ಐಸಾಕ್
14) ಕೊಲ್ಲಂ– ಎಂ. ಮುಖೇಶ್
15) ಅಟ್ಟಿಂಗಲ್– ವಿ. ಜಾಯ್

ಪಶ್ಚಿಮ ಬಂಗಾಳ– 13 ಕ್ಷೇತ್ರಗಳು

1) ಜಲ್ಪೈಗುರಿ (SC)– ದೇಬ್ರಾಜ್ ಬರ್ಮನ್
2) ಕೃಷ್ಣನಗರ– ಎಸ್.ಎಂ. ಸಾದಿ
3) ದಮ್ ದಮ್– ಸುಜನ್ ಚಕ್ರವರ್ತಿ
4) ಜಾದವ್ಪುರ್– ಸೃಜನ್ ಭಟ್ಟಾಚಾರ್ಯ
5) ಕೋಲ್ಕತ್ತಾ ದಕ್ಷಿಣ– ಸೈರಾ ಷಾ ಹಲೀಮ್ (ಮಹಿಳಾ ಮೀಸಲು)
6) ಹೌರಾ– ಸಬ್ಯಸಾಚಿ ಚಟರ್ಜಿ
7) ಶ್ರೀರಾಮಪುರ– ದೀಪಿತಾ ಧರ್ (ಮಹಿಳಾ ಮೀಸಲು)
8) ಹೂಗ್ಲಿ– ಮೊನೊದೀಪ್ ಸಿಂಗ್
9) ತಮ್ಲುಕ್– ಸಯಾನ್ ಬ್ಯಾನರ್ಜಿ
10) ಬಂಕುರಾ– ನಿಲಂಜನ್ ದಾಸ್ಗುಪ್ತ
11) ಬಿಷ್ಣುಪುರ್ (SC)– ಸಿತಾಲ್ ಕೈಬರ್ತಾ
12) ಬರ್ಧಮಾನ್ ಪುರ್ಬಾ (SC)– ನಿರಬ್ ಖಾನ್
13) ಅಸನ್ಸೋಲ್– ಜಹನಾರಾ ಖಾನ್ (ಮಹಿಳಾ ಮೀಸಲು)

ತಮಿಳುನಾಡು: (ಎರಡು ಕ್ಷೇತ್ರಗಳಲ್ಲಿ)

1) ಮಧುರೈ– ಸು ವೆಂಕಟೇಶನ್
2) ದಿಂಡಿಗಲ್– ಆರ್. ಸಚ್ಚಿದಾನಂದಂ

ಈ ಕೆಳಗಿನ ರಾಜ್ಯಗಳಲ್ಲಿ ತಲಾ ಒಂದು ಕ್ಷೇತ್ರ

1) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು–ಡಿ. ಅಯ್ಯಪ್ಪನ್
2) ಅಸ್ಸಾಂ: ಬರ್ಪೇಟಾ– ಮನೋರಂಜನ್ ತಾಲೂಕ್ದಾರ್,
3) ಬಿಹಾರ: ಖಗರಿಯಾ– ಸಂಜಯ್ ಕುಮಾರ್
4) ಜಾರ್ಖಂಡ್: ರಾಜಮಹಲ್ (ST)– ಗೋಪಿನ್ ಸೊರೆನ್
5) ಕರ್ನಾಟಕ: ಚಿಕ್ಕಬಳ್ಳಾಪುರ– ಎಂ.ಪಿ. ಮುನಿವೆಂಕಟಪ್ಪ
6) ಪಂಜಾಬ್: ಜಲಂಧರ್ (SC)– ಪುರಷೋತ್ತಮ್ ಲಾಲ್ ಬಿಲ್ಗಾ
7) ರಾಜಸ್ಥಾನ: ಸಿಕರ್– ಆಮ್ರಾ ರಾಮ್
8) ತೆಲಂಗಾಣ: ಭುವನಗಿರಿ– Md. ಜಹಾಂಗೀರ್
9) ತ್ರಿಪುರ : ತ್ರಿಪುರ ಪೂರ್ವ (ST)– ರಾಜೇಂದ್ರ ರಿಯಾಂಗ್

ಕರ್ನಾಟಕದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸಿಪಿಐ(ಎಂ)ಅಭ್ಯರ್ಥಿ ಕಣಕ್ಕೆ



18ನೇ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯು ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲು ನಿರ್ಧರಿಸಿದೆ.

ಮಾರ್ಚ್ 21, 2024 ರಂದು ಮೊದಲ ಸುತ್ತಿನಲ್ಲಿ 39 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿರುವ ಸಿಪಿಐ(ಎಂ) ಪಾಲಿಟ್ ಬ್ಯುರೋ, ಕರ್ನಾಟಕದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಸ್ಪರ್ಧೆಯನ್ನು ಘೋಷಿಸಿದೆ. ತನ್ನ ಅಭ್ಯರ್ಥಿಯನ್ನಾಗಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ಕಾರ್ಯದರ್ಶಿಯೂ ಆಗಿರುವ ಕಾಂ.ಎಂ.ಪಿ. ಮುನಿವೆಂಕಟಪ್ಪನವರನ್ನು ತನ್ನ ಹುರಿಯಾಳು ಎಂದು ಘೋಷಿಸಿದೆ.

ಲೋಕಸಭಾ ಚುನಾವಣೆಯನ್ನು ಎದುರಿಸಲು ಸಿದ್ಧತೆಗಳು ಈಗಾಗಲೇ ಕ್ಷೇತ್ರದಲ್ಲಿ ಆರಂಭಗೊಂಡಿವೆ. ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಯು. ಬಸವರಾಜ ರವರ ಮಾರ್ಗದರ್ಶನದಲ್ಲಿ ಸಿದ್ಧತೆಯ ಸಮಾಲೋಚನಾ ವಿಸ್ತೃತ ಸಭೆಯು ಇತ್ತೀಚೆಗೆ ಜರುಗಿತು.

ಕಾರ್ಮಿಕರ ಮೇಲೆ ಗೂಂಡಾ ಹಲ್ಲೆ

ಕೋಲಾರ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಅಮಾನವೀಯ ಪ್ರಕರಣ

ವಿಶ್ವಾಸ್

ಬೆವರು ಬಸಿದು ಸಂಪತ್ತನ್ನು ಸೃಷ್ಟಿಸಿಕೊಡುವ ಕಾರ್ಮಿಕರ ಮೇಲೆ ಕಾರ್ಖಾನೆಯೊಂದರ ಮಾಲಿಕರು ಗೂಂಡಾಗಳನ್ನು ಛೂಬಿಟ್ಟು ಅಮಾನವೀಯವಾಗಿ ಹಲ್ಲೆ ನಡೆಸಿರುವ ಘಟನೆ ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ನಡೆದಿದೆ. ಮಹೇಂದ್ರ ಏರೋ ಸ್ಪೇಸ್– ಇದುವೇ ದುಡಿಯುವ ಜನರ ಹಕ್ಕೊತ್ತಾಯಗಳನ್ನು ಆಲಿಸಿ ಅವರಿಗೆ ಸೂಕ್ತ ಸವಲತ್ತು ಒದಗಿಸದೆ ಬಂಡವಾಳಶಾಹಿಯ ದುರ್ಬುದ್ಧಿಯನ್ನು ತೋರಿಸಿರುವ ಕಂಪನಿಯಾಗಿದೆ. ಆಡಳಿತದ ಶಕ್ತಿ ಕೇಂದ್ರ, ರಾಜಧಾನಿ ಬೆಂಗಳೂರಿನಿಂದ ಕೂಗಳತೆ ದೂರದಲ್ಲಿರುವ ನರಸಾಪುರದಲ್ಲಿ ಈ ರೀತಿ ನಡೆದಿರುವುದು ಆತಂಕಕಾರಿಯಾಗಿದೆ.

ಕಾರ್ಮಿಕರ ಸಂಘಕ್ಕೆ ಮಾನ್ಯತೇ ನೀಡಬೇಕು, ಕಾರ್ಮಿಕ ಸಂಘದೊಂದಿಗೆ ವೇತನ ಒಪ್ಪಂದವನ್ನು ಮಾಡಿಕೊಳ್ಳಬೇಕು, ವಿನಾಕಾರಣ ವಜಾ ಮಾಡಲಾದ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಮತ್ತಿತರರ ಬೇಡಿಕೆಗಳನ್ನು ಈಡೇರಿಸುವಂತೆ ಕಾರ್ಮಿಕರು ಪ್ರತಿಭಟನೆ ನಡೆಸುತ್ತಿದ್ದರು. ಒಂದುವರೆ ವರ್ಷದಿಂದ ವೇತನ ಹೆಚ್ಚಳ ಕುರಿತ ಸಂಧಾನ ನಡೆಯುತ್ತಿದ್ದರೂ ಆಡಳಿತ ವರ್ಗ ಯಾವುದೇ ತೀರ್ಮಾನಕ್ಕೆ ಬಾರದ್ದರಿಂದ ಕಾರ್ಖಾನೆಯ ಸ್ವತಂತ್ರ ಕಾರ್ಮಿಕ ಸಂಘಟನೆ ಹಂತ ಹಂತವಾಗಿ ಚಳವಳಿಗೆ ಸಿದ್ಧವಾಗುತ್ತಿತ್ತು. ಮಾರ್ಚ್ 16ರ ಶನಿವಾರ ಕಾರ್ಖಾನೆ ಆವರಣದಲ್ಲಿ ಘೋಷಣೆ ಕೂಗಲು ಕಾರ್ಮಿಕರು ಸನ್ನದ್ಧರಾಗಿದ್ದ ವೇಳೆ ಏಕಾಏಕಿಯಾಗಿ ಹೊರಗಡೆಯಿಂದ ಬಂದ ದುಷ್ಕರ್ಮಿಗಳು ಮಾರಕ ಆಕ್ರಮಣ ನಡೆಸಿದ್ದಾರೆ.

ಈ ವೇಳೆ ಭದ್ರತೆ ಇರುವ ಕಾರ್ಖಾನೆಯ



ಮಹೀಂದ್ರಾ ಏರೋಸ್ಪೇಸ್ ನೌಕರರ ಮೇಲೆ ಆಕ್ರಮಣ ನಡೆಸಿದ ದುಷ್ಕರ್ಮಿಗಳು

ಆವರಣದಲ್ಲೇ ಮತ್ತು ಬಸ್ಸಿನಲ್ಲಿ ಕೆಲಸಕ್ಕೆ ಬರುತ್ತಿದ್ದ ಕಾರ್ಮಿಕರ ಮೇಲೆ 50ಕ್ಕೂ ಅಧಿಕ ಮಂದಿ ದಾಳಿ ನಡೆಸಿದ್ದಾರೆ. ದುಷ್ಕರ್ಮಿಗಳು ಕಾರ್ಮಿಕರನ್ನು ಮನಬಂದಂತೆ ಅಟ್ಟಾಡಿಸಿ ಹೊಡೆದು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಕಾರ್ಮಿಕರನ್ನು ಥಳಿಸುತ್ತಿದ್ದರೂ ಮಹೇಂದ್ರ ಕಾರ್ಖಾನೆಯ ಭದ್ರತಾ ಸಿಬ್ಬಂದಿ ತಡೆಯಲು ಯಾವುದೇ ಪ್ರಯತ್ನ ನಡೆಸದಿರುವುದು ಅನುಮಾನಕ್ಕೆ ಕಾರಣವಾಗಿದೆ. ಕಂಪನಿಯ ಆಡಳಿತ ವರ್ಗದವರ ಕುಮ್ಮಕ್ಕಿನಿಂದಲೇ ಹಲ್ಲೆ ನಡೆದಿರುವ ಸಂಶಯ ಮೂಡಿದೆ. ಭದ್ರತಾ ಸಿಬ್ಬಂದಿ ಪರೋಕ್ಷವಾಗಿ ಹಲ್ಲೆಕೋರರಿಗೆ ಬೆಂಬಲ ನೀಡಿದ್ದಾರೆ.

21 ಕಾರ್ಮಿಕರಿಗೆ ಗಾಯ

ಗೂಂಡಾಗಳ ದಾಳಿಯಿಂದ 21 ಮಂದಿ ಕಾರ್ಮಿಕರಿಗೆ ಗಾಯಗಳಾಗಿವೆ. ಇದರಲ್ಲಿ 7 ಮಂದಿಗೆ ತೀವ್ರವಾಗಿ ಗಾಯವಾಗಿದ್ದು ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಇಬ್ಬರು ಕಾರ್ಮಿಕರ ತಲೆಗೆ ತೀವ್ರ ರೀತಿಯಲ್ಲಿ ಗಾಯವಾಗಿದೆ.

ಶೋಷಣೆಗೆ ಲೈಸೆನ್ಸ್!

ಕಾರ್ಪೋರೇಟ್ ಪರವಾದ ನೀತಿಗಳನ್ನು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಅನುಸರಿಸುತ್ತಿರುವುದು, ಶೋಷಣೆಗೆ ಅನುಕೂಲವಾದ ಕಾರ್ಮಿಕ ಸಂಹಿತೆಗಳನ್ನು ಅದು ರೂಪಿಸಿರುವುದು ಬಂಡವಾಳಶಾಹಿಗಳ ಕೈಗೆ ದುಡಿಯುವ ಜನರ ಎಗ್ಗಿಲ್ಲದ ಶೋಷಣೆ ನಡೆಸಲು ಲೈಸೆನ್ಸ್ ಕೊಟ್ಟಂತಾಗಿದೆ.

ಸಿಐಟಿಯು ಖಂಡನೆ, ಎಚ್ಚರಿಕೆ

ಸ್ವತಂತ್ರ ಸಂಘಟನೆಯೊಂದರ ನಾಯಕತ್ವದಲ್ಲಿ ನಡೆಯುತ್ತಿರುವ ಚಳವಳಿಯನ್ನು ದಮನಿಸಲು ನಡೆಯುತ್ತಿರುವ ಪ್ರಯತ್ನಗಳಿಗೆ ಕೋಲಾರ ಜಿಲ್ಲೆಯಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್), ರಾಜ್ಯ ರೈತ ಸಂಘ ಮುಂತಾದ ಸಂಘಟನೆಗಳು ದುಡಿಯುವ ಜನರಿಗೆ ಬೆಂಬಲ ವ್ಯಕ್ತಪಡಿಸಿವೆ.

ಆಡಳಿತ ಮಂಡಳಿಯ ಕುಮ್ಮಕ್ಕಿನಿಂದ ಈ ಘಟನೆ ನಡೆದಿರುವುದು ಸ್ಪಷ್ಟವಾಗಿದೆ. ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ ಹಲ್ಲೆಕೋರರನ್ನು ತಕ್ಷಣ ಬಂಧಿಸಬೇಕು, ಇಲ್ಲದಿದ್ದರೆ ಕೈಗಾರಿಕಾ ಪ್ರಾಂಗಣದಿಂದ ಜಿಲ್ಲಾ ರಕ್ಷಣಾಧಿಕಾರಿಗಳ ಕಚೇರಿ ತನಕ ಪಾದಯಾತ್ರೆ ನಡೆಸಿ ಹೋರಾಟ ನಡೆಸಲಾಗುವುದು ಎಂದು ಸಿಐಟಿಯು ಕೋಲಾರ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ. ವಿಜಯಕೃಷ್ಣ ಮತ್ತು ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಟಿ.ಎಂ. ವೆಂಕಟೇಶ್ ಎಚ್ಚರಿಸಿದ್ದಾರೆ.

ಲೆಕ್ಕವಿಲ್ಲದ ಅನ್ಯಾಯ

ಕೋಲಾರ ಜಿಲ್ಲೆಯಲ್ಲಿ ಕೈಗಾರಿಕೆಗಳು ಬರುತ್ತಿರುವುದು ಸ್ವಾಗತಾರ್ಹವಾದರೂ, ಇಲ್ಲಿನ ಬಹುತೇಕ ಕೈಗಾರಿಕೆಗಳಲ್ಲಿ ಸರೋಜಿನಿ ಮಹಿಷಿ ವರದಿಯಂತೆ ಸ್ಥಳೀಯರಿಗೆ ಕಾಯಂ ಸ್ವರೂಪದ ಕೆಲಸಗಳನ್ನು ನೀಡುತ್ತಿಲ್ಲ. ಒಂದೆರಡು ವರ್ಷಗಳು ಮಾತ್ರ ದುಡಿಸಿಕೊಂಡು ಕಾರ್ಮಿಕರನ್ನು ಕೆಲಸದಿಂದ ವಿನಾಕಾರಣ ತೆಗೆಯುತ್ತಾರೆ. ಇದನ್ನು ವಿರೋಧಿಸಿ ಕಾರ್ಮಿಕರು ಶಾಂತಿಯುತವಾಗಿ ಪ್ರತಿಭಟನೆ ಮಾಡಲು ಅವಕಾಶ ನೀಡುತ್ತಿಲ್ಲ. ಅಲ್ಲದೇ ಕಾರ್ಮಿಕರ ಸಮಸ್ಯೆಗಳನ್ನು ಜಿಲ್ಲಾಡಳಿತ ಆಲಿಸಿ ಇತ್ಯರ್ಥ ಮಾಡದೇ ನೆಪಗಳನ್ನು ಹೇಳಿ ಮುಂದೂಡುತ್ತಿದ್ದಾರೆ ಎಂದು ಸಿಐಟಿಯು ಆಕ್ರೋಶ ವ್ಯಕ್ತಪಡಿಸಿದೆ.

ಕಾರ್ಮಿಕ ಇಲಾಖೆ ನಿದ್ದೆ

ಜಿಲ್ಲೆಯ ಕೈಗಾರಿಕೆಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡದೇ ಕಾರ್ಖಾನೆಗಳ ಆಡಳಿತ ಮಂಡಳಿಗಳು ಮನಸೋ ಇಚ್ಛೆ ವರ್ತಿಸುತ್ತಿವೆ. ಇದರಿಂದ ಕಾರ್ಮಿಕರಿಗೆ ಅತ್ಯಂತ ಕಡಿಮೆ ವೇತನ ನೀಡಲಾಗುತ್ತಿದ್ದು ಇತರ ಯಾವುದೇ ಸೌಲಭ್ಯಗಳಿಲ್ಲದೇ ಹಲವಾರು ಕಿರುಕುಳಗಳ ಮಧ್ಯೆ ದುಡಿಸಲಾಗುತ್ತಿದೆ. ಪ್ರತಿ ಮೂರು ವರ್ಷಕ್ಕೊಮ್ಮೆ ಕಾರ್ಮಿಕ ಸಂಘದೊಂದಿಗೆ ವೇತನ ಮತ್ತು ಇತರೆ ಬೇಡಿಕೆಗಳ ಕುರಿತು ಒಪ್ಪಂದ ಮಾಡಿಕೊಳ್ಳಬೇಕೆಂದು ಕಾನೂನು ಇದ್ದರೂ ಇದನ್ನು ಜಾರಿ ಮಾಡುತ್ತಿಲ್ಲ. ಆದ್ದರಿಂದ ಕಾರ್ಮಿಕ ಕಾನೂನುಗಳನ್ನು ಸಮರ್ಪಕವಾಗಿ ಜಾರಿ ಮಾಡದ ಕಾರ್ಖಾನೆಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದಿರುವ ಸಿಟು 'ಕುಂಭಕರ್ಣ ನಿದ್ದೆ'ಗೆ ಜಾರಿರುವ ಕಾರ್ಮಿಕ ಇಲಾಖೆಯನ್ನು ಆಗ್ರಹಿಸಿದೆ.

ಕಾಗಕ್ಕ–ಗುಬ್ಬಕ್ಕ ಕಥೆ

ಗೂಂಡಾಗಳನ್ನು ಛೂಬಿಟ್ಟು ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ ಆಡಳಿತ ವರ್ಗ ಕಾಗಕ್ಕ–ಗುಬ್ಬಕ್ಕ ಕಥೆ ಕಟ್ಟಿ ಕಾರ್ಮಿಕ ಸಂಘದ ವಿರುದ್ಧವೇ ದೂರು ದಾಖಲಿಸಿದೆ. ಸಂತ್ರಸ್ತ ಕಾರ್ಮಿಕರು ಕೂಡ ವೇಮಗಲ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಮೋದಿ ಸರ್ಕಾರದ ಸುಳ್ಳು, ಹಸಿಸುಳ್ಳು ಮತ್ತು ಭರ್ಜರಿ ಸುಳ್ಳು
ನಿರುದ್ಯೋಗ: ಎರಡು ಕೋಟಿ ಉದ್ಯೋಗಗಳು ಎಲ್ಲಿ?



ಅನು: ಜಿ.ಎಸ್. ಮಣಿ

ಘೋಷಣೆಗಳು

2014 ರ ಲೋಕಸಭಾ ಚುನಾವಣೆಗಳ ಪ್ರಚಾರದ ಸಂದರ್ಭದಲ್ಲಿ ಮೋದಿ ಅವರು ತಾವು ಚುನಾಯಿತರಾದರೆ ದೇಶದಲ್ಲಿ ವರ್ಷಕ್ಕೆ 2 ಕೋಟಿಯಷ್ಟು ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಭರವಸೆ ನೀಡಿದ್ದರು.

2019 ರ ಏಪ್ರಿಲ್ 27 ರಂದು ಟಿ.ವಿ. ಯಲ್ಲಿ ಮೋದಿಯವರು ಹೇಳಿದ್ದು: ‘ಉದ್ಯೋಗಿಗಳ ಪ್ರಾವಿಡೆಂಟ್ ಫಂಡ್ (ಇ.ಪಿ.ಎಫ್.ಒ.) ಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ಪ್ರತಿ ವರ್ಷ 2.5 ಕೋಟಿಯಷ್ಟು ಉದ್ಯೋಗಗಳು ಸೃಷ್ಟಿ ಆಗಿವೆ’.

ವಾಸ್ತವ

2016–17 ರಲ್ಲಿ ಇಡೀ ದೇಶದಲ್ಲಿ 41.27 ಕೋಟಿಯಷ್ಟು ಜನ ಎಲ್ಲ ಬಗೆಯ ಉದ್ಯೋಗಗಳಲ್ಲಿ– ಕೃಷಿಯಿಂದ ಹಿಡಿದು ಕೈಗಾರಿಕೆ ಮತ್ತು ಸೇವೆಗಳಲ್ಲಿ ತೊಡಗಿಸಿಕೊಂಡವರು, ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನು ಸೇರಿಸಿದ್ದರು. 2022–23 ರಲ್ಲಿ ಈ ಸಂಖ್ಯೆ 40.57 ಕೋಟಿಗೆ ಇಳಿದಿದೆ. ಅಂದರೆ ಸುಮಾರು 70 ಲಕ್ಷಗಳಷ್ಟು ಉದ್ಯೋಗಗಳ ನಷ್ಟವಾಗಿದೆ ಎಂದರ್ಥ.

> ದೇಶದಲ್ಲಿ ನೀರುದ್ಯೋಗದ ಪ್ರಮಾಣ ಮತ್ತು ಅದರಿಂದ ಯುವ ಜನತೆಯಲ್ಲಿ ಮೂಡಿರುವ ಹತಾಶೆ ಈ ಕೆಳಗಿನ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಉತ್ತರ ಪ್ರದೇಶದ ಸರಕಾರ ಫೆಬ್ರವರಿ ಮಧ್ಯದಲ್ಲಿ 60 ಸಾವಿರ ಪೊಲೀಸ್ ಹುದ್ದೆಗಳನ್ನು ಭರ್ತಿ ಮಾಡಲು ಪ್ರಕಟಣೆ ನೀಡಿತು. ಇದಕ್ಕೆ ಪ್ರತಿಕ್ರಿಯೆಯಾಗಿ 48 ಲಕ್ಷ ಯುವಜನರು ತುಂಬಿದ ಟ್ರೈನು, ಬಸ್ಸುಗಳಲ್ಲಿ ಪ್ರಯಾಣಿಸಿ, ಪ್ಲಾಟ್ ಫಾರಂಗಳಲ್ಲಿ ಮಲಗಿ ಪರೀಕ್ಷಾ ಕೇಂದ್ರಗಳಿಗೆ ಬಂದರು. ಹೇಗೆಹೇಗೋ ಪರೀಕ್ಷೆ ಬರೆದ ನಂತರ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಲೀಕ್ ಆಗಿರುವುದು ಗೊತ್ತಾಯಿತು. ಸರಕಾರ ಮತ್ತೊಮ್ಮೆ ಪರೀಕ್ಷೆ ನಡೆಸುವುದಾಗಿ ಘೋಷಿಸುವಂತೆ ಮಾಡಲು ಇವರು ಹಲವು ದಿನಗಳ ಕಾಲ ಪ್ರತಿಭಟನೆ ನಡೆಸಬೇಕಾಯಿತು. ಈ ಪ್ರಕ್ರಿಯೆಯಲ್ಲಿ ಈ ಯುವ ಜನತೆ ಎಂತಹ ನೋವು ಅನುಭವಿಸಿದರೆಂಬುದು ಊಹಾತೀತ!!

ಪ್ರತಿ ವರ್ಷ ಸರಿ ಸುಮಾರು 80 ಲಕ್ಷ ಯುವಕರು ಪ್ರಾಯ ತುಂಬಿ ಉದ್ಯೋಗಾರ್ಥಿಗಳ ಪಡೆ ಸೇರುತ್ತಾರೆ. ಉದ್ಯೋಗಗಳು ಕಡಿಮೆಯಾಗುತ್ತಿರುವ ಸ್ಥಿತಿಯಲ್ಲಿ ಈ ಯುವಜನತೆ ನಿರುದ್ಯೋಗಿಗಳ ಗುಂಪಿಗೆ ಸೇರುತ್ತಾರೆ.

ಉದ್ಯೋಗ ರಹಿತತೆ 2022–23 ರಲ್ಲಿ ಶೇ 7.6 ರಷ್ಟು ಇದೆ. ಇದರ ಅರ್ಥ ಏನೆಂದರೆ ಸುಮಾರು 3 ಕೋಟಿಯಷ್ಟು ಜನ ನೀರುದ್ಯೋಗಿಗಳು ಎಂದು ಅರ್ಥ. ಈ ಸಂಖ್ಯೆಯಲ್ಲಿ ಸಾಂಕ್ರಾಮಿಕದ ಭಯಂಕರ ದಿನಗಳಲ್ಲಿ ಏರಿದ ಶೇ. 25 ರ ನಿರುದ್ಯೋಗ ಪ್ರಮಾಣ ಸೇರಿಲ್ಲ.

ಈ ವೈಫಲ್ಯಗಳನ್ನು ಮುಚ್ಚಿಹಾಕಲು ಮೋದಿ ಮತ್ತು ಅವರ ಮಂತ್ರಿಗಳು ದಾರಿ ತಪ್ಪಿಸುವ ಅಂಕೆ ಸಂಖ್ಯೆಗಳನ್ನು ಉದುರಿಸುತ್ತಾ ಉದ್ಯೋಗ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಉದಾಹರಣೆಗೆ, ಪ್ರೋವಿಡೆಂಟ್ ಫಂಡ್ ಯೋಜನೆಯಲ್ಲಿನ ಸೇರ್ಪಡೆ ಮತ್ತು ಹೆಚ್ಚಳವು, ಹೊಸ ಉದ್ಯೋಗಗಳ ಸೃಷ್ಟಿಯ ಪರಿಣಾಮ ಎಂಬುದು ಶುದ್ಧ ಸುಳ್ಳು. ಯಾಕೆಂದರೆ ಸರಕಾರ ಈ ರೀತಿಯ ಪ್ರೋವಿಡೆಂಟ್ ಫಂಡ್ ಸೇರ್ಪಡೆಗೆ ಪ್ರೋತ್ಸಾಹ ನೀಡಿದಾಗ ಇರುವ ಉದ್ಯೋಗಿಗಳು ಫಂಡ್ ಗೆ ಸೇರ್ಪಡೆ ಆದರು. ಅಲ್ಲದೆ ಉಚ್ಚ ನ್ಯಾಯಾಲಯದ ತೀರ್ಪೊಂದು ಫಂಡ್ ಗೆ ಸೇರುವುದು ಕಡ್ಡಾಯ ಎಂದು ಹೇಳಿದಾಗ ಸೇರ್ಪಡೆ ಪ್ರಮಾಣ ಉಕ್ಕಿತು.

ಇನ್ನೊಂದು ಕೊಚ್ಚಿಕೊಳ್ಳುವಿಕೆ ಏನೆಂದರೆ ಮುದ್ರಾ ಯೋಜನೆಯಡಿ 2015–16 ಮತ್ತು 2022–23 ರ ಅವಧಿಯಲ್ಲಿ ನೀಡಿದ ಸಾಲಗಳಿಂದ ಉದ್ಯೋಗಗಳು ಹೆಚ್ಚಿದವು ಎಂಬುದು. ಆದರೆ ಈ ಸಾಲಗಳ ಸರಾಸರಿ ಗಾತ್ರ ಬರೀ 55,622 ರೂಪಾಯಿಗಳು ಮಾತ್ರ!! ಈ ಪ್ರಮಾಣದ ಸಾಲ ಹೆಚ್ಚು ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೇಗೆ ನೀಡಬಲ್ಲದು ಎಂಬ ಪ್ರಶ್ನೆಗೆ ಉತ್ತರ ಕೊಡುವವರಿಲ್ಲ!!

ಲೋಕಸಭಾ ಚುನಾವಣೆ: ಮುಖ್ಯ ಸಮಸ್ಯೆಗಳು

ಮೋದಿ ಅವರು ತಮ್ಮ ನೀತಿಗಳಿಂದಾಗಿ ಜನರು ಕೃಷಿಗಿಂತ ಹೆಚ್ಚು ಸುಭದ್ರ ಮತ್ತು ಉತ್ತಮ ಉದ್ಯೋಗಗಳನ್ನು ಉದ್ದಿಮೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಪಡೆಯುತ್ತಾರೆ ಎಂದು ಭರವಸೆ ನೀಡುತ್ತಾರೆ. ಉದ್ದಿಮೆಗಳ ಉತ್ಪಾದನೆಯಿಂದ ಒಟ್ಟು ಉತ್ಪಾದನೆಗೆ ಸಿಗುವ ಕೊಡುಗೆ ಈಗಿನ ಶೇ. 17 ರಿಂದ ಶೇ. 25 ಕ್ಕೆ ಏರುತ್ತದೆ ಎಂದು ಅವರು ಹೇಳುತ್ತಾರೆ. ಆದರೆ ವಾಸ್ತವ ಏನೆಂದರೆ ಒಟ್ಟು ಉತ್ಪಾದನೆಗೆ ಉದ್ದಿಮೆಗಳ ಉತ್ಪಾದನೆಯ ಕೊಡುಗೆ ಶೇ. 13 ಕ್ಕೆ 2020 ರ ಹೊತ್ತಿಗೆ ಕುಸಿದದ್ದು ಈಗಷ್ಟೇ ಶೇ. 17 ಕ್ಕೆ ಬರುತ್ತಿದೆ!!

ನೀರುದ್ಯೋಗದ ಸಮಸ್ಯೆ ಹೆಚ್ಚಾಗಿ ಜನರು ಹಳ್ಳಿಗಳಿಗೆ ಹೋಗಿ ಕೃಷಿಯ ಮೇಲೆ ಅವಲಂಬಿಸುವ ದುಸ್ಥಿತಿ ಉಂಟಾಗಿದೆ. ಕೃಷಿವಲಯ ಇಂತಹ ಹೊರೆಯಿಂದಾಗಿ ಕುಸಿಯುವ ಭೀತಿಯಲ್ಲಿದೆ. ಭಾರತದ ದುಡಿಮೆಯ ಶಕ್ತಿಯ ಶೇ. 46 ರಷ್ಟು ಕೃಷಿ ಅಥವಾ ಕೃಷಿ ಸಂಬಂದಿತ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಕೃಷಿ ಕೂಲಿಕಾರರು ಬಿಡಿಗಾಸಿಗಾಗಿ, ಅದೂ ಹಂಗಾಮಿನಲ್ಲಿ ಮಾತ್ರ ದುಡಿಯುವ ಪರಿಸ್ಥಿತಿ ಇದೆ!! ಇವು ನಿಜದಲ್ಲಿ ನಿರುದ್ಯೋಗದ ರೂಪಗಳೇ ಆಗಿದ್ದರೂ ಈ ಎಲ್ಲವುಗಳನ್ನು ಉದ್ಯೋಗ ಎಂದೇ ಪರಿಗಣಿಸಲಾಗುತ್ತದೆ!!

2014–15 ರಲ್ಲಿ 5.8 ಕೋಟಿ ಜನ ಗ್ರಾಮೀಣ ಉದ್ಯೋಗ ಖಾತರಿ (ಮನರೇಗ) ಯೋಜನೆಯಡಿ ಕೆಲಸ ಮಾಡುತ್ತಿದ್ದರು. ಈ ಸಂಖ್ಯೆ 2022–23 ರಲ್ಲಿ 8.8 ಕೋಟಿಗೆ ಏರಿತ್ತು. ಇವರಿಗೂ ಸರಾಸರಿ ವರ್ಷಕ್ಕೆ 50 ದಿನಗಳ ಉದ್ಯೋಗ ಮಾತ್ರ ದೊರೆಯಿತು. ಇವರಿಗೆ ದಿನಕ್ಕೆ ದೊರೆತ ಕೂಲಿ ಬರೀ 237 ರೂಪಾಯಿಗಳು!! ಇಂತಹ ಕಷ್ಟಕರ ಮನರೇಗ ಯೋಜನೆಯ ಮೇಲೆ ಅವರ ಅವಲಂಬನೆ ಉದ್ಯೋಗ ಬಿಕ್ಕಟ್ಟು ಎಂತಹ ಘೋರವಾಗಿದೆ ಎಂಬುದರ ಕೈಗನ್ನಡಿ. ಇಂತಹ ಜೀವ ಉಳಿಸುವ ಯೋಜನೆಯಡಿಯೂ ನಿಧಿಯ ಕೊರತೆಯ ನೆವದಲ್ಲಿ ಕೆಲಸದ ಲಭ್ಯತೆ ನಿರಾಕರಿಸಲಾಗುತ್ತಿದೆ ಮತ್ತು ವೇತನವನ್ನು ಆಧಾರ ಆಧಾರಿತ ಪಾವತಿ ವ್ಯವಸ್ಥೆ ಜಾರಿಯನ್ನು ಹೇರುವ ನೆಪದಲ್ಲಿ ತಡೆಹಿಡಿಯಲಾಗುತ್ತಿದೆ.

ಮಹಿಳೆಯರು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಇಲ್ಲಿ ಯಾತನೆ ಪಡುತ್ತಿದ್ದಾರೆ. ಅವರ ನಿರುದ್ಯೋಗ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ಪುರುಷರಿಗಿಂತ ಎರಡು ಪಟ್ಟು ಹೆಚ್ಚಾಗಿದ್ದರೆ, ನಗರ ಪ್ರದೇಶಗಳಲ್ಲಿ ಮೂರು ಪಟ್ಟು ಹೆಚ್ಚು!! ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ ಎಂಬ ಅಂಕೆ–ಸಂಖ್ಯೆ ಇತ್ತೀಚೆಗೆ ಬಿಡುಗಡೆ ಆಗಿದೆ. ಆದರೆ ಇವು ದಾರಿ ತಪ್ಪಿಸುವಂತಹವು. ಯಾಕೆಂದರೆ ಈ ಹೆಚ್ಚಳವನ್ನು ಮಹಿಳೆಯರ ಸ್ವ–ಉದ್ಯೋಗ ಮತ್ತು ವೇತನ ರಹಿತ ಕೆಲಸಗಳಲ್ಲಿ ತೋರಿಸಲಾಗಿದೆ. ಬೆಲೆಗಳು ಹೆಚ್ಚಿದಾಗ ತಮ್ಮ ಮತ್ತು ತಮ್ಮ ಕುಟುಂಬದ ಹೊಟ್ಟೆ ಹೊರೆಯುವ ಜವಾಬ್ದಾರಿ ಹೊರುವ ಮಹಿಳೆಯರು ಹಲವು ಚಿಕ್ಕ ಪುಟ್ಟ ಕೆಲಸಗಳನ್ನು ಮಾಡುವ ಪ್ರಯತ್ನ ಮಾಡುತ್ತಾರೆ. ನಿಜ ಅರ್ಥದಲ್ಲಿ ಕೆಲಸಗಳು ಇಲ್ಲವೇ ಇಲ್ಲ ಅಥವಾ ಇದ್ದರೆ ಅತೀ ಕಡಿಮೆ ಸಂಖ್ಯೆಯಲ್ಲಿ ಮಾತ್ರ ಎಂಬುದು ಇಂದಿನ ವಾಸ್ತವ.

ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ ವಿವಿಧ ಇಲಾಖೆಗಳಲ್ಲಿ ಹತ್ತಿರ ಹತ್ತಿರ 10 ಲಕ್ಷ ಉದ್ಯೋಗಗಳು ಖಾಲಿ ಇವೆ. ಇವು ಪೊಲೀಸ್ ಪಡೆ, ವಿಶ್ವ ವಿದ್ಯಾಲಯಗಳು, ಆಸ್ಪತ್ರೆಗಳು, ನ್ಯಾಯಾಂಗ ಬ್ಯಾಂಕುಗಳು ಇತ್ಯಾದಿ ಸಂಸ್ಥೆಗಳಲ್ಲಿ ಇವೆ. ಈ ಸಂಸ್ಥೆ/ ಇಲಾಖೆಗಳಲ್ಲಿ ಉದ್ಯೋಗ ಭರ್ತಿ ಮಾಡದೆ ಪ್ರಧಾನ ಮಂತ್ರಿಗಳು ಕೆಲವು ಸೀಮಿತ ಉದ್ಯೋಗಗಳಿಗೆ ನೇಮಕಾತಿ ಪತ್ರ ತೆಗೆದು ತೋರಿಸುವ ನಾಟಕ ಮಾಡಿದ್ದಾರೆ. ಇದು ಅರ್ಥಹೀನ ಕೆಲಸ.

ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ ರಾಜ್ಯಗಳ 41 ನೇಮಕಾತಿ ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ. ಈ ನೇಮಕಗಳಲ್ಲಿ 1.04 ಲಕ್ಷ ಉದ್ಯೋಗಗಳು ಲಭ್ಯವಿದ್ದವು. ಈ ಸೋರಿಕೆಯಿಂದಾಗಿ 1.4 ಕೋಟಿ ಉದ್ಯೋಗರಹಿತರಿಗೆ ತೊಂದರೆ ಆಗಿದೆ!! ಹಲವರು ಈ ಪ್ರಕ್ರಿಯೆ ಮುಂದುವರೆಯುವುದೆಂದು ಕಾಯುತ್ತಿದ್ದಾರೆ.

ರಾಜ್ಯ ಸರ್ಕಾರಗಳೂ (ಕೇರಳ ಹೊರತುಪಡಿಸಿ) ಖಾಲಿ ಹುದ್ದೆಗಳನ್ನು ತುಂಬುತ್ತಿಲ್ಲ.

ಮೋದಿಯವರ ಶಿಕ್ಷಣ, ಆರೋಗ್ಯ ಮತ್ತು ಇತರ ಸೇವೆಗಳ ಖಾಸಗಿಕರಣ ಮತ್ತು ಸಾರ್ವಜನಿಕ ಉದ್ದಿಮೆಗಳ ಮಾರಾಟ ಉದ್ಯೋಗಗಳನ್ನು ಕಡಿಮೆ ಮಾಡಿವೆ. ಅಷ್ಟೇ ಅಲ್ಲ, ಅವು ಅತೀ ಕಡಿಮೆ ವೇತನ ಮತ್ತು ಯಾವುದೇ ಸವಲತ್ತುಗಳಿಲ್ಲದ ಗುತ್ತಿಗೆ ಉದ್ಯೋಗಗಳನ್ನೂ ಹೆಚ್ಚು ಮಾಡಿದೆ!!

ಇಂತಹ ಸ್ಥಿತಿ ಸುಧಾರಿಸಲು ಏನು ಮಾಡಬಹುದು?

ಸಾರ್ವಜನಿಕ ಹೂಡಿಕೆಯನ್ನು ಸರಕಾರ ಹೆಚ್ಚಿಸಬೇಕು. ಅದು ಕೆಳಗಿನವುಗಳಿಗೆ ಬೆಂಬಲ ನೀಡಬೇಕು.

- ಕನಿಷ್ಟ ಬೆಂಬಲ ಬೆಲೆ ನೀಡುವ ಮೂಲಕ ರೈತರಿಗೆ ಬೆಂಬಲ ನೀಡಬೇಕು.
- ಸುಭದ್ರ ಉದ್ಯೋಗ ಮತ್ತು ಉತ್ತಮ ವೇತನ ನೀಡುವ ಮೂಲಕ ಔದ್ಯೋಗಿಕ ಕಾರ್ಮಿಕರನ್ನು ಬೆಂಬಲಿಸಬೇಕು.
- ಕನಿಷ್ಟ ವೇತನ ಖಾತರಿ ಮತ್ತು ಹೆಚ್ಚಿನ ಉದ್ಯೋಗಗಳನ್ನು ಮನರೆಗ ಯೋಜನೆಯಡಿ ನೀಡುವ ಮೂಲಕ ಕೃಷಿ ಕೂಲಿ ಕಾರ್ಮಿಕರನ್ನು ಬೆಂಬಲಿಸಬೇಕು.
- ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳನ್ನು ಸರಕಾರ ಬೆಂಬಲಿಸಬೇಕು. ಯಾಕೆಂದರೆ ಅವು ಉದ್ದಿಮೆಗಳಲ್ಲಿನ ಶೇ. 65 ರಷ್ಟು ಉದ್ಯೋಗಗಳನ್ನು ನೀಡುತ್ತವೆ. ಜೊತೆಗೆ ಸಾರ್ವಜನಿಕ ಉದ್ದಿಮೆಗಳನ್ನು ಬೆಂಬಲಿಸಬೇಕು.
- ವಿದೇಶಿ ಮತ್ತು ದೇಶೀ ಕಾರ್ಪೊರೇಟ್ ಏಕಸ್ವಾಮ್ಯ ಬಂಡವಾಳವನ್ನು ಹದ್ದು ಬಸ್ತಿಗೆ ಒಳಪಡಿಸಬೇಕು.

ಸರಕಾರ ಖಾಸಗಿಕರಣದ ನೀತಿಗಳನ್ನು ಕೈಬಿಡಬೇಕು. ಖಾಸಗಿ ವಲಯ ಜನರ ಸಮಸ್ಯೆಗಳಿಗೆ ಪರಿಹಾರ ನೀಡಲಾರದು.

> ನಿರುದ್ಯೋಗಿಗಳ ಹತಾಶೆ ಮತ್ತು ಸರ್ಕಾರದ ನಿರ್ಲಕ್ಷ್ಯ ಇತ್ತೀಚೆಗೆ 10 ಸಾವಿರ ಜನ ಕಟ್ಟಡ ಕಾರ್ಮಿಕರು ಇಸ್ರೇಲ್ ನ ಯುದ್ಧ ಭೂಮಿಯಲ್ಲಿ ಕೆಲಸ ಮಾಡಲು ಹೋದ ಫೆಬ್ರವರಿ ಮಧ್ಯದ ಘಟನೆ ಎತ್ತಿ ತೋರಿಸುತ್ತದೆ. ಇವರು ಬಹಿರಂಗವಾಗಿಯೇ ತಾವು ಈ ರೀತಿಯ ಅಪಾಯಕಾರಿ ನಿರ್ಧಾರ ತೆಗೆದುಕೊಳ್ಳುವ ಅನಿವಾರ್ಯತೆ ಇದೆ ಎಂಬ ನಿಲುವು ತಳೆದರು. ಸರಕಾರ ಈ ಜನರ ಜೀವವಿಮೆ ಮಾಡಿಸುವ ಗೋಜಿಗೂ ಹೋಗಲಿಲ್ಲ. ಇಂತಹ ಉದ್ಯೋಗ ಭರ್ತಿ(ನೇಮಕಾತಿ) ಘಟನೆ ಬಿ.ಜೆ.ಪಿ. ಆಡಳಿತದಲ್ಲಿರುವ ಉತ್ತರ ಪ್ರದೇಶ ರಾಜ್ಯದಲ್ಲಿ ನಡೆಯಿತು!!

ಆಕರಗಳು: ಸಿ.ಎಮ್.ಐ.ಇ; 2011 ರ ಜನಗಣತಿ; ಪಿ.ಎಲ್.ಎಫ್.ಎಸ್ 2022–23; ಎಮ್.ಒ.ಎಸ್.ಪಿ.ಐ; ಮುದ್ರಾ ಯೋಜನೆ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳ ಸಚಿವಾಲಯ; ಉದ್ಯೋಗಿಗಳ ಪ್ರೋವಿಡೆಂಟ್ ಫಂಡ್ ಸಂಸ್ಥೆ; ಪಾರ್ಲಿಮೆಂಟ್ ನಲ್ಲಿನ ಪ್ರಶ್ನೆಗಳು; ಇಂಡಿಯನ್ ಎಕ್ಸ್ ಪ್ರೆಸ್.

ನಿರುದ್ಯೋಗದ ವಿರುದ್ಧ ಹೋರಾಡಿ!
ಬಿ.ಜೆ.ಪಿ. ಯನ್ನು ಸೋಲಿಸಿ

ಬಯಲಿಗೆ ಬಂದ ಹಿಂದೂತ್ವ-ಕಾರ್ಪೋರೇಟ್ ನಂಟು

ಪ್ರಕಾಶ್ ಕಾರತ್

ಚುನಾವಣಾ ಬಾಂಡ್ ಯೋಜನೆ ಕುರಿತು ಇದುವರೆಗೆ ಬಿಡುಗಡೆ ಮಾಡಲಾದ ವಿವರಗಳು ದೇಶದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಕೋಮುವಾದಿ-ಕಾರ್ಪೋರೇಟ್, ಅಥವಾ ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ಹಿಂದೂತ್ವ-ಕಾರ್ಪೊರೇಟ್ ಅಪವಿತ್ರ ಮೈತ್ರಿಯನ್ನು ಎದ್ದು ಕಾಣುವಂತೆ ದೃಢಪಡಿಸಿವೆ.



ಬಹಿರಂಗವಾದ ದತ್ತಾಂಶಗಳ ಪ್ರಕಾರ, ಬಿಜೆಪಿ ಬಾಂಡ್ ಯೋಜನೆಯ ಪ್ರಮುಖ ಫಲಾನುಭವಿಯಾಗಿದೆ. 2018ರಲ್ಲಿ ಯೋಜನೆ ಆರಂಭವಾದಾಗಿನಿಂದ ಬಿಜೆಪಿ 8,252 ಕೋಟಿ ರೂಪಾಯಿಗಳನ್ನು ಪಡೆದಿದೆ. ಇದು ಬಾಂಡ್‌ಗಳನ್ನು ನಗದೀಕರಿಸಿದ ಒಟ್ಟು ಮೊತ್ತದಲ್ಲಿ ಶೇಕಡ 50ರಷ್ಟು ಆಗುತ್ತದೆ. ಇದು, ಮೋದಿ ಆಡಳಿತ ಕಾನೂನುಬದ್ಧ ಗೊಳಿಸಿರುವ ಆಳುವ ಪಕ್ಷ ಮತ್ತು ಕಾರ್ಪೊರೇಟ್‌ಗಳ ನಡುವಿನ ಸ್ನೇಹಶೀಲ ಬಾಂಧವ್ಯವನ್ನು ತೋರಿಸುತ್ತದೆ. ಗುತ್ತಿಗೆಗಳ ಮೇಲೆ ಲಂಚ ಕೊಡುವುದು ಮತ್ತು ಲಾಭದ ಮೇಲೆ ಕಮಿಷನ್ ನೀಡುವುದು, ಕಾರ್ಪೊರೇಟ್ ಹಾಗೂ ಬಂಡವಾಳಶಾಹಿ ಸರಕಾರದ ನಡುವಿನ ಸಿದ್ಧ ವ್ಯವಹಾರವಾಗಿದೆ. ಇದು ರಾಜಕೀಯ ಭ್ರಷ್ಟಾಚಾರವಲ್ಲದೆ ಇನ್ನೇನೂ ಅಲ್ಲ. ಇಂಥ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಲು ಹಾಗೂ ನ್ಯಾಯಸಮ್ಮತಗೊಳಿಸಲು ಮೋದಿ ಸರಕಾರದ ಬುದ್ಧಿವಂತಿಕೆಯೇ ಬೇಕು.

ಮುಗ್ಧ ಬಲಿಪಶುಗಳಲ್ಲ

ಕಾರ್ಪೊರೇಟ್ ಕಂಪನಿಗಳು ಬಲವಂತದ ವಸೂಲಿಗೆ ಮುಗ್ಧ ಬಲಿಪಶುಗಳು ಎಂದು ಬಿಂಬಿಸುವುದು ತಪ್ಪಾಗುತ್ತದೆ. ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ಕೊಡಲಾದ ಹಣದ ಬಹುತೇಕ ಭಾಗ ಲಂಚ ಮತ್ತು ಕಮಿಷನ್ ವಿಭಾಗಕ್ಕೆ ಬರುತ್ತದೆ. ಭವಿಷ್ಯದಲ್ಲಿ ಅನುಕೂಲವಾಗಲೆಂದು ವಿಶ್ವಾಸ ಗಳಿಸಿಕೊಳ್ಳಲು ಕೂಡ ಅವುಗಳನ್ನು ನೀಡಲಾಗಿದೆ. ಹೈದರಾಬಾದ್ ಮೂಲದ ಮೇಘಾ ಇಂಜಿನಿಯರಿಂಗ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ (ಎಂಇಐಎಲ್) ನೀಡಿದ ಬಹುತೇಕ ಬಾಂಡ್ ಈ ವಿಭಾಗದಲ್ಲಿ ಬರುತ್ತದೆ. ಉದಾಹರಣೆಗೆ, ಥಾಣೆ-ಬೋರಿವಿಲಿ ಸುರಂಗ ಯೋಜನೆಯ ಎರಡು ಪ್ರತ್ಯೇಕ ಪ್ಯಾಕೇಜ್‌ಗಳು ಎಂಇಐಎಲ್ ಪಾಲಾಗಿವೆ. ಅವುಗಳ ಒಟ್ಟು ಬಿಡ್ ಮೊತ್ತ 14,400 ಕೋಟಿ ರೂಪಾಯಿ. ಗುತ್ತಿಗೆ ಸಿಗುವುದಕ್ಕೂ ಕೆಲವು ತಿಂಗಳ ಮುಂಚೆ ಚುನಾವಣಾ ಬಾಂಡ್ ಮೂಲಕ ಈ ಕಂಪನಿ ದೊಡ್ಡ ಮೊತ್ತದ ಹಣವನ್ನು ಪಾವತಿಸಿತ್ತು. ಝೋಝಿಲಾ ರಸ್ತೆ ಸುರಂಗ ಯೋಜನೆಗೆ ಕೂಡ ಇದೇ ಮಾದರಿ ಅನ್ವಯವಾಗುತ್ತದೆ. ಅರಣ್ಯ ಪ್ರದೇಶಗಳಲ್ಲಿ ಯೋಜನೆಗಳಿಗೆ ಅನುಮತಿ ಸಿಕ್ಕ ಕೆಲವು ಗಣಿಗಾರಿಕೆ ಕಂಪನಿಗಳು ಆಳುವ ಪಕ್ಷಕ್ಕೆ ಚುನಾವಣಾ ಬಾಂಡ್‌ಗಳ ಮೂಲಕ ಹಣವನ್ನು ಕೊಟ್ಟಿವೆ.

ಔಷಧಿ ಕಂಪನಿ ಕ್ಷೇತ್ರ

ಚುನಾವಣಾ ಬಾಂಡ್ ಖರೀದಿಸಿದ ಅನೇಕ ಕಂಪನಿಗಳನ್ನು ಹೊಂದಿದ ಇನ್ನೊಂದು ವಲಯವೆಂದರೆ ಅದು ಔಷಧಿ ತಯಾರಿಕಾ (ಫಾರ್ಮಾಸ್ಯುಟಿಕಲ್) ವಲಯ. ಇಲ್ಲಿ, 35 ಔಷಧ ಕಂಪನಿಗಳು ಸುಮಾರು 1,000 ಕೋಟಿ ರೂಪಾಯಿಗಳನ್ನು ಬಾಂಡ್ ಮೂಲಕ ಬಿಜೆಪಿಗೆ ಕಾಣಿಕೆ ನೀಡಿವೆ. ಈ ಪೈಕಿ ಏಳು ಕಂಪನಿಗಳು ಬಾಂಡ್‌ಗಳನ್ನು ಖರೀದಿಸುವ ವೇಳೆ, ಕಳಪೆ ಗುಣಮಟ್ಟದ ಮದ್ದುಗಳನ್ನು ತಯಾರಿಸಿದ ಆರೋಪಕ್ಕಾಗಿ ತನಿಖೆ ಎದುರಿಸುತ್ತಿದ್ದವು ಎಂದು ಗುರುತಿಸಲಾಗಿದೆ. ಬಹುಶಃ ಈ ಕಾರಣದಿಂದಲೇ ಕಳಪೆ ಔಷಧಿ ತಯಾರಿಸಿದರೂ ಈ ಕಂಪನಿಗಳ ವಿರುದ್ಧ ಯಾವುದೇ ಕಾನೂನು ಕ್ರಮವನ್ನು ಜರುಗಿಸಲಾಗಿಲ್ಲ ಎಂದೆನಿಸುತ್ತದೆ.

ಕೊಡು-ಕೊಳ್ಳುವಿಕೆ


ಇವುಗಳು ಕೊಡು-ಕೊಳ್ಳುವಿಕೆಯ ಅನಾಮಿಕ ಬಾಂಡ್‌ನ ಕೆಲವು ಉದಾಹರಣೆಗಳಷ್ಟೇ ಆಗಿದ್ದು ಮೋದಿ ಸರಕಾರ ನಿಧಿ ಸಂಗ್ರಹದ ಈ ತಂತ್ರಕ್ಕೆ ಇನ್ನೂ ಒಂದು ಕರಾಳ ಆಯಾಮವನ್ನು ಒದಗಿಸಿದೆ. ರಾಜಕೀಯ ವಿರೋಧಿಗಳು, ಸ್ವತಂತ್ರ ಮಾಧ್ಯಮ ಮತ್ತು ನಾಗರಿಕ ಸಮಾಜದ ಸಂಘಟನೆಗಳನ್ನು ಟಾರ್ಗೆಟ್ ಮಾಡಲು ಅನುಷ್ಠಾನ ನಿರ್ದೇಶನಾಲಯ (ಇ.ಡಿ.), ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಆದಾಯ ತೆರಿಗೆ ಇಲಾಖೆಯಂಥ ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಂಡಿರುವುದನ್ನು ನಾವು ಈಗಾಗಲೇ ಕಂಡಿದ್ದೇವೆ. ಹಣದ ಲೂಟಿಗಾಗಿ ಈ ಸಂಸ್ಥೆಗಳ ಇಂಥ ಕಾನೂನುಬಾಹಿರ ಬಳಕೆಯನ್ನು ಮಾಡಲಾಗಿದೆ. ಕಾರ್ಪೊರೇಟ್ ಕಂಪನಿಗಳ ಅಕ್ರಮಗಳನ್ನು-ಅವು ನಿಜವೋ ಕಪೋಲಕಲ್ಪಿತವೋ ಅದು ಬೇರೆ ವಿಷಯ- ನೆಪವಾಗಿಟ್ಟುಕೊಂಡು ದಾಳಿ, ಶೋಧ, ತನಿಖೆ, ಹಣ ಹಾಗೂ ಆಸ್ತಿಪಾಸ್ತಿ ಮುಟ್ಟುಗೋಲು ಮುಂತಾದ ಕ್ರಮ ಜರುಗಿಸಲಾಗಿದೆ. ನಂತರ, ಇಂಥ ಕಂಪನಿಗಳ ಮಾಲಿಕರು ಚುನಾವಣಾ ಬಾಂಡ್‌ಗಳನ್ನು ಖರೀದಿಸುವಂತೆ ಹಾಗೂ ಕೇಂದ್ರದ ಆಳುವ ಪಕ್ಷಕ್ಕೆ ಉದಾರವಾಗಿ ದೇಣಿಗೆ ನೀಡುವಂತೆ ಬಲವಂತಪಡಿಸಲಾಗಿದೆ. ಹಣದ ಈ ರೀತಿಯ ಲೂಟಿಯಲ್ಲಿ ಎರಡು ಅಂಶಗಳಿವೆ: ಕಾನೂನುಬಾಹಿರ ಬೆದರಿಕೆ ಮತ್ತು ಬ್ಲ್ಯಾಕ್‌ಮೇಲ್ ಮೂಲಕ ಹಣ ದೋಚುವ ಅಪರಾಧ ಒಂದಾಗಿದೆ. ಇದರಲ್ಲಿ ಸರಕಾರಿ ಸಂಸ್ಥೆಗಳು ಶಾಮೀಲಾಗಿರುತ್ತವೆ. ಈಗಾಗಲೇ ಕಾನೂನುಗಳನ್ನು ಉಲ್ಲಂಘಿಸಿದವರು ಹಾಗೂ ಗಂಭೀರ ಅಕ್ರಮಗಳನ್ನು ಮಾಡಿದವರು ರುಷುವತ್ತು ನೀಡಿ ತಪ್ಪಿಸಿಕೊಳ್ಳಲು ಅವಕಾಶ ಕೊಟ್ಟಿರುವುದು ಇನ್ನೊಂದು ವಿಚಾರವಾಗಿದೆ.

ಪಾರದರ್ಶಕತೆಯ ಕುಹಕ

ಪಾರದರ್ಶಕತೆ ಮತ್ತು ಶುದ್ಧ ಹಣ ರಾಜಕೀಯವನ್ನು ಪ್ರವೇಶಿಸಲು ಅವಕಾಶ ನೀಡಲಾಗಿದೆ ಎಂಬುದು ಕೇವಲ ಕುಹಕದ ಬಡಾಯಿಗಳು ಎಂಬುದಕ್ಕೆ ಸಾಕಷ್ಟು ಪುರಾವೆಗಳು ಸಿಕ್ಕಿವೆ. ದೊಡ್ಡ ಪ್ರಮಾಣದ ಕಪ್ಪು ಹಣವನ್ನು ತರಲು ಹಾಗೂ ಹಣಕಾಸಿನ ದುರ್ಬಳಕೆಗಾಗಿ ಶೆಲ್ ಕಂಪನಿಗಳನ್ನು ಬಳಸಿರುವುದು ಕಂಡು ಬಂದಿದೆ. ಉದಾಹರಣೆಗೆ, ಲಾಭ ಮಾಡದ ಕೆಲವು ಕಂಪನಿಗಳು ಕೂಡ ಬಾಂಡ್‌ಗಳ ಮುಖೇನ ದೊಡ್ಡ ಪ್ರಮಾಣದಲ್ಲಿ ಕಾಣಿಕೆ ಕೊಟ್ಟಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಕೆಲವು ಕಂಪನಿಗಳಂತೂ ತಾವು ಗಳಿಸಿದ ಲಾಭಕ್ಕಿಂತ ಹೆಚ್ಚಿನ ಹಣವನ್ನು ದೇಣಿಗೆ ಕೊಟ್ಟಿವೆ.

ಹಿಂದುತ್ವ ಕೋಮುವಾದಿ ಕೂಟದ ಉತ್ಪನ್ನ

ಎಲೆಕ್ಟೋರಲ್ ಬಾಂಡ್ ಯೋಜನೆಯು ಹಿಂದುತ್ವ ಕೋಮುವಾದ ಅಪವಿತ್ರ ಕೂಟದ ಉತ್ಪನ್ನ ಎನ್ನುವುದು ಒಂದೆಡೆ ವ್ಯಾಪಾರೋದ್ಯಮ ಸಂಘಟನೆಗಳು ಹಾಗೂ ಇನ್ನೊಂದೆಡೆ



ಆರ್‌ಎಸ್‌ಎಸ್‌ನ ಪ್ರತಿಕ್ರಿಯೆಗಳಿಂದ ಸ್ಪಷ್ಟವಾಗುತ್ತದೆ. ಮೂರು ಪ್ರಮುಖ ಕೈಗಾರಿಕೋದ್ಯಮ ಸಂಸ್ಥೆಗಳಾದ ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಫಿಕ್ಕಿ), ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರಿ (ಸಿಐಐ) ಮತ್ತು ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಆಫ್ ಇಂಡಿಯಾ (ಅಸೋಚಂ) ಇವುಗಳು ಜಂಟಿಯಾಗಿ ಸುಪ್ರೀಂ ಕೋರ್ಟ್‌ಗೆ ಒಂದು ಅರ್ಜಿ ಸಲ್ಲಿಸಲು ಮುಂದಾಗಿವೆ.

ಕಳ್ಳರ ಮನಸ್ಸು ಹುಳ್ಳುಳ್ಳಗೆ!

ಚುನಾವಣಾ ಬಾಂಡ್‌ಗಳ ವಿಶಿಷ್ಟ ಗುರುತು ಸಂಖ್ಯೆಗಳನ್ನು ಬಹಿರಂಗ ಪಡಿಸುವುದನ್ನು ತಡೆಯುವುದು ಅವುಗಳ ಉದ್ದೇಶವಾಗಿದೆ. ಸಂಖ್ಯೆ ಬಹಿರಂಗಪಡಿಸುವುದರಿಂದ "ಗೋಪ್ಯತೆಯ ಒಪ್ಪಂದಗಳ ಉಲ್ಲಂಘನೆಯಾಗುತ್ತದೆ" ಎನ್ನುವುದು ಅವುಗಳ ವಾದವಾಗಿದೆ. ಕಾನೂನಿನ ಆಡಳಿತವನ್ನು ಅದು ದುರ್ಬಲಗೊಳಿಸುತ್ತದೆ ಹಾಗೂ ಕೈಗಾರಿಕಾ ಹಿತಗಳ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತವೆ ಎಂದಿವೆ. ವಿವಿಧ ಕೊಡು-ಕೊಳ್ಳುವಿಕೆ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಕಾರ್ಪೊರೇಟ್ ಕಂಪನಿಗಳು ಕಳ್ಳತನದಲ್ಲಿ ನಡೆದ ತಮ್ಮ ವ್ಯವಹಾರಗಳು ಬಯಲಿಗೆ ಬರುವುದನ್ನು ಬಯಸುವುದಿಲ್ಲ. ಆದರೆ, ಅವುಗಳ ಅರ್ಜಿಯನ್ನು ಪುರಸ್ಕರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿರುವುದು ಒಂದು ಮಹತ್ವದ ಬೆಳವಣಿಗೆಯಾಗಿದೆ.

ಆರೆಸ್ಸೆಸ್ ಸಮರ್ಥನೆ

ಆರ್‌ಎಸ್‌ಎಸ್ ಬಗ್ಗೆ ಹೇಳುವುದಾದರೆ, ಅಖಿಲ ಭಾರತೀಯ ಪ್ರತಿನಿಧಿ ಸಭಾದ ಮೂರು ದಿನಗಳ ಸಭೆಯ ನಂತರ ಮಾತನಾಡಿದ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ, ಚುನಾವಣಾ ಬಾಂಡ್‌ಗಳನ್ನು ಸಮರ್ಥಿಸಿಕೊಂಡಿದ್ದಾರೆ. 'ಚುನಾವಣಾ ಬಾಂಡ್ ತಡೆಗಳು ಹಾಗೂ ಸಮತೋಲದೊಂದಿಗೆ ಮಾಡಲಾದ ಒಂದು ಪ್ರಯೋಗವಾಗಿದೆ. ಅದನ್ನು ಇದ್ದಕ್ಕಿದ್ದಂತೆ ಒಂದೇ ದಿನದಲ್ಲಿ ಹಠಾತ್ತನೆ ಪರಿಚಯಿಸಲಾದ ಯೋಜನೆಯಲ್ಲ' ಎಂದವರು ಹೇಳಿದ್ದಾರೆ. 'ಬದಲಾವಣೆ ತರಲು ಹೋದಾಗಲೆಲ್ಲ ಪ್ರಶ್ನೆಗಳನ್ನು ಎತ್ತಲಾಗುತ್ತದೆ. ಇವಿಎಂ ಪರಿಚಯಿಸಿದಾಗಲೂ ಪ್ರಶ್ನೆಗಳು ಎದುರಾಗಿದ್ದವು' ಎಂದು ಅವರು ಸಮಜಾಯಿಷಿ ಕೊಟ್ಟಿದ್ದಾರೆ! ಈ ರೀತಿಯಾಗಿ, ಆರೆಸ್ಸೆಸ್‌ಗೆ ಚುನಾವಣಾ ಬಾಂಡ್ ಒಂದು ಅಮೂಲ್ಯ ಪ್ರಯೋಗವಾಗಿದೆ ಹಾಗೂ ಅದನ್ನು ಬಲಪಡಿಸಬೇಕಾಗಿದೆ. ಹಿಂದೂತ್ವ ಯೋಜನೆಯಲ್ಲಿ ಕಾರ್ಪೊರೇಟ್‌ಗಳು ಪಾಲುದಾರರು ಎನ್ನುವುದನ್ನು ಆರ್‌ಎಸ್‌ಎಸ್ ಈ ಮೂಲಕ ಸೂಚ್ಯವಾಗಿ ಒಪ್ಪಿಕೊಂಡಂತಾಗಿದೆ.

ವಿಶಿಷ್ಟ ಸಂಖ್ಯಾಕ್ಷರ (ಅಲ್ಫಾನ್ಯೂಮರಿಕ್) ಸಹಿತ ಎಲ್ಲಾ ಚುನಾವಣಾ ಬಾಂಡ್‌ಗಳ ಎಲ್ಲಾ ವಿವರಗಳನ್ನು ಮಾರ್ಚ್ 21ರೊಳಗೆ ಸಲ್ಲಿಸುವಂತೆ ಭಾರತೀಯ ಸ್ಟೇಟ್ ಬ್ಯಾಂಕ್‌ಗೆ (ಎಸ್‌ಬಿಐ) ಸುಪ್ರೀಂ ಕೋರ್ಟ್ ಆದೇಶಿಸಿದೆ. (ಈ ಆದೇಶದ ಪ್ರಕಾರ ಮಾರ್ಚ್ 21ರಂದು ಚುನಾವಣಾ ಆಯೋಗಕ್ಕೆ ಎಸ್‌ಬಿಐ ವಿವರಗಳನನ್ನ ಸಲ್ಲಿಸಿದೆ). ಬಾಂಡ್‌ಗಳ ಈ ಅಲ್ಫಾನ್ಯೂಮರಿಕ್ ಕೋಡ್‌ಅನ್ನು ನಗದೀಕರಿಸಲಾಗಿರುವುದಕ್ಕೆ ಹೋಲಿಸಿದಾಗ ಯಾರು ಯಾವ ಪಕ್ಷಕ್ಕೆ ಯಾವಾಗ ಎಷ್ಟು ಹಣ ಕೊಟ್ಟರು ಎನ್ನುವುದು ನಿಖರವಾಗಿ ತಿಳಿಯುತ್ತದೆ. ಇದು ಹಿಂದೂತ್ವ ಪಕ್ಷ ಮತ್ತು ಕಾರ್ಪೊರೇಟ್‌ಗಳ ನಡುವಿನ ಆಳವಾದ ಅಪವಿತ್ರ ಮೈತ್ರಿಯನ್ನು ಇನ್ನಷ್ಟು ದೃಢಪಡಿಸುತ್ತದೆ ಅಷ್ಟೇ.

ವಿಚಾರಣೆ ಅಗತ್ಯ

ಹಾಗಾದರೆ ಸಂಭಾವ್ಯ ಅಪರಾಧಗಳು, ಭ್ರಷ್ಟ ಲಂಚ, ಹಣಕಾಸು ದುರ್ಬಳಕೆ ಮತ್ತು ಬ್ಲ್ಯಾಕ್‌ಮೇಲ್ ಹಾಗೂ ಬಲವಂತದಿಂದ ಮಾಡಲಾದ ಸುಲಿಗೆ ಬಗೆಗಿನ ಮಾಹಿತಿಯ ಕಣಜವನ್ನು ಹೇಗೆ ನಿರ್ವಹಿಸುವುದು ಎನ್ನುವ ಪ್ರಶ್ನೆ ಎದುರಾಗುತ್ತದೆ. ನ್ಯಾಯಾಲಯದ ಉಸ್ತುವಾರಿಯಲ್ಲಿ ಒಂದು ತನಿಖೆಯನ್ನು ನಡೆಸುವುದೇ ಉಳಿದಿರುವ ಏಕೈಕ ಮಾರ್ಗವಾಗಿದೆ. ಅದರ ಆಧಾರದಲ್ಲಿ ಅಗತ್ಯವಾದ ಕಡೆ ಕಾನೂನು ಕ್ರಮಗಳನ್ನು ಆರಂಭಿಸಬೇಕು.

ಅನು: ವಿಶ್ವ

ಚುನಾವಣೆಯ ಅಧಿಸೂಚನೆ ಬಂದಾಗ ಅದನ್ನು ನಡೆಸಬೇಕಾದ ಚುನಾವಣಾ ಆಯೋಗವೇ ಅನುಮಾನಾಸ್ಪದ ಸ್ಥಿತಿಯಲ್ಲಿ ಸಿಕ್ಕಿಹಾಕಿಕೊಳ್ಳುವುದು ಭಾರತ ದೇಶದಲ್ಲಿ ಒಂದು ಅತಿಯಾದ ಪ್ರಸಂಗವಾಗಿದೆ. ದೇಶದಲ್ಲಿ ಚುನಾವಣಾ ಅಕ್ರಮಗಳು, ಕುತಂತ್ರಗಳು, ಒತ್ತಡಗಳು ಹೊಸದಲ್ಲದಿದ್ದರೂ ಮೂಲ ಸಾಂವಿಧಾನಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿದೆ. ಈ ಕ್ರಮದಲ್ಲಿ, ಸುಪ್ರೀಂ ಕೋರ್ಟ್ ಪೀಠದ ಆದೇಶದ ಸೂಚನೆಗಳನ್ನು ಕೂಡಾ ನಿರ್ಲಕ್ಷ್ಯ ಮಾಡಲಾಗಿದೆ, ಚುನಾವಣೆಯ ಮೇಲೆ ಪ್ರಭಾವ ಬೀರುವ ರಹಸ್ಯ ದೇಣಿಗೆಯ ವಿಷಯ ಈ ಸಮಯದಲ್ಲಿಯೇ ಬಂದಿತು, ಅಕ್ಷರಶಃ ಒಬ್ಬರು ಮಾಜಿ ರಾಷ್ಟ್ರಪತಿ ನೇತೃತ್ವದಲ್ಲಿ ಚುನಾವಣೆಯ ಮೂಲ ತತ್ವಗಳನ್ನು ಇಷ್ಟಾನುಸಾರ ಬದಲಾಯಿಸಲು ಅಸಾಂವಿಧಾನಿಕ ಶಿಫಾರಸುಗಳನ್ನು ಪ್ರಸ್ತುತ ರಾಷ್ಟ್ರಪತಿಗಳು ಅಂಗೀಕರಿಸಿರುವುದು, ಈ ಎಲ್ಲವೂ ಅನಿರೀಕ್ಷಿತ ರೀತಿಯಲ್ಲಿ ನಡೆಯುತ್ತಿದೆ. ಮೇಲ್ನೋಟಕ್ಕೆ ಈ ಬೇರೆ ಬೇರೆ ಬೆಳವಣಿಗೆಗಳ ನಡುವೆ ಅಗೋಚರವಾದ ಸಂಬಂಧವಿದೆ.

ಚುನಾವಣಾ ಆಯುಕ್ತರ ನೇಮಕ, ಚುನಾವಣಾ ಘೋಷಣೆ
ಮಾಜಿ ರಾಷ್ಟ್ರಪತಿ ನೇತೃತ್ವದ ಸಮಿತಿ ಶಿಫಾರಸುಗಳ ಅಂಗೀಕಾರ

ಹಲವು ಬೆಳವಣಿಗೆಗಳು ಅಗೋಚರ ಸಂಬಂಧಗಳು

ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ನಿಬಂಧನೆಗಳಿಲ್ಲ ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಅಸಮಾಧಾನ ವ್ಯಕ್ತಪಡಿಸಿದೆ. ಆದರೆ ಮೋದಿ ಆಡಳಿತದಲ್ಲಿ ಇತರೆ ಕ್ಷೇತ್ರಗಳಂತೆ ಏಕಮುಖ ಪ್ರವೃತ್ತಿ ಹೆಚ್ಚಾಗಿದೆ. ಸಿಬಿಐ (ಕೇಂದ್ರೀಯ ತನಿಖಾ ದಳ), ಇಡಿ (ಜಾರಿ ನಿರ್ದೇಶನಾಲಯ), ಸಿವಿಸಿ (ಕೇಂದ್ರ ಜಾಗೃತ ಆಯೋಗ) ಇಂತಹ ಸಂಸ್ಥೆಗಳ ಹುದ್ದೆಗಳಲ್ಲಿ ಆಪ್ತರನ್ನು ನೇಮಿಸಿ, ಪ್ರತಿಪಕ್ಷಗಳ ವಿರುದ್ಧ ಬಳಸಿಕೊಳ್ಳುವ ಪ್ರವೃತ್ತಿ ಉತ್ತುಂಗಕ್ಕೇರಿದೆ. 2022 ರಲ್ಲಿ ಎಡಿಆರ್ (ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್) ಪರವಾಗಿ ಚುನಾವಣಾ ಆಯೋಗದ ನೇಮಕಾತಿ ಸಂದರ್ಭದಲ್ಲಿ ಅನಿಯಂತ್ರಿತ ನೇಮಕಾತಿಗಳನ್ನು ತಪ್ಪಿಸಲು ನೇಮಕಾತಿ ಪ್ರಕ್ರಿಯೆಯನ್ನು ಹಾಕುವಂತೆ ಕೋರಿ ಅರ್ಜಿ ಸಲ್ಲಿಸಲಾಯಿತು. ತ್ರಿಸದಸ್ಯ ಸಂವಿಧಾನ ಪೀಠ ತನಿಖೆ ನಡೆಸುತ್ತಿರುವಾಗಲೇ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಅರುಣ್ ಪಾಂಡೆ ನಿವೃತ್ತಿಯಾಗಿದ್ದರು. ಆ ಸಮಯದಲ್ಲಿ, ಅರುಣ್ ಗೋಯೆಲ್ ಎಂಬ ಕಾರ್ಯದರ್ಶಿ ತಮ್ಮ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದರು ಮತ್ತು 24 ಗಂಟೆಗಳ ಒಳಗೆ **CEC** ಆಗಿ ನೇಮಕಗೊಂಡರು.

ಏಕಿಷ್ಟು ತರಾತುರಿ?

ಒಂದೆಡೆ ಸುಪ್ರೀಂ ಕೋರ್ಟ್ ನಲ್ಲಿ ತನಿಖೆ ನಡೆಯುತ್ತಿರುವಾಗಲೇ ಈ ಆತುರದ ನೇಮಕಕ್ಕೆ ತೀವ್ರ ಟೀಕೆ ವ್ಯಕ್ತವಾಗಿತ್ತು. CEC ಯ ಅಧಿಕಾರಾವಧಿಯು ಆರು ವರ್ಷಗಳು ಅಥವಾ 65 ವರ್ಷ ವಯಸ್ಸು ಪೂರ್ಣಗೊಂಡಾಗ. ಇವುಗಳಲ್ಲಿ ಯಾವ ಅಳತೆ ನೋಡಿದರೂ ಗೋಯೆಲ್ ಆಯ್ಕೆಯಾಗುವ ಅವಕಾಶವಿಲ್ಲ. ತಮ್ಮ ಮುಂದೆ ಬಂದ ನಾಲ್ಕು ಹೆಸರುಗಳಲ್ಲಿ ಗೋಯೆಲ್ ಅತ್ಯಂತ ಕಿರಿಯ ಎಂಬ ಕಾರಣಕ್ಕೆ ಅವರನ್ನು ನೇಮಿಸಲಾಗಿದೆ ಎಂದು ಅಡ್ವೊಕೇಟ್ ಜನರಲ್ ಸಮರ್ಥಿಸಿಕೊಂಡರು. ಈ ನೇಮಕಾತಿಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದಾಗ ಕೇಂದ್ರದ ಅಧಿಕಾರವನ್ನು ಪ್ರಶ್ನಿಸುವಂತಿಲ್ಲ ಎಂದು ನ್ಯಾಯಾಲಯ ಹೇಳಿದೆ. ಆದರೆ ಎಡಿಆರ್ ಪ್ರಕರಣದಲ್ಲಿ ಈ ಕುರಿತು ಸಮಗ್ರ ತೀರ್ಪು ಬರಲಿದೆ ಎಂದು ಕೂಡಾ ಸೂಚಿಸಿದೆ. ಈ ಪ್ರಕರಣ ವಿಚಾರಣೆಗೆ ಬಂದಾಗ ಎಜಿಆರ್ ವೆಂಕಟ್ರಾಮನ್ ಸರ್ಕಾರದ ನಿರ್ಧಾರವನ್ನು ಏಕಪಕ್ಷೀಯವಾಗಿ ಸಮರ್ಥಿಸಿಕೊಂಡರು. ಸಿಇಸಿ ನೇಮಕದ ಬಗ್ಗೆ ಸಂವಿಧಾನವು ಯಾವುದೇ ನಿರ್ದೇಶನಗಳನ್ನು ನೀಡುವುದಿಲ್ಲ ಎಂದು ಅವರು ವಾದಿಸಿದರು. ಏನನ್ನೂ ಹೇಳದೆ ಹೆಚ್ಚು ಜಾಗರೂಕರಾಗಿರಬೇಕೆಂದು, ಈ ಕುರಿತು ಯಾವುದೇ ಮಾರ್ಗಸೂಚಿಗಳನ್ನು ನೀಡುವುದಾಗಿ ಸುಪ್ರೀಂ ಕೋರ್ಟ್ ಹೇಳಿದರೆ, ಆ ರೀತಿ ಹಸ್ತಕ್ಷೇಪ ಮಾಡಲು ನ್ಯಾಯಾಂಗಕ್ಕೆ ಅಧಿಕಾರವಿಲ್ಲ ಎಂದು ಅವರು ಆಕ್ಷೇಪಿಸಿದ್ದಾರೆ. ನ್ಯಾಯಮೂರ್ತಿ ಜೋಸೆಫ್ ನೇತೃತ್ವದ ಪೀಠ ಈ ಕುರಿತು ತೀರ್ಪು ನೀಡಿದ್ದು, ಸಿಇಸಿ ನೇಮಕಾತಿಯಲ್ಲಿ ಅನುಸರಿಸಬೇಕಾದ ತತ್ವಗಳ ಕುರಿತು ಸಂಸತ್ತಿಗೆ ಕಾಯಿದೆ ರೂಪಿಸುವಂತೆ ಸೂಚಿಸಿದೆ. ಈ ಸಂದರ್ಭದಲ್ಲಿ ನೀಡಿದ ತೀರ್ಪಿನಲ್ಲಿ ನ್ಯಾಯಾಧೀಶರು, ಸಂವಿಧಾನವು ಸಿಇಸಿಗೆ ಎಷ್ಟು ವಿಶೇಷ ಸ್ಥಾನವನ್ನು ನೀಡಿದೆ ಎಂಬುದನ್ನು ಅಂಬೇಡ್ಕರ್ ಅವರ ಮಾತುಗಳಲ್ಲಿ ಉಲ್ಲೇಖಿಸಿದ್ದಾರೆ. 'ಪ್ರಜಾಪ್ರಭುತ್ವ ಎಂದರೆ ಚುನಾವಣೆ ಕ್ರಮಬದ್ಧವಾಗಿ ನಡೆಯಬೇಕೆಂದರೆ, ಅದಕ್ಕೆ ಚುನಾವಣಾ ಆಯೋಗವೇ ಮುಖ್ಯವಾಗಿದೆ' ಎಂದು ಅಂಬೇಡ್ಕರ್ ಅಂದು ಹೇಳಿದ್ದರು. ಚುನಾವಣಾ ಆಯೋಗವು ಅತ್ಯಂತ ಮಹತ್ವದ್ದಾಗಿದ್ದು, ಸಂವಿಧಾನವು ಅದಕ್ಕೆ ವಿಶೇಷ ನೇಮಕಾತಿ ವಿಧಾನವನ್ನು ನಿರ್ದಿಷ್ಟಪಡಿಸಿದೆ ಮತ್ತು ಸ್ವಾತಂತ್ರ್ಯವೇ ಇದಕ್ಕೆ ಮಾನದಂಡವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಸಿಇಸಿ ಕಾರ್ಯಾಂಗಕ್ಕೆ ಅಧೀನವಾಗಿರಬಾರದು ಎಂಬುದು ಒಂದು ಪ್ರಮುಖ ತತ್ವವಾಗಿದೆ. ಪ್ರಧಾನಿ, ವಿರೋಧ ಪಕ್ಷದ ನಾಯಕ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ ಸಮಿತಿಯು ಕಾನೂನುಗಳನ್ನು ರಚಿಸುವಾಗಲೂ ಸಂಸತ್ತಿನ ಸ್ವಾತಂತ್ರ್ಯವನ್ನು ರಕ್ಷಿಸುವ ಸಲುವಾಗಿ ರಾಷ್ಟ್ರಪತಿಗಳಿಗೆ ಸೂಚನೆಗಳನ್ನು ನೀಡುವಂತೆ ಸೂಚಿಸಲಾಗಿದೆ.



ತೀರ್ಪಿನಲ್ಲಿಯ ಭರವಸೆಯ ಅಣಿಮುತ್ತುಗಳು

ಯಾವುದೇ ತೀರ್ಪಿನಲ್ಲಿ ಎರಡು ಭಾಗಗಳಿವೆ. ಒಂದು ಓಬಿಟರ್ ಆದೇಶ ಮತ್ತು ಎರಡು ಅನುಪಾತ ನಿರ್ಧಾರ. ಮೊದಲನೆಯದು ಪ್ರಿಸ್ಕ್ರಿಪ್ಟಿವ್ ಆಗಿದೆ. ಇದನ್ನು ತಪ್ಪದೇ ಅನುಷ್ಠಾನಗೊಳಿಸಬೇಕು. ಎರಡನೆಯದು ಆ ತೀರ್ಪಿನ ಮೂಲದ ಸ್ಫೂರ್ತಿಯ ವಿವರಣೆಯಾಗಿದೆ. ಈ ತೀರ್ಪಿನಲ್ಲಿ, ಕೇಂದ್ರ ಶಾಸನ ಮಾಡಬೇಕು ಎಂಬ ಆದೇಶವಿದ್ದರೆ, ಸಿಇಸಿಯ ಸ್ವಾತಂತ್ರ್ಯವನ್ನು ರಕ್ಷಿಸಲು ಸ್ಫೂರ್ತಿಯಾಗಿದೆ. ಸುಪ್ರೀಂ ಕೋರ್ಟ್ ನ ಮುಖ್ಯ ನ್ಯಾಯಮೂರ್ತಿಯನ್ನು ಭಾಗಿದಾರರನ್ನಾಗಿ ಮಾಡುವ ಮೂಲಕ ಸುಪ್ರೀಂ ಕೋರ್ಟ್ ತನ್ನ ಅಂಶವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದೆ. ಆದರೆ, ಮೋದಿ ಸರ್ಕಾರ ಅಸಮಂಜಸ ವಾದಗಳೊಂದಿಗೆ ಹೊಸ ಮಸೂದೆಯನ್ನು ತಂದಿದೆ. ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ (ನೇಮಕಾತಿ ಷರತ್ತುಗಳು, ಸೇವಾ ನಿಯಮಗಳು) ಮಸೂದೆ–2023 ಅನ್ನು ಡಿಸೆಂಬರ್ 12 ರಂದು ರಾಜ್ಯಸಭೆಯು ಅಂಗೀಕರಿಸಿತು. ಪ್ರಧಾನಿಯವರು ಅಧ್ಯಕ್ಷರಾಗಿ, ಲೋಕಸಭೆಯ ವಿರೋಧ ಪಕ್ಷದ ನಾಯಕ (ಅಥವಾ ಹೆಚ್ಚು ಸಂಸದರನ್ನು ಹೊಂದಿರುವ ವಿರೋಧ ಪಕ್ಷದ ನಾಯಕ), ಪ್ರಧಾನ ಮಂತ್ರಿಯವರು ನೇಮಿಸಿದ ಮತ್ತೊಬ್ಬ ಕೇಂದ್ರ ಸಚಿವರನ್ನು ಸದಸ್ಯರ ಸಮಿತಿ ಈ ಆಯ್ಕೆಗಾಗಿ ರಾಷ್ಟ್ರಪತಿಗಳಿಗೆ ಹೆಸರುಗಳನ್ನು ಶಿಫಾರಸು ಮಾಡುತ್ತದೆ.



ರಾಜಕೀಯ ಹಸ್ತಕ್ಷೇಪ

ಈಗಾಗಲೇ ಕಾರ್ಯದರ್ಶಿಗಳಾಗಿ ಕೆಲಸ ಮಾಡಿ ನಿವೃತ್ತರಾದವರೇ ಚುನಾವಣಾ ಆಯುಕ್ತರ ಹುದ್ದೆಗೆ ಅರ್ಹರಾಗಿರುತ್ತಾರೆ. ಅಂದರೆ ನೇಮಕ ಸಮಿತಿಯಲ್ಲಿ ಪ್ರಧಾನಿ ಮಾತು ಜಾರಿಯಾಗುತ್ತದೆ. ನೇಮಕಾತಿಗೆ ಅರ್ಹರಾದವರು ಕೂಡ ಆ ಸರ್ಕಾರದಲ್ಲಿ ಸೇವೆ ಸಲ್ಲಿಸಿದವರೇ ಆಗಿರಬೇಕು. ಮುಖ್ಯ ನ್ಯಾಯಮೂರ್ತಿಯವರನ್ನು ಭಾಗೀದಾರರನ್ನಾಗಿ ಮಾಡಿಕೊಳ್ಳಿ ಎಂದು ಕೋರ್ಟ್ ಸೂಚಿಸಿದರೆ, ಅದರ ಬದಲು ಪ್ರಧಾನಿ ನೇಮಿಸಿದ ಕೇಂದ್ರ ಸಚಿವರನ್ನು ಸದಸ್ಯರನ್ನಾಗಿಸಿದ್ದು, ವಿರೋಧ ಪಕ್ಷದ ನಾಯಕನಿಗೆ ನಾಮಮಾತ್ರ ಸ್ಥಾನ ನೀಡಿದರೂ ಅಧಿಕಾರದಲ್ಲಿರುವ ಪಕ್ಷಕ್ಕೆ ಬಹುಮತ ಇರುತ್ತದೆ ಎಂಬುದು ಸ್ಪಷ್ಟ. ಮುಖ್ಯ ಆಯುಕ್ತರಾಗಿ ಮತ್ತು ಆಯುಕ್ತರಾಗಿ ನೇಮಕಗೊಂಡವರು ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಗೆ ಸಮಾನವಾದ ವೇತನವನ್ನು ಹೊಂದಿರಬೇಕು ಎಂದು ತೀರ್ಪಿನಲ್ಲಿ ಹೇಳಿದರೆ, ಸರ್ಕಾರವು ಆರಂಭದಲ್ಲಿ ಕಾರ್ಯದರ್ಶಿಯ ವೇತನವನ್ನು ಮಾತ್ರ ಪ್ರಸ್ತಾಪಿಸಿತು. ಪ್ರತಿಪಕ್ಷಗಳ ಟೀಕೆ ನಂತರವೇ ಆ ಮಟ್ಟಕ್ಕೆ ತಿದ್ದುಪಡಿ ತರಲಾಯಿತು. ಆಯೋಗದ ಸದಸ್ಯರಿಗೆ ಕರ್ತವ್ಯ ನಿರ್ವಹಣೆಯಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಪ್ರಕರಣಗಳನ್ನು ದಾಖಲಿಸಲು ಅವಕಾಶ, ತೆಗೆದುಹಾಕುವ ಅಧಿಕಾರ ಇಲ್ಲದಂತೆ ಮಾಡಬೇಕೆಂಬ ಸಲಹೆಯನ್ನು ಅನುಮೋದಿಸಲಿಲ್ಲ. ಒಂದು ಸಿಇಸಿಗೆ ಮಾತ್ರವೇ ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ಅಂತಹ ಪ್ರಕರಣಗಳಿಂದ ರಕ್ಷಣೆ ಒದಗಿಸಲಾಗಿದೆ. ನ್ಯಾಯಾಲಯದ ಮಧ್ಯಪ್ರವೇಶಕ್ಕಿಂತ ರಾಜಕೀಯ ಹಸ್ತಕ್ಷೇಪವೇ ಚುನಾವಣಾ ಆಯೋಗಕ್ಕೆ ಸವಾಲಾಗಿರುವುದರಿಂದ ಒತ್ತಡ ಹಾಗೆಯೇ ಉಳಿಯಲಿದೆ ಎನ್ನಲಾಗಿದೆ. ಈ ಮೂಲಕ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಚುನಾವಣಾ ಆಯೋಗ ಮಸೂದೆಯನ್ನು ತರಲಾಗಿದೆ ಎಂದು ಸಂಸದರು ಟೀಕಿಸುತ್ತಿದ್ದಂತೆ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಸದನದಲ್ಲಿ ನಾವು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ, ಯಾರ ಪ್ರಭಾವವೂ ನಮ್ಮ ಮೇಲೆ ಬೀರಬಾರದು ಎಂದು ನಿಯಮಗಳು ಹೇಳುತ್ತಿವೆ. ವಾಸ್ತವವಾಗಿ ನಡೆದಿದ್ದೇ ಬೇರೆ.

ಇಬ್ಬರು ಆಯುಕ್ತ ರಾಜೀನಾಮೆ

ಆದರೆ ಈ ಮಧ್ಯೆ, ನಿಯೋಜಿತ ಆಯುಕ್ತ ಅರುಣ್ ಗೋಯೆಲ್ ಮಾರ್ಚ್ 9 ರಂದು ರಾಜೀನಾಮೆ ನೀಡಿದಾಗ ಕಥೆ ಹೊಸ ತಿರುವು ಪಡೆಯಿತು. ಚುನಾವಣಾ ಸಿದ್ಧತೆಗಳು ಉತ್ತುಂಗಕ್ಕೇರಿದಾಗ ಅವರು ಸಿಇಸಿ ರಾಜೀವ್ ಕುಮಾರ್ ಅವರಿಂದ ಬೇರ್ಪಟ್ಟರು. ಅವರು ರಾಜೀನಾಮೆ ನೀಡಿದ್ದು, ಅದನ್ನು ರಾಷ್ಟ್ರಪತಿ ಅನುಮೋದಿಸಿದ್ದು, ಇದನ್ನು ಗೆಜೆಟ್ ಪ್ರಕಟಣೆ ಹೊರಡಿಸಿದ್ದು ಇವೆಲ್ಲವೂ ಶರವೇಗದಲ್ಲಿ ನಡೆದುಹೋದವು. ಇದಕ್ಕೂ ಮೊದಲು, ಆಗಸ್ಟ್ 2020 ರಲ್ಲಿ, ಅಶೋಕ್ ಲವಾಸಾ ಎನ್ನುವ ಚುನಾವಣಾ ಆಯುಕ್ತ ಕೂಡ ರಾಜೀನಾಮೆ ನೀಡಿದ್ದರು. 2019 ರ ಚುನಾವಣೆಯಲ್ಲಿ ಮೋದಿ ಮತ್ತು ಅಮಿತ್ ಶಾ ಚುನಾವಣಾ ಪ್ರಚಾರ ನಿಯಮಗಳನ್ನು ಉಲ್ಲಂಘಿಸಿರುವುದನ್ನು ವಿರೋಧಿಸಿ ಅವರು ರಾಜೀನಾಮೆ ನೀಡಿದರು. (ನಂತರ ಅವರ ಮೇಲೆ ಐಟಿ ಮತ್ತು ಇತರರಿಂದ ದಾಳಿಗಳು ನಡೆದವು. ಕೆಲವು ಕಾಲ ಅವರನ್ನು ಸರ್ಕಾರದ ಅಧೀನದಲ್ಲಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಉಪಾಧ್ಯಕ್ಷರನ್ನಾಗಿ ನೇಮಿಸಲಾಯಿತು.) ಮೋದಿ ನೇತೃತ್ವದಲ್ಲಿ ಇಬ್ಬರು ಚುನಾವಣಾ ಆಯುಕ್ತರು ಈ ರೀತಿ ರಾಜೀನಾಮೆ ನೀಡುವುದು ಅಸಾಮಾನ್ಯವಾಗಿದೆ. ಇದಕ್ಕೆ ಕಾರಣಗಳೇನು ಎಂಬುದು ನಿಗೂಢವಾಗಿಯೇ ಉಳಿದಿವೆ.

ವಿರೋಧ ಪಕ್ಷದ ನಾಯಕ ಹೇಳಿದ ಸತ್ಯಗಳು

ಚುನಾವಣಾ ಅಧಿಸೂಚನೆ ಹೊರಬೀಳುವ ಮುನ್ನವೇ ಇಬ್ಬರು ನೂತನ ಆಯುಕ್ತರನ್ನು ನೇಮಿಸಿದ ರೀತಿಯೂ ತೀರಾ ಆಕ್ಷೇಪಾರ್ಹವಾಗಿದ್ದು, ಇದೇ 14ರಂದು ಪ್ರಧಾನಿ, ಗೃಹ ಸಚಿವ

ಪುಟ 15 ಕ್ಕೆ

ಮಹಿಳಾ ದಿನಾಚರಣೆಯ ವಿಶೇಷ ಲೇಖನ

ಮೀಸಲಾತಿ ಎಂಬ ಮರೀಚಿಕೆಯೂ ಮಹಿಳಾ ಸ್ವಾತಂತ್ರ್ಯದ ಹೋರಾಟವೂ. . . .

ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟ ಬಹು ದೀರ್ಘಕಾಲದ್ದು. ಹೋರಾಟದ ಹೆಜ್ಜೆ ಗುರುತುಗಳನ್ನು ಗುರುತಿಸಿ ವಿಷಯದ ನಾನಾ ಮಗ್ಗಲುಗಳನ್ನು ವಿವರಿಸಿದ್ದಾರೆ.

ಕೆ.ಎಸ್.ವಿಮಲ

ಅದು ಎಪ್ಪತ್ತರ ದಶಕದ ಕೊನೆಯ ಹಂತ. ದೇಶದೆಲ್ಲೆಡೆ ಪ್ರಜಾಪ್ರಭುತ್ವ, ಸಮಾನತೆ, ನಿಜ ಸ್ವಾತಂತ್ರ್ಯಗಳ ಕುರಿತು ತೀವ್ರ ಚರ್ಚೆಗಳು ಎದ್ದ ಸಂದರ್ಭ. ಮಹಿಳಾ ಸಮಾನತೆಯ ಕೂಗು ಕೂಡ ಗಟ್ಟಿಯಾಗಿ ಕೇಳತೊಡಗಿದ ಹೊತ್ತೆನ್ನಬಹುದು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಅಸಂಖ್ಯಾತ ಮಹಿಳೆಯರು, ಸಮಾನತೆಯನ್ನು ಪಡೆಯುತ್ತ, ಸಂಕಟಗಳಿಂದಲೂ ಸ್ವಾತಂತ್ರ್ಯ ಪಡೆಯುವುದು ಈ ಹೋರಾಟದ ಗುರಿ ಎಂದು ಕನಸಿದ್ದರು. ಹಾಗಾಗಿಯೇ ಮಹಿಳೆಯರು ಎಂಬ ಕಾರಣಕ್ಕಾಗಿ ಪ್ರತ್ಯೇಕ ಗುರುತಿಸುವಿಕೆ, ವಿಶೇಷ ಸ್ಥಾನಮಾನಗಳ ಅಗತ್ಯವಿಲ್ಲವೆಂದು ಅಭಿಪ್ರಾಯ ಹೊಂದಿದವರೂ ಇದ್ದರು ಆ ಸಮಯದಲ್ಲಿ. ಆದರೆ ಕ್ರಮೇಣ ಕನಸಿದ ಕನಸು ನನಸಾಗುವ ಸಾಧ್ಯತೆಗಳು ಕ್ಷೀಣವೆಂದು ತಿಳಿದಾಗ ವಿಶೇಷ ಸ್ಥಾನಮಾನಗಳಿಗಾಗಿ ಒತ್ತಾಯಿಸುವ ಜರೂರು ಕಾಣತೊಡಗಿತು. ಇದರ ಭಾಗವಾಗಿಯೇ ಮಹಿಳಾ ಪ್ರಾತಿನಿಧ್ಯಕ್ಕಾಗಿ ಒತ್ತಾಯಗಳೂ ಕೇಳತೊಡಗಿದವು.

ಮಹಿಳೆಯರಿಗೆ ಮೀಸಲಾತಿ ನೀಡುವ ವಿಚಾರದ ಬಗ್ಗೆ ಗಂಭೀರವಾದ ಪ್ರಸ್ತಾಪಗಳು 1957ರಲ್ಲಿಯೇ ಬಂದಿದ್ದವು. ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವುದಕ್ಕೆ ಸಲಹೆ ನೀಡಲು ರಚಿತವಾದ ಬಲವಂತರಾಯ್ ಸಮಿತಿ ಮಹಿಳಾ ಮೀಸಲಾತಿಯ ಅಗತ್ಯವನ್ನು ಪ್ರತಿಪಾದಿಸಿತ್ತು. ಸಮಾಜಮುಖೀ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರನ್ನು ಗುರುತಿಸಿ ಪ್ರತಿ ಪಂಚಾಯತ್ ಗೆ ಇಬ್ಬರು ಮಹಿಳೆಯರನ್ನು ನಾಮಕರಣ ಮಾಡುವ ಶಿಫಾರಸನ್ನು ಅದು ಮುಂದಿಟ್ಟಿತ್ತು. ಉತ್ತರಪ್ರದೇಶ ಬಿಟ್ಟರೆ ಮಿಕ್ಕೆಲ್ಲ ರಾಜ್ಯಗಳೂ ಈ ವರದಿಯನ್ನು ಒಪ್ಪಿದ್ದವು ಎನ್ನುತ್ತದೆ ಇತಿಹಾಸ.

ಮುಂದುವರೆದು 1975ರಲ್ಲಿ ಮಹಿಳೆಯರ ಸ್ಥಾನಮಾನ ಅಧ್ಯಯನ ಮಾಡಲು ನೇಮಕವಾದ ಸಮಿತಿಯು ಟುವರ್ಡ್ಸ್ ಈಕ್ವಾಲಿಟಿ– 'ಸಮಾನತೆಯೆಡೆಗೆ' ಹೆಸರಿನಲ್ಲಿ ಮಂಡಿಸಿದ ವರದಿಯಲ್ಲಿ ಮಹಿಳಾ ಪ್ರಾತಿನಿಧ್ಯದಲ್ಲಿ ಇರುವ ತೀವ್ರ ಕೊರತೆಯನ್ನು ಗುರುತಿಸಿ ಕಳವಳ ವ್ಯಕ್ತ ಪಡಿಸಿತ್ತು. ಅದು ಪ್ರತಿಯೊಂದು ಪಂಚಾಯತ್‌ಗೂ ಪ್ರತ್ಯೇಕ ಮಹಿಳಾ ಪಂಚಾಯತ್ ಇರಬೇಕೆಂದು ಸಲಹೆ ಮಾಡಿತ್ತು.

1978ರಲ್ಲಿ ಪಂಚಾಯತ್ ವ್ಯವಸ್ಥೆ ಬಗ್ಗೆ ವರದಿ ನೀಡಿದ ಅಶೋಕ್ ಮೆಹ್ತಾ ಸಮಿತಿ ಪಂಚಾಯತ್ ಚುನಾವಣೇಯಲ್ಲಿ ಅತಿ ಹೆಚ್ಚು ಮತ ಗಳಿಸಿದ ಇಬ್ಬರು ಮಹಿಳಾ ಅಭ್ಯರ್ಥಿಗಳನ್ನು ಅವರು ಚುನಾಯಿತರಾಗದಿದ್ದರೂ ನಾಮಕರಣ ಮಾಡಿಕೊಳ್ಳಬೇಕೆಂದು ಶಿಫಾರಸು ಮಾಡಿತ್ತು. ಈ ಯಾವುದೇ ಶಿಫಾರಸುಗಳ ಹಿಂದಿನ ಸದಾಶಯ ಮಹಿಳಾ ಪ್ರಾತಿನಿಧ್ಯವನ್ನು ಖಾತ್ರಿ ಪಡಿಸುವುದೇ ಆಗಿತ್ತು ಎಂಬುದರಲ್ಲು ಸಂಶಯವೇ ಇಲ್ಲ. ಹಾಗಿದ್ದೂ ಈ ರೀತಿಯ ನಾಮನಿರ್ದೇಶನಗಳಿಗಿಂತ ಮಹಿಳೆಯರಿಗಾಗಿಯೇ ಸ್ಥಾನ ಮೀಸಲಿಡುವುದೇ ಸೂಕ್ತವಾದ ಮಾರ್ಗ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಮಹಿಳಾ ಪ್ರಾತಿನಿಧ್ಯವನ್ನು ಅಧಿಕೃತವಾಗಿ ಕಲ್ಪಿಸಿದ ಮೊದಲ ರಾಜ್ಯ ಕರ್ನಾಟಕ ಎಂಬುದು ಹೆಮ್ಮೆಯ ಸಂಗತಿ. ಇಲ್ಲಿ 1983ರಲ್ಲಿಯೇ ಕಾಯ್ದೆಗೆ ತಿದ್ದುಪಡಿ ತಂದು ಪಂಚಾಯತ್ ವ್ಯವಸ್ಥೆಯಲ್ಲಿ ಶೇಕಡಾ 25% ಸ್ಥಾನಗಳನ್ನು ಅಂದಿನ ಜನತಾ ಪಕ್ಷದ ಸರಕಾರ ಮಹಿಳೆಯರಿಗೆ ಮೀಸಲಿಡುವ ಅವಕಾಶ ಕಲ್ಪಿಸಲಾಯಿತು. 1987ರಲ್ಲಿ ನಡೆದ ಪಂಚಾಯತ್ ಚುನಾವಣೆಗಳಲ್ಲಿ ಜಾರಿಗೆ ಬಂದ ಈ ಕಾಯ್ದೆಯ ಕಾರಣದಿಂದ ನೂರಾರು ಮಹಿಳೆಯರು ಪಂಚಾಯತ್‌ಗಳಿಗೆ ಚುನಾಯಿತರಾದರು. 1992ರಲ್ಲಿ ಪಶ್ಚಿಮಬಂಗಾಳದ ಎಡರಂಗ ಸರಕಾರ 33% ಮೀಸಲಾತಿಯನ್ನು ಜಾರಿಗೆ ತಂದಿತು. ಇದೇ ಅವಧಿಯಲ್ಲಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಅಂಗೀಕಾರವೂ ಆಯಿತು. ಈಗ ಬಹುತೇಕ ರಾಜ್ಯಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ 50% ಮಹಿಳಾ ಮೀಸಲಾತಿ ಜಾರಿಯಲ್ಲಿದೆ. ಆ ಕಾರಣದಿಂದಲೇ ಬೃಹತ್ ಸಂಖ್ಯೆಯ ಮಹಿಳೆಯರು ಸಕ್ರಿಯ ರಾಜಕಾರಣದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿದೆ. ಎಷ್ಟೋ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲು ಸ್ಥಾನದ ಜೊತೆಯೇ ಸಾಮಾನ್ಯ ಕ್ಷೇತ್ರಗಳಲ್ಲಿ ಪುರುಷ ಅಭ್ಯರ್ಥಿಗಳ ವಿರುದ್ಧವೂ ಸೆಣಸಿ ಗೆಲ್ಲುವ ಸಾಮರ್ಥ್ಯ ಬೆಳೆದ ಕಾರಣದಿಂದ ಬರೀ ಮಹಿಳೆಯರೇ ಸದಸ್ಯರಿರುವ ಸಂದರ್ಭಗಳನ್ನೂ ನೋಡುತ್ತೇವೆ. ಹಾಗೆಂದ ಮಾತ್ರಕ್ಕೆ ಪುರುಷಾಧಿಕಾರದ ದರ್ಪ ತಣ್ಣಗಾಗಿದೆ ಎಂದೇನೂ ಅರ್ಥವಲ್ಲ. ಇಂದಿಗೂ ಹೆಂಡತಿ, ತಾಯಿ, ಸೋದರಿ ಮತ್ತಿನ್ನಾರೋ ಕುಟುಂಬದ ಮಹಿಳೆಯರನ್ನು ಗೆಲ್ಲಿಸಿಕೊಂಡು ತಾವೇ ಅಧಿಕಾರ ನಡೆಸುವ ಪುರುಷರು ಈಗಲೂ ಇದ್ದಾರೆ. ಆದರೂ ಅಂದಿನಿಂದ ಇಂದಿಗೆ ಸಾಕಷ್ಟು ಬದಲಾವಣೆಗಳಾಗಿವೆ.

ಆದರೆ.... ಇದೇ ಸ್ಥಿತಿ ಶಾಸನಸಭೆಗಳಲ್ಲಿ ಸಾಧ್ಯವೇ ಆಗುತ್ತಿಲ್ಲ ಯಾಕೆ?? ಇದು ಬಗೆಹರಿಯದ ಪ್ರಶ್ನೆಯೇನಲ್ಲ. ಯಾಕೆಂದರೆ ಅತ್ಯಾಧುನಿಕ ತಂತ್ರಜ್ಞಾನಗಳ ಮೂಲಕ ನಾಗರಿಕ ಸಮಾಜವೆಂದು ಕರೆಯಿಸಿಕೊಳ್ಳುವ ಇಲ್ಲಿ ಈಗಲೂ



ಪುರುಷ ಪ್ರಧಾನ ಮೌಲ್ಯಗಳು ತಮ್ಮ ಹಿಡಿತವನ್ನು ಹೊಂದಿವೆ. ಆ ಕಾರಣದಿಂದಲೇ ಕಾಲು ಶತಮಾನ ದಾಟಿದ ಮಸೂದೆ ವಿಕಲಾಂಗ ಸ್ವರೂಪದಲ್ಲಿ ಕಳೆದ ಅಧಿವೇಶನದಲ್ಲಿ ಅಂಗೀಕೃತಗೊಂಡಿದೆ. ಮೂಗಿಗೆ ಸವರಿದ ತುಪ್ಪವಾಗಿ ಅಲ್ಲಿಯೇ ಒಣಗಿ ಕಿರಿಕಿರಿ ಮಾಡುತ್ತದೆ ಅಷ್ಟೆ.

1996ನೇ ಇಸವಿಯಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಪ್ರಣಾಳಿಕೆಯಲ್ಲಿ ಮಹಿಳಾ ಪ್ರಾತಿನಿಧ್ಯ ಕೊಡುವ ವಾಗ್ದಾನ ಮಾಡಿದ್ದವು. ಅಸ್ತಿತ್ವಕ್ಕೆ ಬಂದ



ಸಂಯುಕ್ತ ರಂಗ ಸರಕಾರ ತನ್ನ ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿಯೂ ಅದನ್ನು ಪ್ರಸ್ತಾಪಿಸಿಕೊಂಡಿತ್ತು. ಆದರೆ ಪ್ರಥಮ ಅಧಿವೇಶನದ ಕೊನೆಯ ದಿನದ ಕಲಾಪಗಳಲ್ಲಿ ಮಂಡಿತವಾದ ಮಸೂದೆ ತೀವ್ರತರದ ಅಡ್ಡಿಯನ್ನು ಎದುರಿಸಿತು. ಸಂವಿಧಾನಕ್ಕೆ ಮೂಲ ತಿದ್ದುಪಡಿಯಾಗದೆಯೇ ಕೇವಲ ಮಹಿಳಾ ಮೀಸಲಾತಿಯಲ್ಲಿ ಅಳವಡಿಸಲಾಗದ ಅಂಶಗಳನ್ನು ಬಿ.ಜೆ.ಪಿಯ ಮಹಿಳಾ ಸಂಸದರಾದ ಉಮಾಭಾರತಿಯವರ ಮೂಲಕ ಮುಂದಿರಿಸಿ ಅದು ಅಂಗೀಕಾರವಾಗದಂತೆ ನೋಡಿಕೊಳ್ಳಲಾಯಿತು. ಮಸೂದೆಯನ್ನು ಸಿ.ಪಿ.ಐ. ನ ಸಂಸದೆ ಕಾಮ್ರೇಡ್ ಗೀತಾ ಮುಖರ್ಜಿ ಯವರ ನೇತೃತ್ವದಲ್ಲಿ ಸೆಲೆಕ್ಟ್ ಕಮಿಟಿಗೆ ಒಪ್ಪಿಸಿ ಮೂರು ತಿಂಗಳ ಅವಧಿಯನ್ನು ನೀಡಲಾಯಿತು. ತನಗೆ ನಿಗದಿಪಡಿಸಿದ ಅವಧಿಯಲ್ಲಿ ಸಮರ್ಪಕವಾಗಿ ಕೆಲಸ ನಿರ್ವಹಿಸಿ ಕಾಂ.ಗೀತಾ ಮುಖರ್ಜಿಯವರು ತಮ್ಮ ವರದಿಯನ್ನು ನೀಡಿದಾಗ್ಯೂ ಮಸೂದೆ ಬೆಳಕು ಕಾಣಲಿಲ್ಲ. ತದ ನಂತರ ಹಲವು ಬಾರಿ ಮಂಡನೆಯಾದ ಮಸೂದೆಗೆ ಬಂದ ವಿರೋಧಗಳು, ಎತ್ತಿದ ಪ್ರಶ್ನೆಗಳು ಆಡಿದ ಮಾತುಗಳು ಮಹಿಳೆಯರನ್ನು ದೇವತೆಗಳೆಂದು ವೈಭವೀಕರಿಸುವ ನೆಲದಲ್ಲಿ ಮಹಿಳೆಗಿರುವ ಸ್ಥಾನಮಾನಗಳೆಂತದ್ದು ಎಂಬುದನ್ನು ಬಹಿರಂಗಗೊಳಿಸಿದವು. ಬಹುಶಃ ಅಂದು ಗೀತಾ ಮುಖರ್ಜಿಯವರ ಸಮಿತಿಯ ಶಿಫಾರಸುಗಳನ್ನು ಅಂಗೀಕರಿಸಿ ಜಾರಿ ಮಾಡಿದ್ದರೆ ಈ ಹೊತ್ತಿಗೆ ನಮ್ಮ ಶಾಸನಸಭೆಗಳ ಲಕ್ಷಣಗಳೇ ಬದಲಾಗಿರುತ್ತಿದ್ದವು. ಇತರ ಹಿಂದುಳಿದ ವರ್ಗಗಳ ಮೀಸಲಾತಿಯ ಬೇಡಿಕೆಯೂ ಈ ಅವಧಿಯಲ್ಲಿ ತನ್ನಿಂದ ತಾನೇ ಈಡೇರಿ ಬಿಟ್ಟಿರುತ್ತಿತ್ತು. ಇದಕ್ಕೆ ಉದಾಹರಣೆ ಮೊದಲ ಬಾರಿ ಮಸೂದೆ ಮಂಡನೆಯಾದಾಗಲೇ ಇದ್ದ ಅಂಕಿ ಅಂಶಗಳ ಪ್ರಕಾರವೇ ಅಂದಿನ ಬಿಹಾರದ ಶಾಸನಸಭೆಯಲ್ಲಿ ಅರ್ಧದಷ್ಟು ಹಿಂದುಳಿದ ವರ್ಗಗಳ ಶಾಸಕರು, ಉತ್ತರ ಪ್ರದೇಶದಲ್ಲಿ 29% ಹಿಂದುಳಿದ ವರ್ಗಗಳ ಶಾಸಕರು ಇದ್ದರು. ಜಾತಿ ವ್ಯವಸ್ಥೆ ಅತ್ಯಂತ ಆಳವಾಗಿ ಬೇರೂರಿರುವ ನಮ್ಮದೇಶದಲ್ಲಿ ಕ್ಷೇತ್ರದಲ್ಲಿರುವ ಮತದಾರರ ಜಾತಿ ಪ್ರಾಬಲ್ಯದ ಮೇಲೇ ಟಿಕೆಟ್ ನೀಡುವ ಪರಿಪಾಠವೇ ಇರುವಾಗ ಮಹಿಳಾ ಮೀಸಲಾತಿಯೂ ಅದೇ ನೆಲೆಯಲ್ಲಿಯೇ ನೀಡಲಾಗುತ್ತದೆಯಲ್ಲವೇ ಎಂದು 'ಫ್ರಂಟ್ ಲೈನ್' ಪತ್ರಿಕೆ ಪ್ರಕಟಿಸಿತ್ತು. ಇದಲ್ಲದೆಯೇ ವಿವಿಧ ರಾಜ್ಯಗಳಲ್ಲಿ ಅಥವಾ ರಾಜ್ಯಗಳಲ್ಲಿಯೇ ವಿವಿಧ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳ ಜಾತಿಯ ನೆಲೆಯ ವಿಭಜನೆಯೂ ಏಕಪ್ರಕಾರವಾಗಿಲ್ಲದಿರುವ ತೊಡಕೂ ಇದೆ. ಇವೆಲ್ಲವನ್ನೂ ನಿವಾರಿಸಿಕೊಂಡು ಮಹಿಳಾ ಮೀಸಲಾತಿ ಜಾರಿಗೆ ಬಂದೇ ಬಿಡುವ ಸಾಧ್ಯತೆ ಇದೆಯೇ ಎಂಬ ಪ್ರಶ್ನೆಗೆ ಉತ್ತರವಿಲ್ಲ.

2010ರಲ್ಲಿ ಯು.ಪಿ.ಎ. ಸರಕಾರವಿರುವಾಗ ಅಂತರ ರಾಷ್ಟ್ರೀಯ ಮಹಿಳಾ ದಿನದ ಶತಮಾನದ ನೆನಪಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಕೊಡುಗೆಯಾಗಿ ಕೊಡುವ ಪ್ರಯತ್ನ ನಡೆಯಿತು. ರಾಜ್ಯ ಸಭೆಯಲ್ಲಿ ಮಂಡನೆಯಾಗಿ ಅಂಗೀಕಾರವೂ ಆಯಿತು. ಆದರೆ ಲೋಕಸಭೆಯಲ್ಲಿ ಮಂಡನೆಯಾಗುವ 'ಭಾಗ್ಯ' ದೊರೆಯಲಿಲ್ಲ. ಮುಂದೆಯೂ ಮಂಡಿತವಾದಾಗೆಲ್ಲ ವಿರೋಧವನ್ನೇ ಎದುರಿಸಿತು. ಶೈತ್ಯಾಗಾರಕ್ಕೆ ತಳ್ಳಲ್ಪಟ್ಟಿತು.

ಈಗ ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ 2023ರ ಕೊನೆಯ ಅಧಿವೇಶನದಲ್ಲಿ ಮಂಡಿತಗೊಂಡು ಅಂಗೀಕಾರವಾದ ಮಸೂದೆ ದೇಶದ ಮಹಿಳೆಯರ ಮೂಗಿಗೆ ಸವರಿದ ತುಪ್ಪವಾಗಿದೆ. ಮಹಿಳಾ ಪರ ಸಂಘಟನೆಗಳ ನಿರಂತರ ಶ್ರಮದ ಫಲವಾಗಿ ಮಹಿಳೆಯರನ್ನು ಮತದಾರರಾಗಿ ಪರಿಗಣಿಸಲೇ ಬೇಕಾದ ಅನಿವಾರ್ಯತೆಯಿಂದ 96ರಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಪ್ರಾತಿನಿಧ್ಯದ ಪ್ರಸ್ತಾಪ ಮಾಡಿದ ರೀತಿಯಲ್ಲಿಯೇ, ಈ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ಮತ ಗಳಿಕೆಯ ದೃಷ್ಟಿಯಿಂದ ಈ ಮಸೂದೆ ಮಂಡನೆಯಾಗಿದೆ. ಮೂಲ ಮಸೂದೆಯನ್ನಷ್ಟೇ ಮಂಡಿಸಿ ಈಗ ಬರುವ ಚುನಾವಣೆಯಲ್ಲಿಯೇ ಜಾರಿಯಾಗುವಂತೆ ಕ್ರಮ ವಹಿಸಿದ್ದರೆ ಅದರಲ್ಲಿ ಮಹಿಳಾ ಪ್ರಾತಿನಿಧ್ಯಪರತೆಯನ್ನು ಕಾಣಬಹುದಿತ್ತು. ಅಥವಾ ಈ ಅವಧಿಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯ ಕಲ್ಪಿಸುವ ತಿದ್ದುಪಡಿಯನ್ನಾದರೂ ತರಲು ಪ್ರಯತ್ನ ನಡೆಯಿತೇ? ಅದೂ ಇಲ್ಲ. ಅದರ ಬದಲು ಮುಂದಿನ ಜನಗಣತಿಯ ನಂತರ, ಹಾಗೂ ಕ್ಷೇತ್ರ ಮರುವಿಂಗಡನೆಯ ನಂತರವಷ್ಟೇ ಜಾರಿಯಾಗುವ ಕರಾರು ವಿಧಿಸಿ ಅಂಗೀಕರಿಸಲಾಗಿದೆ. ಇದರ ಜೊತೆಯೇ ಸೂಕ್ಷ್ಮವಾಗಿ ನೋಡಬೇಕಿರುವ ಒಂದು ಸಂಗತಿಯತ್ತ ಗಮನ ಹರಿಸಲೇಬೇಕು. ಯಾಕೆಂದರೆ ಇದರಲ್ಲಿಯೇ ದೊಡ್ಡ ರಾಜಕೀಯ ಸಂಚು ಅಡಗಿದೆ. ಅದೆಂದರೆ ಈಗ ಅಂಗೀಕಾರಗೊಂಡ ಮಸೂದೆಯಲ್ಲಿ ಸೆಕ್ಷನ್ (3) ನಲ್ಲಿ ಎಲ್ಲ ರಾಜ್ಯಗಳಲ್ಲಿ ಎಂಬೆರಡು ಶಬ್ದವನ್ನು ಬಿಟ್ಟಿರುವುದು. ಅದು ಸಂದರ್ಭಾನುಸಾರ ಅರ್ಥೈಸುವ ಅವಕಾಶವನ್ನು ನೀಡುತ್ತದೆ. ಹಾಗಾಗಿ ಮೀಸಲಾತಿಯನ್ನು ಘೋಷಿಸುವಾಗ ತಮಗೆ ಅನುಕೂಲವಿರುವ ಕ್ಷೇತ್ರಗಳಿಗೆ, ರಾಜ್ಯಗಳಿಗೆ ಅನ್ವಯಿಸಿಕೊಳ್ಳುವ ಸಡಿಲ ಹಗ್ಗವನ್ನು ಕಲ್ಪಿಸಲಾಗಿದೆ. ಜೊತೆಗೇ ಮೊದಲಿನ ಮಸೂದೆಯ ಕರಡಿನಲ್ಲಿ ಇದ್ದ 15 ವರ್ಷಗಳ ಅವಧಿಯನ್ನು ಹಾಗೆಯೇ ಉಳಿಸಿಕೊಂಡೇ ಅಂಗೀಕರಿಸಲಾಗಿದೆ. ಮತ್ತು ಆ ಅವಧಿ ಮಸೂದೆ ಅಂಗೀಕಾರಗೊಂಡ ದಿನದಿಂದಲೇ ಆರಂಭವಾಗುತ್ತದೆ. ಈಗಿರುವ ನಿಯಮದಂತೆ ಕ್ಷೇತ್ರ ವಿಂಗಡನೆ, ಜನಗಣತಿಗಳು ಸುಲಭವಾಗಿ ಮುಗಿಯುವುದಲ್ಲ ಎಂಬುದು ವಿಚಾರ ಮಾಡುವ ಎಲ್ಲರಿಗೂ ಗೊತ್ತಿರುವ ಸಸಂಗತಿಯೇ ಆಗಿದೆ. ಇವೆಲ್ಲವೂ ಮಸೂದೆಯಲ್ಲಿರುವ ಕ್ರೋಢೀಕೃತ ಕೊರತೆಗಳಾಗಿವೆ. ಆದ್ದರಿಂದ ಮತ್ತೊಮ್ಮೆ ದೇಶದ ಮಹಿಳೆಯರನ್ನು ಮೂರ್ಖರನ್ನಾಗಿಸಿ ಮತ ಸೆಳೆಯುವ ಹುನ್ನಾರಿನ ಭಾಗವಿದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಈ ನೆಲಯಲ್ಲಿ ನಾವು ಮಹಿಳಾ ಪ್ರಾತಿನಿಧ್ಯದ ನಮ್ಮ ಅಧಿಕಾರದ ಕೂಗನ್ನು ಇನಷ್ಟು ಹರಿತಗೊಳಿಸಬೇಕಲ್ಲದೇ ಅನ್ಯ ಮಾರ್ಗವಿಲ್ಲ. ಪ್ರಜಾಪ್ರಭುತ್ವದ ನಿಜ ಅರ್ಥ ನಮಗೆ ದಕ್ಕಬೇಕೆಂದರೆ ಮಹಿಳೆಯರಿಗೆ ಸಿಗಬೇಕಾದ ಸ್ವಾತಂತ್ರ್ಯ ಮತ್ತು ಸಮಾನ ಅಧಿಕಾರ ಅದಕ್ಕೆ ಅವಕಾಶ, ಅದಿಲ್ಲದೆಯೇ ಇರುವ ಸಮಾಜವನ್ನು ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಕರೆಯಲಾಗದು. ಇದು ಅರೆ ಪ್ರಜಾಪ್ರಭುತ್ವವಷ್ಟೆ.

(ಲೇಖಕರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರು)

35 ಔಷಧೀಯ ಕಂಪನಿಗಳಿಂದ ಚುನಾವಣಾ ಬಾಂಡ್‌ಗಳ ಮೂಲಕ 1000 ಕೋಟಿ ರೂ.

ಗುಣಮಟ್ಟದ ಪರೀಕ್ಷೆಯಲ್ಲಿ ವಿಫಲವಾದ ಮತ್ತು ಐಟಿ ಇಲಾಖೆಯಿಂದ ದಾಳಿ ಎದುರಿಸಿದ 7 ಫಾರ್ಮಾ ಕಂಪನಿಗಳು

ಲೂಟಿಕೋರರಿಗೆ ಲೂಟಿ ಮಾಡಲು ಯಾವ ಮಾರ್ಗವಾದರೇನು? ಅಂತಹವರಿಗೆ ಸಹೃದಯ ಎಂಬುದೇ ಇರುವುದಿಲ್ಲ. ಅದನ್ನು ನಾವು, ರಸ್ತೆ, ರೈಲ್ವೇ, ವಿಮಾನ, ವಿದ್ಯುತ್, ನೀರು, ಶಿಕ್ಷಣ, ಆರೋಗ್ಯ ಇಂತಹ ಸಾರ್ವಜನಿಕ ಮೂಲಭೂತ ಸೌಕರ್ಯಗಳ ಕ್ಷೇತ್ರಗಳಲ್ಲಿ ಖಾಸಗಿಯವರಿಗೆ ಪಾಲು ನೀಡಿಯೋ, ಅಥವಾ ಸಂಪೂರ್ಣವಾಗಿ ಖಾಸಗಿಯವರಿಗೇ ಕೊಡುವ ಮೂಲಕವೋ ಆಳುವ ಬಂಡವಾಳಶಾಹಿ ರಾಜಕೀಯ ಪಕ್ಷಗಳು 'ಕೊಡು ಕೊಳ್ಳುವ ವ್ಯವಹಾರ' ಮಾಡುವುದನ್ನು ನೋಡಿದ್ದೇವೆ. ಆದರೆ, ಬಿಜೆಪಿ ಪಕ್ಷವು ಜನರ ಆರೋಗ್ಯದ ವಿಷಯದಲ್ಲೂ, ಜನರು ಬಳಸುವ ಜೀವರಕ್ಷಕ ಔಷಧಿಗಳ ವಿಷಯದಲ್ಲೂ ಕೊಡು ಕೊಳ್ಳುವ ವ್ಯವಹಾರದ ಮೂಲಕ ಹಣ ಪಡೆದಿದೆ ಎಂಬುದು ಕಳವಳಕಾರಿ ಸಂಗತಿಯಾಗಿದೆ. ನಾವಿಲ್ಲಿ ಹೇಳಲು ಹೊರಟಿರುವುದು, ಔಷಧಿ ಕಂಪನಿಗಳಿಂದ ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳು ಚುನಾವಣಾ ಬಾಂಡ್ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ವಸೂಲಿ ಮಾಡಿರುವ ಬಗ್ಗೆ. ಇವುಗಳಲ್ಲಿ ಕನಿಷ್ಠ ಏಳು ಕಂಪನಿಗಳು ತಮ್ಮ ಚುನಾವಣಾ ಬಾಂಡ್ ಖರೀದಿಯ ಸಮಯದಲ್ಲಿ ಕಳಪೆ ಗುಣಮಟ್ಟದ ಔಷಧಿಗಳನ್ನು ಉತ್ಪಾದಿಸಿದ್ದಕ್ಕಾಗಿ ತನಿಖೆಗೆ ಒಳಪಟ್ಟಿವೆ ಎಂಬುದೇ ಮತ್ತಷ್ಟು ಕಳವಳಕ್ಕೆ ಕಾರಣವಾಗಿದೆ.

ಸಿ. ಸಿದ್ದಯ್ಯ



ಇತ್ತೀಚಿನ ವರ್ಷಗಳಲ್ಲಿ, ದೇಶದಲ್ಲಿ ತಯಾರಿಸಲಾದ ಕೆಮ್ಮು ಸಿರಪ್ ಗಳು ಮತ್ತು ಕಣ್ಣಿನ ಮುಲಾಮುಗಳಿಗೆ ಸಂಬಂಧಿಸಿದ ಸಾವುಗಳು ಮತ್ತು ಸೋಂಕುಗಳ ಘಟನೆಗಳಿಂದಾಗಿ ಜಾಗತಿಕ ಗಮನವು ಭಾರತದಲ್ಲಿನ ಔಷಧೀಯ ಕ್ಷೇತ್ರದತ್ತ ತಿರುಗಿದೆ. ಇದು ಅನೇಕ ರಾಷ್ಟ್ರಗಳಲ್ಲಿ ವರದಿಯಾಗಿದೆ. ಇಂತಹ ಕಳಪೆ ಮತ್ತು ಗುಣಮಟ್ಟವಲ್ಲದ ಔಷಧಿ ತಯ್ಯಾರಿಸುವ ಫಾರ್ಮಾ ಕಂಪನಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲಾಗಿ, ಚುನಾವಣಾ ಬಾಂಡ್ ಮೂಲಕ ಹಣ ಸ್ವೀಕರಿಸುವ ಮೂಲಕ ಇಂತಹ ಕಂಪನಿಗಳ ಜೊತೆ ರಾಜಿ ಮಾಡಿಕೊಳ್ಳಲಾಗುತ್ತಿದೆ ಎಂಬುದೇ ತೀವ್ರ ಕಳವಳಕಾರಿ ಸಂಗತಿಯಾಗಿದೆ.

ಮೋದಿ–10 ವರ್ಷಗಳು–ಭಾಗ–42

ಚುನಾವಣಾ ಬಾಂಡ್ ಯೋಜನೆಯ ಸಾಂವಿಧಾನಿಕತೆ ಮತ್ತು ಕಾನೂನುಬದ್ಧತೆ ಮತ್ತು ಭಾರತೀಯ ಪ್ರಜಾಪ್ರಭುತ್ವಕ್ಕೆ ಒಡ್ಡುವ ಅಪಾಯದ ವಿರುದ್ಧ, ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, Common Cause ಹಾಗೂ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ)–(CPIM) 2017ರಲ್ಲಿ ಸಲ್ಲಿಸಿದ ಅರ್ಜಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ, ಸುಪ್ರೀಂ ಕೋರ್ಟ್ ನ ಐವರು ನ್ಯಾಯಾಧೀಶರ ಪೀಠ ಇತ್ತೀಚೆಗೆ ಚುನಾವಣಾ ಬಾಂಡ್ ಗಳ ವಿವರಗಳನ್ನು ಬಹಿರಂಗಗೊಳಿಸುವಂತೆ ಭಾರತೀಯ ಸ್ಟೇಟ್ ಬ್ಯಾಂಕ್ ಗೆ ಆದೇಶಿಸಿದೆ. ಅಸಂವಿಧಾನಿಕ ಚುನಾವಣಾ ಬಾಂಡ್ ವಿವರ ಬಹಿರಂಗಗೊಳ್ಳುತ್ತಿದ್ದಂತೆ ಬಿಜೆಪಿ ಮತ್ತು ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಒಂದೊಂದೇ ಅವ್ಯವಹಾರಗಳು ಬಟಾ ಬಯಲಾಗುತ್ತಿವೆ. ಸುಪ್ರೀಂ ಕೋರ್ಟ್ ಆದೇಶದಂತೆ ಚುನವಾಣಾ ಬಾಂಡ್ ವ್ಯವಹಾರ ಸಂಪೂರ್ಣ ಬಯಲಾದರೆ ಬಿಜೆಪಿ ಮತ್ತು ಕೆಲವು ರಾಜಕೀಯ ಪಕ್ಷಗಳ ಇನ್ನಷ್ಟು ರಹಸ್ಯಗಳು ಬಯಲಾಗುತ್ತವೆ. ಈ ರೀತಿ ಬಯಲಾದ ಹೃಧಯಹೀನ ವ್ಯವಹಾರಗಳಲ್ಲಿ ಒಂದೆದ್ದರೆ, ಜೀವರಕ್ಷಕ ಔಷಧ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾದ ಏಳು ಔಷಧಿ ತಯ್ಯಾರಕಾ ಸಂಸ್ಥೆಗಳು ಚುನಾವಣಾ ಬಾಂಡ್ ಗಳ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿವೆ ಎಂಬುದು.

ಭಾರತದಲ್ಲಿನ 35 ಔಷಧೀಯ ಕಂಪನಿಗಳು ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಸುಮಾರು 1,000 ಕೋಟಿ ರೂಪಾಯಿಗಳನ್ನು ನೀಡಿವೆ ಎಂದು ಚುನಾವಣಾ ಆಯೋಗವು ಮಾರ್ಚ್ 14 ರಂದು ಬಿಡುಗಡೆ ಮಾಡಿದ ಅಂಕಿಅಂಶಗಳು ಬಹಿರಂಗಪಡಿಸಿದೆ. ಇವುಗಳಲ್ಲಿ ಕನಿಷ್ಠ ಏಳು ಕಂಪನಿಗಳು ಬಾಂಡ್ ಗಳನ್ನು ಖರೀದಿಸಿದಾಗ ಕಳಪೆ ಗುಣಮಟ್ಟದ ಔಷಧಗಳಿಗಾಗಿ ತನಿಖೆ ಎದುರಿಸುತ್ತಿದ್ದವು ಎಂಬುದು, ಜನರ ಆರೋಗ್ಯದ ವಿಷಯದಲ್ಲಿ ಇವರು ಎಷ್ಟೆಲ್ಲಾ ಆಟವಾಡುತ್ತಾರೆ ಎಂಬುದನ್ನು ತಿಳಿದಾಗ ಔಷಧಿಗಳ ಗುಣಮಟ್ಟದ ಬಗ್ಗೆ ಆತಂಕ ಉಂಟಾಗುತ್ತದೆ.

ಐಟಿ ದಾಳಿಗೊಳಗಾದ ಔಷಧಿ ಕಂಪನಿಗಳು

ಯಶೋದಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ; ಇದು ಹೆಲ್ತ್‌ಕೇರ್ ಮತ್ತು ಫಾರ್ಮಾ ಬಾಂಡ್ ಮಾರುಕಟ್ಟೆಯಲ್ಲಿ ಮೊದಲ ಖರೀದಿದಾರರಾಗಿ ಹೊರಹೊಮ್ಮಿದೆ. ಇದು ತಲಾ 1 ಕೋಟಿ ರೂಪಾಯಿ ಮೌಲ್ಯದ 162 ಬಾಂಡ್‌ಗಳನ್ನು ಅಂದರೆ, ಒಟ್ಟು 162 ಕೋಟಿ ರೂ.ಗಳ ಬಾಂಡ್ ಗಳನ್ನು ಪಡೆದುಕೊಂಡಿದೆ. ಯಶೋದಾ ಆಸ್ಪತ್ರೆಯು ಡಿಸೆಂಬರ್ 2020 ರಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಪರಿಶೀಲನೆಯನ್ನು ಎದುರಿಸಿತು.



ಡಾ. ರೆಡ್ಡೀಸ್ ಲ್ಯಾಬೊರೇಟರೀಸ್: ಸಿಎನ್‌ಬಿಸಿ ಟಿವಿ18 ವರದಿ ಮಾಡಿದಂತೆ, ಡಾ. ರೆಡ್ಡೀಸ್ ಲ್ಯಾಬೊರೇಟರೀಸ್, ಪ್ರತಿ ರೂ. 1 ಕೋಟಿ ಮೌಲ್ಯದ 80 ಬಾಂಡ್‌ಗಳನ್ನು, ಒಟ್ಟು ರೂ. 80 ಕೋಟಿಗೆ ಖರೀದಿಸಿದೆ. ಡಾ. ರೆಡ್ಡೀಸ್ ಲ್ಯಾಬೋರೇಟರೀಸ್ ನವೆಂಬರ್ 2023 ರಲ್ಲಿ ತೆರಿಗೆ ಸಂಬಂಧಿತ ಕ್ರಮಗಳನ್ನು ಎದುರಿಸಿತು. ನಿರ್ದಿಷ್ಟವಾಗಿ ಹೇಳುವುದಾದರೆ, ಡಾ. ರೆಡ್ಡೀಸ್ ಲ್ಯಾಬೋರೇಟರೀಸ್ ನ ಡಾ. ಕೆ. ನಾಗೇಂದರ್ ರೆಡ್ಡಿ ತೆರಿಗೆ ವಂಚನೆಯ ಆರೋಪಕ್ಕೆ ಗುರಿಯಾಗಿದ್ದರು.

ಡಿವಿಸ್ ಲ್ಯಾಬೊರೇಟರೀಸ್: 2019 ರ ಫೆಬ್ರುವರಿ 14 ಮತ್ತು 18 ರ ನಡುವೆ, ಆದಾಯ ತೆರಿಗೆ ಕಾಯಿದೆಯ ಸೆಕ್ಷನ್ 132 ರ ಅಡಿಯಲ್ಲಿ ಪಟ್ಟಿಯಲ್ಲಿರುವ ಅಂಕಿಅಂಶಗಳಿಗೆ, ಔಷಧ ಸಂಸ್ಥೆ ಡಿವಿಸ್ ಲ್ಯಾಬೊರೇಟರೀಸ್, ಆದಾಯ ತೆರಿಗೆ ಇಲಾಖೆಯಿಂದ ಶೋಧ ಕಾರ್ಯಾಚರಣೆಯನ್ನು ಎದುರಿಸಿದೆ. ಇದು ರೂ. 55 ಕೋಟಿ ಮೌಲ್ಯದ ಬಾಂಡ್ ಗಳನ್ನು ಖರೀದಿಸಿದೆ.

ಅರಬಿಂದೋ ಫಾರ್ಮಾ ಲಿಮಿಟೆಡ್: ಇದು ರೂ. 50 ಕೋಟಿಗೂ ಹೆಚ್ಚು ದೇಣಿಗೆ ನೀಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಕಂಪನಿಯ ನಿರ್ದೇಶಕ ಪಿ. ಶರತ್ ರೆಡ್ಡಿ ಅವರನ್ನು ನವೆಂಬರ್ 2022 ರಲ್ಲಿ ಬಂಧಿಸಿತ್ತು.

ಟೊರೆಂಟ್ ಫಾರ್ಮಾ: ಗುಜರಾತ್ ಮೂಲದ ಟೊರೆಂಟ್ ಫಾರ್ಮಾ 2019 ರ ಮೇ ಮತ್ತು ಅಕ್ಟೋಬರ್‌ನಲ್ಲಿ 12.5 ಕೋಟಿ ರೂಪಾಯಿ, 2021 ರ ಏಪ್ರಿಲ್‌ನಲ್ಲಿ 7.50 ಕೋಟಿ ರೂಪಾಯಿ, 2022 ರ ಜನವರಿ ಮತ್ತು ಅಕ್ಟೋಬರ್‌ನಲ್ಲಿ 25 ಕೋಟಿ ರೂಪಾಯಿ, 2023 ರ ಅಕ್ಟೋಬರ್‌ನಲ್ಲಿ 7 ಕೋಟಿ ರೂಪಾಯಿ ಮತ್ತು ಜನವರಿ 2024 ರಲ್ಲಿ 25.5 ಕೋಟಿ ರೂಪಾಯಿ ಮೌಲ್ಯದ ಎಲೆಕ್ಟೋರಲ್ ಬಾಂಡ್‌ಗಳನ್ನು ಖರೀದಿಸಿದೆ.

ಈ ಕಂಪನಿ ಮೇ 2019 ರಿಂದ ಜನವರಿ 2024 ರ ನಡುವೆ ಒಟ್ಟರೆಯಾಗಿ ರೂ 77.5 ಕೋಟಿ ಮೌಲ್ಯದ ಚುನಾವಣಾ ಬಾಂಡ್ ಗಳನ್ನು ಖರೀದಿಸಿದೆ.

ಕಂಪನಿಯ ಆಂಟಿಪ್ಲೇಟ್‌ಲೆಟ್ ಮೆಡಿಸಿನ್, ಡಿಪ್ಲಾಟ್–150, ಡ್ರಗ್ ಪರೀಕ್ಷೆಯಲ್ಲಿ ವಿಫಲವಾಗಿದೆ ಮತ್ತು 2018 ರಲ್ಲಿ ಮಹಾರಾಷ್ಟ್ರ ಆಹಾರ ಮತ್ತು ಔಷಧ ಆಡಳಿತವು ಕಳಪೆ ಗುಣಮಟ್ಟ ಎಂದು ಘೋಷಿಸಿತು.

ಅಕ್ಟೋಬರ್ 2019 ರಲ್ಲಿ, ರಕ್ತದೊತ್ತಡವನ್ನು ಕಡಿಮೆ ಮಾಡಲು ಬಳಸಲಾಗುವ ಟೊರೆಂಟ್ ಫಾರ್ಮಾದ ಔಷಧ ಲೋಸರ್ ಎಚ್ (Losar H), ಗುಜರಾತ್ ಆಹಾರ ಮತ್ತು ಔಷಧ ಆಡಳಿತವು ಕಳಪೆ ಗುಣಮಟ್ಟದ್ದಾಗಿದೆ ಎಂದು ಕಂಡುಬಂದಿದೆ. ಸೆಪ್ಟೆಂಬರ್ 2019 ರಲ್ಲಿ, ಯುನೈಟೆಡ್ ಸ್ಟೇಟ್ಸ್ ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ ತನ್ನ ಉತ್ಪಾದನಾ ಘಟಕದಲ್ಲಿ ಪುನರಾವರ್ತಿತ ಗುಣಮಟ್ಟ–ಸಂಬಂಧಿತ ವೈಫಲ್ಯಗಳಿಗಾಗಿ ಸಂಸ್ಥೆಗೆ ಎಚ್ಚರಿಕೆಯನ್ನು ನೀಡಿತು. ಅಂತಹ ಸೂಚನೆಯು ಭಾರತೀಯ ಅಧಿಕಾರಿಗಳಿಂದ ತಪಾಸಣೆಗೆ ಒಳಗಾಗುತ್ತದೆ ಮತ್ತು ಕಂಪನಿಯ ಉತ್ಪಾದನಾ ಪರವಾನಗಿಯನ್ನು ಅಮಾನತುಗೊಳಿಸಬಹುದು. ಆದರೆ, ಗುಜರಾತ್ ಸರ್ಕಾರ ಔಷಧ ಕಂಪನಿ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ.

ಡಿಸೆಂಬರ್ 2021 ರಲ್ಲಿ, ಅದರ ಔಷಧಿ ನಿಕೋರಾನ್ ಎಲ್ವಿ (Nicoran LV), ಹೃದ್ರೋಗಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತಿತ್ತು, ಮಹಾರಾಷ್ಟ್ರ ಆಹಾರ ಮತ್ತು ಔಷಧ ಆಡಳಿತವು ಪರೀಕ್ಷಿಸಿದಾಗ ಗುಣಮಟ್ಟವನ್ನು ಪೂರೈಸಲು ವಿಫಲವಾಗಿದೆ.

ಫೆಬ್ರವರಿ 2023 ರಲ್ಲಿ, ಅತಿಸಾರಕ್ಕೆ ಚಿಕಿತ್ಸೆ ನೀಡಲು ಬಳಸಲಾಗುವ ಅದರ ಲೋಪಮೈಡ್ (Lopamide) ಔಷಧವು ಕರಗುವಿಕೆಯ ಪರೀಕ್ಷೆ (dissolution test)ಯಲ್ಲಿ ವಿಫಲವಾಯಿತು ಮತ್ತು ಕಳಪೆ ಗುಣಮಟ್ಟದ್ದಾಗಿದೆ.

Cipla: 2018 ಮತ್ತು 2022 ರ ನಡುವೆ ಸಿಪ್ಲಾ ತನ್ನ ಔಷಧಿಗಳಿಗಾಗಿ ನಾಲ್ಕು ಶೋಕಾಸ್ ನೋಟಿಸ್‌ಗಳನ್ನು ಸ್ವೀಕರಿಸಿದೆ ಮತ್ತು 2019 ರಿಂದ ರೂ 39.2 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿದೆ.

ಆಗಸ್ಟ್ 2018 ರಲ್ಲಿ, ಅದರ ಆರ್‌ಸಿ ಕೆಮ್ಮು ಸಿರಪ್ ತಪಾಸಣೆಯ ಸಮಯದಲ್ಲಿ ಮಾನದಂಡಗಳನ್ನು ಪೂರೈಸಲು ವಿಫಲವಾಗಿದೆ. ಮುಂದಿನ ವರ್ಷ ರೂ. 14 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿತು.

ಜುಲೈ 2021 ರಲ್ಲಿ, ಅದರ ರೆಮಡಿಸಿವಿರ್ ಔಷಧಿ ಸಿಪ್ರೇಮಿ (Cipremi) ಗೆ ಎರಡು ಬಾರಿ ನೋಟಿಸ್‌ಗಳನ್ನುಸ್ವೀಕರಿಸಿದೆ. ಹೆಟೆರೊ (Hetero) ದಂತೆಯೇ, ಸಿಪ್ರೆಮಿಯು ಅಗತ್ಯಕ್ಕಿಂತ ಕಡಿಮೆ ಪ್ರಮಾಣದ ರೆಮಡಿಸಿವಿರ್ ಅನ್ನು ಹೊಂದಿರುವುದು ಕಂಡುಬಂದಿದೆ. ನವೆಂಬರ್ 2022 ರಲ್ಲಿ ಸಿಪ್ಲಾ ರೂ 25.2 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿತು.

Intas Pharmaceutical: ಅಕ್ಟೋಬರ್ 2022 ರಲ್ಲಿ 20 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿತು. 2020 ರಲ್ಲಿ, ಕಂಪನಿಯ Enapril–5 ಟ್ಯಾಬ್ಲೆಟ್ ಮಹಾರಾಷ್ಟ್ರ ಆಹಾರ ಮತ್ತು ಔಷಧ ಆಡಳಿತವು (FDA) ಯ ಕರಗುವಿಕೆಯ ಪರೀಕ್ಷೆಯಲ್ಲಿ ವಿಫಲವಾಗಿದೆ.

IPCA ಲ್ಯಾಬೊರೇಟರೀಸ್ ಲಿಮಿಟೆಡ್: IPCA Laboratories Limited ನವೆಂಬರ್ 2022 ಮತ್ತು ಅಕ್ಟೋಬರ್ 2023 ರ ನಡುವೆ ರೂ 13.5 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿದೆ. ಅಕ್ಟೋಬರ್ 2018 ರಲ್ಲಿ, ಅದರ ಪರಾವಲಂಬಿ ಔಷಧವಾದ ಲಾರಿಯಾಗೊ(Lariago) ಅಗತ್ಯಕ್ಕಿಂತ ಕಡಿಮೆ ಕ್ಲೋರೋಕ್ವಿನ್ ಫಾಸ್ಫೇಟ್ ಮಟ್ಟವನ್ನು ಹೊಂದಿತ್ತು ಮತ್ತು ಕಳಪೆ ಗುಣಮಟ್ಟದ್ದಾಗಿದೆ ಎಂದು ಕಂಡುಬಂದಿದೆ. ಮುಂಬೈ ಫುಡ್ ಅಂಡ್ ಡ್ರಗ್ಸ್ ಅಡ್ಮಿನಿಸ್ಟ್ರೇಷನ್ ಫ್ಲಾಗ್ ಮಾಡಿದ ಔಷಧವನ್ನು ಐಪಿಸಿಎಯ ಡೆಹ್ರಾಡೂನ್ ಪ್ಲಾಂಟ್‌ನಲ್ಲಿ ತಯಾರಿಸಲಾಗಿದೆ.

Glenmark: 2022 ಮತ್ತು 2023 ರ ನಡುವೆ ಗ್ಲೆನ್‌ಮಾರ್ಕ್ (Glenmark) ತನ್ನ ಗುಣಮಟ್ಟವಿಲ್ಲದ ಔಷಧಿಗಳಿಗಾಗಿ ಐದು ನೋಟೀಸ್‌ಗಳನ್ನು ಸ್ವೀಕರಿಸಿದೆ. ಇವುಗಳಲ್ಲಿ ನಾಲ್ಕನ್ನು ಮಹಾರಾಷ್ಟ್ರ ಆಹಾರ ಮತ್ತು ಔಷಧಗಳ ಆಡಳಿತವು ತನ್ನ ರಕ್ತದೊತ್ತಡವನ್ನು ನಿಯಂತ್ರಿಸುವ ಔಷಧಿ ಟೆಲ್ಮಾವನ್ನು ಗುಣಮಟ್ಟವಲ್ಲ ಎಂದು ಫ್ಲಾಗ್ ಮಾಡಿದೆ, ಹೆಚ್ಚಾಗಿ ಕರಗುವಿಕೆಯ ಪರೀಕ್ಷೆಯಲ್ಲಿ ವಿಫಲವಾಗಿದೆ. ಈ ಫಾರ್ಮಾಸ್ಯುಟಿಕಲ್ ಕಂಪನಿಯು ನವೆಂಬರ್ 2022 ರಲ್ಲಿ 9.75 ಕೋಟಿ ರೂಪಾಯಿ ಎಲೆಕ್ಟೋರಲ್ ಬಾಂಡ್‌ಗಳನ್ನು ಖರೀದಿಸಿದೆ.

ಪುಟ 14 ಕ್ಕೆ

ಮೋದಿ ಸರ್ಕಾರದ ಸುಳ್ಳು, ಹಸಿಸುಳ್ಳು ಮತ್ತು ಭರ್ಜರಿ ಸುಳ್ಳುಗಳು

ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ

ಲೋಕಸಭಾ ಚುನಾವಣೆ: ಮುಖ್ಯ ಸಮಸ್ಯೆಗಳು

ಅನು: ಸಿ.ಆರ್. ಶಾನಭಾಗ

ಘೋಷಣೆ

2020ರ ಸೆಪ್ಟೆಂಬರ್‌ನಲ್ಲಿ ಕಾರ್ಮಿಕ ಸಂಹಿತೆಗಳನ್ನು ಅಂಗೀಕರಿಸುವ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು "ಹೊಸ ಕಾರ್ಮಿಕ ಸಂಹಿತೆಗಳು ಕನಿಷ್ಠ ವೇತನ ಮತ್ತು ಸಕಾಲಿಕ ವೇತನ ಪಾವತಿಯನ್ನು ಸಾರ್ವತ್ರಿಕಗೊಳಿಸುತ್ತವೆ. ಅವು ಕಾರ್ಮಿಕರ ಔದ್ಯೋಗಿಕ ಸುರಕ್ಷತೆಗೆ ಆದ್ಯತೆ ನೀಡುತ್ತವೆ. ಈ ಸುಧಾರಣೆಗಳು ಉತ್ತಮ ಕೆಲಸದ ವಾತಾವರಣಕ್ಕೆ ಕೊಡುಗೆ ನೀಡುತ್ತವೆ, ಇದು ಆರ್ಥಿಕ ಬೆಳವಣಿಗೆಯ ವೇಗವನ್ನು ಹೆಚ್ಚಿಸುತ್ತದೆ. ಈ ಕಾರ್ಮಿಕ ಸುಧಾರಣೆಗಳು 'ವಹಿವಾಟು ಮಾಡುವುದನ್ನು ಸುಲಭಗೊಳಿಸುತ್ತವೆ': ಎಂದಿದ್ದರು

ವಾಸ್ತವ

ಮೋದಿ ಸರ್ಕಾರವು ಜಾರಿಗೊಳಿಸಿದ ಕಾರ್ಮಿಕ ಸಂಹಿತೆಗಳು ಈಗ ಅಸ್ತಿತ್ವದಲ್ಲಿರುವ, ಕಾರ್ಮಿಕರು ಕಷ್ಟಪಟ್ಟು ಗಳಿಸಿದ ಮೂಲಭೂತ ಹಕ್ಕುಗಳ ಮೇಲೆ ದಾಳಿ ಮಾಡುವ ಮೂಲಕ ದೊಡ್ಡ ಕಾರ್ಪೊರೇಟ್‌ಗಳಿಗೆ 'ಸುಲಭ ವಹಿವಾಟ'ನ್ನು ಖಚಿತಪಡಿಸುತ್ತದೆ.

ವೇತನ ಸಂಹಿತೆಯು ಕನಿಷ್ಠ ವೇತನದ ನಿಗದಿ, ಬೋನಸ್ ಲೆಕ್ಕಾಚಾರ, ವೇತನದ ಸಕಾಲಿಕ ಪಾವತಿ, ವೇತನಕ್ಕೆ ಸಂಬಂಧಿಸಿದ ಇತರ ಸಂಭಾವನೆಗಳು ಇತ್ಯಾದಿಗಳನ್ನು ಖಚಿತಪಡಿಸುವ, ಕನಿಷ್ಠ ವೇತನ ಕಾಯಿದೆ, ವೇತನ ಪಾವತಿ ಕಾಯಿದೆ, ಬೋನಸ್ ಪಾವತಿ ಮತ್ತು ಸಮಾನ ಸಂಭಾವನೆ ಕಾಯಿದೆಗಳನ್ನು ಬದಲಿಸಿದೆ,

ಈ ಮೂಲಕ ಕನಿಷ್ಠ ವೇತನವನ್ನು ಈ ಹಿಂದೆ ಅಂಗೀಕರಿಸಿದ್ದ ಮತ್ತು ಇಂಡಿಯನ್ ಲೇಬರ್ ಕಾನ್ಫರೆನ್ಸ್ ಮತ್ತು ಸುಪ್ರೀಂ ಕೋರ್ಟ್ ಅನುಮೋದಿಸಿದ ಮಟ್ಟಕ್ಕೆ ಹೆಚ್ಚಿಸುವುದನ್ನು ಪರಿಗಣಿಸಲು ಸಹ ಮೋದಿ ಸರ್ಕಾರ ನಿರಾಕರಿಸಿದೆ, ಆದರೆ ಟ್ರೇಡ್ ಯೂನಿಯನ್‌ಗಳು ಕೌಶಲ್ಯರಹಿತ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ 26,000/- ವೇತನ ನಿಗದಿಗಾಗಿ ಆಂದೋಲನ ನಡೆಸುತ್ತಿವೆ.

ಈ ಸಂಹಿತೆಯು ಅಸಂಘಟಿತ ರಂಗದಲ್ಲಿರುವ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಖಾತ್ರಿಪಡಿಸುವುದಿಲ್ಲ. ಮೋದಿ ಸರ್ಕಾರವು 2017 ರಲ್ಲಿ ರೂ. 176/- ಗೆ 'ತಳಮಟ್ಟದ ದಿನ ಗೂಲಿ'ಯನ್ನು ನಿಗದಿಪಡಿಸಿತು ಮತ್ತು 2023 ರಲ್ಲಿ ಅದು ರೂ. 178/- ಗೆ ಅಂದರೆ ಕೇವಲ 2/- ಹೆಚ್ಚಳ ಮಾಡಲಾಗಿದೆ.

ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ

ಈ ಸಂಹಿತೆಯು ಕಾರ್ಮಿಕರ ಶಾಸನಬದ್ಧ ಕಾರ್ಯಸ್ಥಳದ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯನ್ನು ಕಾನೂನುಬದ್ಧಗೊಳಿಸುತ್ತದೆ. ಗುತ್ತಿಗೆ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರು ಹೆಚ್ಚು ತೊಂದರೆಗೊಳಗಾಗಿದ್ದಾರೆ. ಕೋವಿಡ್ ಸಂಬಂಧಿತ ಲಾಕ್‌ಡೌನ್ ಸಮಯದಲ್ಲಿ ಬೆಳಕಿಗೆ ಬಂದ, ವಲಸೆ ಕಾರ್ಮಿಕರಿಗೆ ಕೆಲವು ರಕ್ಷಣೆಯನ್ನು ಒದಗಿಸಿದ ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯಿದೆಯು ಈ ನಿಟ್ಟಿನ ಕಾನೂನುಗಳಲ್ಲಿ ಒಂದಾಗಿತ್ತು ಅಂದರೆ ಅದು ಇನ್ನು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ ಮತ್ತು ಅದರ ಎಲ್ಲಾ ರಕ್ಷಣಾತ್ಮಕ ನಿಬಂಧನೆಗಳನ್ನು ದುರ್ಬಲಗೊಳಿಸಲಾಗಿದೆ ಅಥವಾ ಬಿಟ್ಟುಬಿಡಲಾಗಿದೆ.

ಕೈಗಾರಿಕಾ ಸಂಬಂಧಗಳ ಸಂಹಿತೆ

ಈ ಸಂಹಿತೆಯು ಕಾರ್ಮಿಕರ ಸಂಘಟನೆ ಮತ್ತು ಸಾಮೂಹಿಕ ಕ್ರಿಯೆಯ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ. ಇದರ ಜೊತೆಗೆ, ಸ್ಥಿರ ಅವಧಿಯ ಉದ್ಯೋಗ, ಗುತ್ತಿಗೆ ಕೆಲಸ ಮುಂತಾದ ದುರ್ಬಲ ಸ್ವರೂಪದ ಉದ್ಯೋಗವನ್ನು ಉತ್ತೇಜಿಸಲಾಗುತ್ತದೆ ಮತ್ತು ಉದ್ಯೋಗ ಸಂಬಂಧಗಳ ಸ್ವರೂಪದಲ್ಲಿ ಗಂಭೀರ ಬದಲಾವಣೆಗಳನ್ನು ಮಾಡಲಾಗಿದೆ. ಹೀಗಾಗಿ, ಒಟ್ಟಾರೆ ಶೋಷಣೆ ಹೆಚ್ಚುತ್ತಿರುವಾಗ, ಕೆಲಸದ ಸ್ಥಳದಲ್ಲಿ ಒಂದೇ ಕೆಲಸವನ್ನು ನಿರ್ವಹಿಸುವ ಕಾರ್ಮಿಕರನ್ನು ವಿವಿಧ ವೇತನಗಳು ಮತ್ತು ಕೆಲಸದ ಪರಿಸ್ಥಿತಿಗಳಿಗೆ ಒಳಪಡಿಸುವ ಮೂಲಕ ವಿಂಗಡಿಸಲಾಗಿದೆ. ಇದು ಅವರ ಸಂಘಟಿತರಾಗುವ ಮತ್ತು ಸಾಮೂಹಿಕ ಕ್ರಿಯೆಗಳಿಗೆ ಅಡ್ಡಿಯಾಗುತ್ತದೆ.

ಸಾಮಾಜಿಕ ಭದ್ರತ್ರಾ ಸಂಹಿತೆ:

ಈ ಸಂಹಿತೆ ಕಾರ್ಮಿಕರಿಗೆ ಯಾವುದೇ ನಿರ್ದಿಷ್ಟ ಸೌಲಭ್ಯಗಳನ್ನು ಪ್ರಸ್ತಾಪಿಸುವುದಿಲ್ಲ. ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸಲಾಗಿಲ್ಲ. ಈ ಹಿಂದೆ ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಒದಗಿಸುವ ನಿರ್ದಿಷ್ಟ ಕಾನೂನುಗಳಿಂದ ವ್ಯಾಪ್ತಿಗೆ ಒಳಗಾದ ಬೀಡಿ , ಕಬ್ಬಿಣದ ಅದಿರು ಗಣಿ, ಅಭ್ರಕ ಗಣಿ, ಸುಣ್ಣದ ಕಲ್ಲು ಗಣಿ ಮತ್ತು ಡಾಲಮೈಟ್ ಗಣಿ ಕಾರ್ಮಿಕರಂತಹ ದೊಡ್ಡ ವಿಭಾಗದ ಕಾರ್ಮಿಕರು ಈ ಸಂಹಿತೆಯಡಿ ಈಗ ಇವುಗಳಿಂದ ವಂಚಿತರಾಗಿದ್ದಾರೆ. ಅವರ ಸಾಮಾಜಿಕ ಭದ್ರತೆಗಾಗಿ ಸೆಸ್ ಸಂಗ್ರಹವನ್ನು ಜಿಎಸ್‌ಟಿಯ ಪರಿಚಯದೊಂದಿಗೆ ಕೈಬಿಡಲಾಗಿದೆ . ನಿರ್ಮಾಣ ಕಾರ್ಮಿಕರ ವಿಷಯದಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿ ಕಾಯ್ದೆ ಮತ್ತು ಕುಂದುಕೊರತೆ ಪರಿಹಾರ ಕಾರ್ಯವಿಧಾನದ ಅಡಿಯಲ್ಲಿ ಸೆಸ್‌ಗೆ ಸಂಬಂಧಿಸಿದ ನಿಬಂಧನೆಗಳನ್ನು ಹೆಚ್ಚು ದುರ್ಬಲಗೊಳಿಸಲಾಗಿದೆ.

ಇಪಿಎಫ್ ಮತ್ತು ಇಎಸ್‌ಐನಂತಹ ಯೋಜನೆಗಳನ್ನು ಕಿತ್ತುಹಾಕಲು ಸಂಹಿತೆ ಅಡಿಪಾಯ ಹಾಕಿದೆ. ಗ್ರಾಚ್ಯುಟಿ ಬೇಡಿಕೆಯನ್ನೂ ಕಡೆಗಣಿಸಲಾಗಿದೆ.

ಈ ಸಂಹಿತೆಯ ಪರಿಚಯವು ಸಂಘಟಿತ ವಲಯದ ಕಾರ್ಮಿಕರ ಕೆಲಸದ ಪರಿಸ್ಥಿತಿಗಳ ಮೇಲೆ ಗಂಭೀರವಾಗಿ ಪರಿಣಾಮ ಬೀರುತ್ತದೆ ಮತ್ತು ಗುತ್ತಿಗೆ ಕಾರ್ಮಿಕರ ಜೀವನೋಪಾಯ ಮತ್ತು ಜೀವನವನ್ನು ಇನ್ನಷ್ಟು ಅಸ್ಥಿರಗೊಳಿಸುತ್ತದೆ.

ಉದ್ಯೋಗಗಳು ಮತ್ತು ಕೆಲಸದ ಪರಿಸ್ಥಿತಿಗಳು

ತಯಾರಿಕಾ ವಲಯದಲ್ಲಿನ ಉದ್ಯೋಗಗಳು 2012 ರಲ್ಲಿ ಶೇಕಡಾ 12.85 ರಿಂದ 2018 ರಲ್ಲಿ ಶೇ. 11.5 ಕ್ಕೆ ಕುಸಿದಿದೆ ಮತ್ತು 2022 ರಲ್ಲಿ ಮಾತ್ರ 2012 ರ ಮಟ್ಟವನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾಯಿತು ಆದರೂ ಅದು ಬಾಂಗ್ಲಾದೇಶಕ್ಕಿಂತ (16 ಶೇಕಡಾ) ಕಡಿಮೆಯಾಗಿದೆ.

2013 ಮತ್ತು 2022 ರ ನಡುವೆ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಖಾಯಂ ಉದ್ಯೋಗವು 2.7 ಲಕ್ಷದಷ್ಟು ಕಡಿಮೆಯಾಗಿದೆ. ಗುತ್ತಿಗೆ ಮತ್ತು ಹೊರಗುತ್ತಿಗೆ ಕಾರ್ಮಿಕರ ಸಂಖ್ಯೆ ಇದೇ ಅವಧಿಯಲ್ಲಿ 19 ಶೇಕಡಾದಿಂದ 42.5 ಶೇಕಡಾಕ್ಕೆ ಏರಿದೆ.

ILO ದತ್ತಾಂಶದ ಪ್ರಕಾರ ಭಾರತದಲ್ಲಿ ಸರ್ಕಾರಿ ಮತ್ತು ಸಾರ್ವಜನಿಕ ವಲಯದಲ್ಲಿ ಉದ್ಯೋಗವು 3.8 ಪ್ರತಿಶತಕ್ಕೆ ಕುಸಿದು ಅತ್ಯಂತ ಕಡಿಮೆಯಾಗಿದೆ. ಇದು ಅರ್ಜೆಂಟೀನಾದಲ್ಲಿ ಶೇ.16.9, ಬ್ರೆಜಿಲ್ ಶೇ.12.3, ಚೀನಾ ಶೇ.28, ಯುಎಸ್‌ಐ ಶೇ.13.3, ಯುಕೆ ಶೇ.21.5, ರಷ್ಯಾ ಶೇ.40.6 ಮತ್ತು ಕ್ಯೂಬಾ ಶೇ.77 ಇದೆ.

ಸಾರ್ವಜನಿಕ ರಂಗದ ಬ್ಯಾಂಕುಗಳ ಸಿಬ್ಬಂದಿಗಳ ಸಂಖ್ಯೆಯಲ್ಲಿ 1 ಲಕ್ಷಕ್ಕೂ ಹೆಚ್ಚು ಕುಸಿತವಾಗಿದ್ದು, ಬ್ಯಾಂಕ್-ಮಿತ್ರರು ಅಥವಾ ಬ್ಯಾಂಕ್-ಕರೆಸ್ಪೊಂಡೆಂಟ್ಸ್ ಗಳ ಸಂಖ್ಯೆಯು 35 ಲಕ್ಷ ಮೀರಿದೆ ಅಂದರೆ ಖಾಯಂ ಬ್ಯಾಂಕ್ ಉದ್ಯೋಗಿಗಳಿಗಿಂತ ನಾಲ್ಕು ಪಟ್ಟು ಹೆಚ್ಚಾಗಿದೆ.

ಅದೇ ಅವಧಿಯಲ್ಲಿ ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿನ ಸಿಬ್ಬಂದಿ ಬಲವು 2014 ರಲ್ಲಿನ 3,35,615 ರಿಂದ 2023 ರಲ್ಲಿ 7,45,612 ಕ್ಕೆ ದ್ವಿಗುಣಗೊಂಡಿದೆ . ಖಾಸಗಿ ವಲಯದಲ್ಲಿ ಅಥವಾ ಗುತ್ತಿಗೆ ಉದ್ಯೋಗಗಳಲ್ಲಿ ಯಾವುದೇ ಮೀಸಲಾತಿ ಅನ್ವಯಿಸುವುದಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ಸೆಂಟರ್ ಫಾರ್ ಮಾನಿಟರಿಂಗ್ ದಿ ಇಂಡಿಯನ್ ಎಕಾನಮಿ (CMIE) ಸಂಸ್ಥೆಯ ಅಕ್ಟೋಬರ್ 2023 ರ ಅಂಕಿಅಂಶಗಳು ಸಣ್ಣ ಅಂಗಡಿಗಳಲ್ಲಿ ದುಡಿಯುವ ದೈನಂದಿನ ಕೂಲಿ ಕಾರ್ಮಿಕರ ಸಂಖ್ಯೆಯಲ್ಲಿ 1.03 ಕೋಟಿ ಇಳಿಕೆಯಾಗಿದೆ ಮತ್ತು ಸಂಬಳ ಪಡೆಯುವ ಕಾರ್ಮಿಕರ ಸಂಖ್ಯೆಯಲ್ಲಿ 46 ಲಕ್ಷ ಕಡಿಮೆಯಾಗಿದೆ ಎಂದು ಬಹಿರಂಗಪಡಿಸುತ್ತದೆ.

ಆವರ್ತಕ ಕಾರ್ಮಿಕ ಬಲ ಸಮೀಕ್ಷೆ (PLFS) 2022-23 ರ ಪ್ರಕಾರ, ಹಂಗಾಮಿ ಕಾರ್ಮಿಕರ ಸರಾಸರಿ ದೈನಂದಿನ ವೇತನವು ಕೇವಲ ರೂ. 403 ಅಂದರೆ ರೂ. ಅವನು ಅಥವಾ ಅವಳು ಎಲ್ಲಾ 30 ದಿನಗಳವರೆಗೆ ಕೆಲಸ ಪಡೆದರೆ ತಿಂಗಳಿಗೆ 12,075 ರೂ.

ಪುರುಷ ಹಂಗಾಮಿ ಕೆಲಸಗಾರರು ತಿಂಗಳಿಗೆ ರೂ. 12,990 ಆದರೆ ಮಹಿಳಾ ಕಾರ್ಮಿಕರಿಗೆ ಕೇವಲ ರೂ. 8,385 ರೂ.ಪಡೆಯುತ್ತಾರೆ. ಸ್ವಯಂ ಉದ್ಯೋಗಿ ವರ್ಗದಲ್ಲಿ ಸರಾಸರಿ ಗಳಿಕೆ ತಿಂಗಳಿಗೆ ರೂ. 13,131, ಪುರುಷರು ಸರಾಸರಿ ರೂ.15,197 ಪಡೆಯುತ್ತಿದ್ದರೆ ಸ್ವಯಂ ಉದ್ಯೋಗಿ ಮಹಿಳೆಯರು ಕೇವಲ ರೂ. 5,516. ಪಡೆಯುತ್ತಾರೆ

ನಿಯಮಿತ ವೇತನ ಅಥವಾ ಸಂಬಳ ಪಡೆಯುವವರು ತಿಂಗಳಿಗೆ ಸರಾಸರಿ ರೂ. 19,492, ಪುರುಷರು ರೂ. 20,666 ಮತ್ತು ಮಹಿಳೆಯರು ರೂ. 15,722 ಪಡೆಯುತ್ತಾರೆ.

ಇವು ಅಸಹಜ ಆದಾಯದ ಮಟ್ಟಗಳು. ಕೇವಲ 21 ಪ್ರತಿಶತದಷ್ಟು ಕಾರ್ಮಿಕರು ನಿಯಮಿತ ಅಥವಾ ಸಂಬಳದ ನೌಕರರು ಎಂದು ಗಮನಿಸಬೇಕು. ಉಳಿದವರಲ್ಲಿ ಹೆಚ್ಚಿನವರು (ಶೇ. 57) ಸ್ವಯಂ ಉದ್ಯೋಗಿಗಳು ಮತ್ತು ಶೇಕಡಾ 22 ರಷ್ಟು ಸಾಂದರ್ಭಿಕ/ಹಂಗಾಮಿ ಕೆಲಸಗಾರರು. ಈ ಅಂಕಿಅಂಶಗಳು ಪುರುಷರು ಮತ್ತು ಮಹಿಳೆಯರ ವೇತನದಲ್ಲಿನ ನಿರಂತರ ವ್ಯತ್ಯಾಸವನ್ನು ಎತ್ತಿ ತೋರಿಸುತ್ತವೆ .

ಅಸಂಘಟಿತ ವಲಯದ ಕಾರ್ಮಿಕರು

ಅಪಾರ ಸಂಖ್ಯೆಯ ಅಸಂಘಟಿತ ವಲಯದ ಕಾರ್ಮಿಕರಿಗೆ ಯಾವುದೇ ಪರಿಹಾರ ನೀಡಲು ಏನೂ ಮಾಡಲಾಗುತ್ತಿಲ್ಲ. 2021-22ರ ಆರ್ಥಿಕ ಸಮೀಕ್ಷೆಯ ಪ್ರಕಾರ, 2019-20ರಲ್ಲಿ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಒಟ್ಟು ಜನರ ಸಂಖ್ಯೆ ಸುಮಾರು 43.99 ಕೋಟಿ. ಅವರನ್ನು ರಕ್ಷಿಸಲು ಯಾವುದೇ ಕಾನೂನು ಚೌಕಟ್ಟು ಇಲ್ಲದೆ ಅವರು ಅತ್ಯಂತ ಕಳಪೆ ಸಂಬಳದ, ಅಪಾಯಕಾರಿ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಇಟ್ಟಿಗೆ ಗೂಡುಗಳಲ್ಲಿ, ನಿರ್ಮಾಣ ಕೆಲಸಗಳಲ್ಲಿ ಮತ್ತು ನೈರ್ಮಲ್ಯದಲ್ಲಿ ಕೆಲಸ ಮಾಡುವವರಿಗೆ ಯಾವುದೇ ರೀತಿಯ ರಕ್ಷಣಾ ಸಾಧನಗಳು ಲಭ್ಯವಿಲ್ಲ. ಒಳಚರಂಡಿ ಮತ್ತು ಮ್ಯಾನ್‌ಹೋಲ್‌ಗಳ ಅಡಚಣೆಗಳನ್ನು ತೆಗೆದು ಹಾಕಲು ಕಳುಹಿಸಲಾದ ನೈರ್ಮಲ್ಯ ಕಾರ್ಮಿಕರಲ್ಲಿ ಬಹಳ ಕಾರ್ಮಿಕರ ಸಾವುಗಳನ್ನು ಪ್ರತಿ ವರ್ಷ ನೋಡುತ್ತೇವೆ. ಇವರಲ್ಲಿ ಬಹುತೇಕರು ಹಂಗಾಮಿ ನೌಕರರಾಗಿರುವುದರಿಂದ ಪರಿಹಾರ ನೀಡಲಾಗುತ್ತಿಲ್ಲ. ವಿಪರ್ಯಾಸವೆಂದರೆ, ಪರಿಹಾರದ ಮಾರ್ಗವಾಗಿ, ಮೃತ ಕಾರ್ಮಿಕರ ಕುಟುಂಬದ ಸದಸ್ಯರಿಗೆ ಅವರ ಕೆಲಸವನ್ನು ನೀಡಲಾಗುತ್ತದೆ, ಪೀಳಿಗೆಯಿಂದ ಪೀಳಿಗೆಗೆ ಕೆಟ್ಟ ರೀತಿಯ ಶೋಷಣೆಯನ್ನು ರವಾನಿಸಲಾಗುತ್ತದೆ.

ಕನಿಷ್ಠ ವೇತನ

ಮೋದಿ ಯುಗದಲ್ಲಿ ಕನಿಷ್ಠ ವೇತನ ಹೆಚ್ಚಳದ ಬೇಡಿಕೆಗಾಗಿ ಕಾರ್ಮಿಕರು ಹೋರಾಟ ನಡೆಸುತ್ತಿದ್ದಾರೆ, ಆದರೆ ಸರ್ಕಾರವು ಅತ್ಯಂತ ನಿಷ್ಠುರ ಮತ್ತು ಅಸಡ್ಡೆ ಧೋರಣೆ ಅನುಸರಿಸಿದೆ.

ಕಾರ್ಮಿಕ ಸಮ್ಮೇಳನದ ಶಿಫಾರಸುಗಳ ಹೊರತಾಗಿಯೂ, ಮೋದಿ ಸರ್ಕಾರವು ಕೃಷಿ ಕಾರ್ಮಿಕರಿಗೆ ಮತ್ತು ಕೈಗಾರಿಕಾ/ಸೇವಾ ವಲಯದ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಹೆಚ್ಚಿಸಲು ನಿರಾಕರಿಸಿತು.

ಕಾರ್ಮಿಕರಿಗೆ ಕಡಿಮೆ ವೇತನವನ್ನು ನೀಡುವ ಮೂಲಕ ದೇಶೀಯ ಮತ್ತು ವಿದೇಶಿ -ಕಾರ್ಪೊರೇಟ್ ವಿಭಾಗಗಳನ್ನು-ತೃಪ್ತಿಪಡಿಸಲು ಸರ್ಕಾರ ಬಯಸುತ್ತದೆ ಮತ್ತು ಉದ್ಯೋಗದಾತರ ಅನುಕೂಲಕ್ಕಾಗಿ ಸುಲಭವಾಗಿ ನೇಮಿಸಲು ಮತ್ತು ಕೆಲಸದಿಂದ ವಜಾಗೊಳಿಸಲು ಹೊಸ ಸಂಹಿತೆಗಳನ್ನು ಪರಿಚಯಿಸಿದೆ.

ಕಾರ್ಮಿಕ ವರ್ಗದ ಹಕ್ಕುಗಳನ್ನು ಬೆಂಬಲಿಸಿ ! ಬಿಜೆಪಿಯನ್ನು ಸೋಲಿಸಿ!





ವಿಜ್ಞಾನದ ಮುನ್ನಡೆಗೆ ತೊಡಕಾಗಿರುವ ಬಂಡವಾಳಶಾಹಿ

ನಮ್ಮ ಮುಂದೆ ಇಂದು ಸಂಭವಿಸುತ್ತಿರುವ ವೈಜ್ಞಾನಿಕ ಆವಿಷ್ಕಾರಗಳ ವಿಚಾರಶೂನ್ಯ ಅಳವಡಿಕೆಯ ಸಂಬಂಧವಾಗಿ ಎದ್ದು ಕಾಣುವ ಉದಾಹರಣೆಯು ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದೆ. ಕೃತಕ ಬುದ್ಧಿಮತ್ತೆಯು ಸೃಷ್ಟಿಸುವ ಬೃಹತ್ ನಿರುದ್ಯೋಗದ ಸಮಸ್ಯೆಗೆ ಮಾತ್ರ ನನ್ನ ಕಾಳಜಿ ಸೀಮಿತಗೊಂಡಿದೆ. ಯಂತ್ರಗಳ ಬಳಕೆಯ ನಂತರವೂ ಮೆಟ್ರೊಪಾಲಿಟನ್ ದೇಶಗಳಲ್ಲಿ ಬೃಹತ್ ಪ್ರಮಾಣದ ನಿರುದ್ಯೋಗವು ಐತಿಹಾಸಿಕವಾಗಿ ಉಂಟಾಗದಿರುವ ಕಾರಣದಲ್ಲಿ ಎರಡು ಭಾಗಗಳಿವೆ: ಮೊದಲನೆಯದು, ವಸಾಹತು ಮಾರುಕಟ್ಟೆಗಳು ಸುಲಭವಾಗಿ ಒದಗುತ್ತಿದ್ದುದರಿಂದಾಗಿ, ತಾಂತ್ರಿಕ ಬದಲಾವಣೆಗಳ ಪರಿಣಾಮವಾಗಿ ಉಂಟಾದ ನಿರುದ್ಯೋಗವನ್ನು ವಸಾಹತುಗಳಿಗೆ ವರ್ಗಾಯಿಸಲಾಯಿತು. ಎರಡನೆಯದು, ತಾಂತ್ರಿಕ ಬದಲಾವಣೆಗಳ ಪರಿಣಾಮವಾಗಿ, ಉದ್ಯೋಗ ಕಳೆದುಕೊಂಡವರು ಅಥವಾ ಉದ್ಯೋಗ ಹುಡುಕುವವರು ವಿದೇಶಗಳಿಗೆ ವಲಸೆ ಹೋದರು. "ದೀರ್ಘ ಹತ್ತೊಂಬತ್ತನೇ ಶತಮಾನ"ದ ಉದ್ದಕ್ಕೂ (1789-1919), ಸುಮಾರು 5 ಕೋಟಿ ಯುರೋಪಿಯನ್ನರು ಕೆನಡಾ, ಅಮೆರಿಕಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಂತಹ ಪ್ರದೇಶಗಳಿಗೆ ವಲಸೆ ಹೋದರು. ಇಂದಿನ ಪರಿಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿದೆ. ವಸಾಹತುಶಾಹಿಯು ಇನ್ನೂ ಅಸ್ತಿತ್ವದಲ್ಲಿದೆ. ಆದರೆ ಮೂರನೇ ಜಗತ್ತಿನ ದೇಶಗಳ ಮಾರುಕಟ್ಟೆಗಳು ಮೆಟ್ರೊಪಾಲಿಟನ್ ದೇಶಗಳ ಒಟ್ಟಾರೆ ಬೇಡಿಕೆಯಲ್ಲಿ ಉದ್ಭವವಾಗುವ ಯಾವುದೇ ಕೊರತೆಯನ್ನು ಕಡಮೆ ಮಾಡುವಲ್ಲಿ ಅಸಮರ್ಪಕವಾಗಿವೆ. ಅಂತೆಯೇ, ಪ್ರಭುತ್ವವು ದೇಶದ ಒಟ್ಟಾರೆ ಬೇಡಿಕೆಯ ಕೊರತೆಯನ್ನು ನಿಭಾಯಿಸುವುದು ಸಾಧ್ಯವಾಗುತ್ತಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನುವಾದ: ಕೆ.ಎಂ.ನಾಗರಾಜ್

ಕಳೆದ ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಸಂಭವಿಸಿದ ವಿಜ್ಞಾನದ ಪೂರ್ಣ ಅರಳುವಿಕೆಯ ಅಂತಸ್ಸಾರದಲ್ಲಿ ಒಂದು ವಿರೋಧಾಭಾಸವಿದೆ. ವಿಜ್ಞಾನದ ಪೂರ್ಣ ಅರಳುವಿಕೆಯು ಸಾರಭೂತವಾಗಿ ಮಾನವ ಸ್ವಾತಂತ್ರ್ಯವನ್ನು ಅಗಾಧವಾಗಿ ಹೆಚ್ಚಿಸುವ ಸಾಧ್ಯತೆಯನ್ನು ಹೊಂದಿದೆ ಮತ್ತು ಮನುಷ್ಯ-ಪ್ರಕೃತಿಯ ದ್ವಂದ್ವದಲ್ಲಿ ವಿಜ್ಞಾನವು ಮನುಷ್ಯನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಇದೇ ಸತ್ಯ/ಅಂತಿಮ ಎಂಬ ನಿಲುವು ತಳೆಯದೆ ನಿರಂತರವಾಗಿ ಸ್ವಯಂ-ಪ್ರಶ್ನೆ ಮಾಡಿಕೊಳ್ಳುವ ಮೂಲಕ ವೈಜ್ಞಾನಿಕ ಆಚರಣೆಯು ಈಗಾಗಲೇ "ತಿಳಿದಿರುವುದನ್ನು" ಮೀರಿ ಹೋಗುವ ಗುರಿಯನ್ನು ಸದಾ ಕಾಲವೂ ಹೊಂದಿರುತ್ತದೆ. ಹಾಗಾಗಿ ಅದು ಮನುಷ್ಯರು ವಿಮೋಚನೆಗಾಗಿ ಕೈಗೊಳ್ಳುವ ಒಂದು ಸಾಮೂಹಿಕ ಕ್ರಿಯೆಯಾಗುವ ಸಾಧ್ಯತೆಯನ್ನು ಹೊಂದಿರುತ್ತದೆ. ಆದರೆ, ಈ ಸ್ವಾತಂತ್ರ್ಯದ ಭರವಸೆಯು ಇನ್ನೂ ಒಂದು ಗಮನಾರ್ಹ ಮಟ್ಟದಲ್ಲಿ ಈಡೇರಿಲ್ಲ. ಇದನ್ನು ಪೂರ್ಣವಾಗಿ ಸಿದ್ಧಿಸಿಕೊಳ್ಳುವುದು ಇನ್ನೂ ದೂರದ ಮಾತೇ ಸರಿ. ಆದರೆ, ಈವರೆಗಿನ ವಿಜ್ಞಾನದ ಪೂರ್ಣ ಅರಳುವಿಕೆಯನ್ನು ಕೆಲವು ವ್ಯಕ್ತಿಗಳು ಉಳಿದವರ ಮೇಲೆ ಪ್ರಾಬಲ್ಯ ಸಾಧಿಸಲು ಮತ್ತು ಕೆಲವು ದೇಶಗಳು ಉಳಿದವರ ಮೇಲೆ ಅಧಿಪತ್ಯ ಸಾಧಿಸಲು ಬಳಸಿಕೊಂಡಿವೆ ವಿರೋಧಾಭಾಸವೆಂದರೆ, ಮಾನವ ಸ್ವಾತಂತ್ರ್ಯವನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿರುವ ವೈಜ್ಞಾನಿಕ ಆಚರಣೆಯನ್ನೂ ಸಹ ಮಾನವರ ಮೇಲಿನ ಅಧಿಪತ್ಯವನ್ನು ಹೆಚ್ಚಿಸಿಕೊಳ್ಳಲು, ಅಂದರೆ, ಮಾನವ ಸ್ವಾತಂತ್ರ್ಯವನ್ನು ದುರ್ಬಲಗೊಳಿಸಲು ಬಳಸಿಕೊಳ್ಳಲಾಗಿದೆ.

ಈ ವಿರೋಧಾಭಾಸದ ಬೇರುಗಳು, ವೈಜ್ಞಾನಿಕ ಪ್ರಗತಿಯು ಮುಕ್ತವಾಗಿ ಸಾಗಲು ಸಮಾಜದ ಮೇಲೆ ಚರ್ಚ್ ಹೊಂದಿರುವ ಬಿಗಿ ಹಿಡಿತವನ್ನು ಸಡಿಲಿಸುವುದು ಅತ್ಯಗತ್ಯ ಎಂಬ ಅಂಶದಲ್ಲಿದೆ (ಸೂರ್ಯನೇ ಬ್ರಹ್ಮಾಂಡದ ಕೇಂದ್ರ; ಭೂಮಿ ಮತ್ತು ಇತರ ಗ್ರಹಗಳು ಸೂರ್ಯನ ಸುತ್ತಲೂ ಸುತ್ತುತ್ತವೆ ಎಂಬ ಕೊಪರ್ನಿಕಸ್ ಸಿದ್ಧಾಂತವನ್ನು ಸಮರ್ಥಿಸಿದ ಗೆಲಿಲಿಯೊಗೆ ಚರ್ಚ್ ವಿಶಪ್ರಾಶನ ಮಾಡಿಸಿತು). ಸಮಾಜದ ಮೇಲಿನ ಈ ಬಿಗಿ ಹಿಡಿತದ ಸಡಿಲಿಕೆಯು ಊಳಿಗಮಾನ್ಯ ಪದ್ಧತಿಯಿಂದ ಬದಲಾಗುವ ಪ್ರಕ್ರಿಯೆಯ ಭಾಗವಾಗಿ ಸಂಭವಿಸುತ್ತದೆ. ಅಂದರೆ, ಈ ಸಡಿಲಿಕೆಯು ಬೂರ್ಜ್ವಾ ಕ್ರಾಂತಿಯ ಭಾಗವಾಗಿ ಸಂಭವಿಸುತ್ತದೆ. ಇದಕ್ಕೆ 1640ರ ಇಂಗ್ಲಿಷ್ ಕ್ರಾಂತಿಯು ಒಂದು ಪ್ರಮುಖ ಉದಾಹರಣೆಯಾಗಿದೆ (ಬ್ರಿಟನ್ನಿನಲ್ಲಿ ಅಳಿದುಳಿದ ಊಳಿಗಮಾನ್ಯದ ವಿಭಾಗವನ್ನು ಬೂರ್ಜ್ವಾ ವರ್ಗ ಮತ್ತು ಅದರ ಬೆಂಬಲಿಗರು 1640-1660ರ ಅವಧಿಯಲ್ಲಿ ನಾಶಪಡಿಸಿದ ಘಟನಾವಳಿಯನ್ನು ಇಂಗ್ಲಿಷ್ ಕ್ರಾಂತಿ ಎಂದು ಕರೆಯಲಾಗಿದೆ). ಹಾಗಾಗಿ, ಯುರೋಪಿನಲ್ಲಿ ಉಂಟಾದ ಆಧುನಿಕ ವಿಜ್ಞಾನದ ಅಭಿವೃದ್ಧಿಯ ಆರಂಭದಿಂದಲೂ ಬಂಡವಾಳಶಾಹಿಯ ಬೆಳವಣಿಗೆಯೊಂದಿಗೆ ಒಂದು ರೀತಿಯ ಸಂಕೀರ್ಣ ಸಂಬಂಧವನ್ನು ಹೊಂದಿದೆ. ಈ ಸಂಬಂಧವು ವಿಜ್ಞಾನದ ಮುನ್ನಡೆಯನ್ನು ಯಾವ ಉದ್ದೇಶಕ್ಕೆ ಬಳಕೆಮಾಡಿಕೊಳ್ಳಲಾಯಿತು ಎಂಬುದರ ಮೇಲೆ ಅಳಿಸಲಾಗದ ಮುದ್ರೆಯನ್ನೊತ್ತಿದೆ.

ಬೂರ್ಜ್ವಾಗಳು ಒತ್ತಿದ ಈ ಮುದ್ರೆಯ ಜ್ಞಾನಸಿದ್ಧಾಂತದ ಮೇಲಿನ ಪರಿಣಾಮ ಜಿಜ್ಞಾಸೆಗೊಳಗಾಯಿತು. ಪ್ರಕೃತಿಯನ್ನು "ಜಡ" ಎಂದು ಪರಿಭಾವಿಸುವುದು ಮತ್ತು ಅದರ ಮೇಲೆ ಮೇಲುಗೈ ಸಾಧಿಸುವುದನ್ನು ಯೂರೋಪಿಯನ್ನರ ಸಮರ್ಥನೆ ಮತ್ತು ಅದೇ ರೀತಿಯಲ್ಲಿ ವಿಶ್ವದ ದೂರ ದೂರದ ವಿಶಾಲ-ವಿಸ್ತಾರ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಸ್ಥಳೀಯ ಜನರ ಮೇಲೆ "ಜಡತೆ"ಯನ್ನು ಆರೋಪಿಸಿ ಅವರ ಮೇಲೆ ಮೇಲುಗೈ (ಯಜಮಾನಿಕೆ) ಸಾಧಿಸಿದ ಬಗ್ಗೆ ಮತ್ತು ಆ ಮೂಲಕ ಸಾಮ್ರಾಜ್ಯಶಾಹಿ ವಿದ್ಯಮಾನವನ್ನು "ಸಮರ್ಥನೆ" ಮಾಡಿದ ಬಗ್ಗೆ ಅಕೀಲ್ ಬಿಲ್ಗ್ರಾಮಿಯಂತಹ ತತ್ವಜ್ಞಾನಿಗಳು ಆತಂಕವನ್ನು ವ್ಯಕ್ತ ಪಡಿಸಿದ್ದಾರೆ.

ವಿಜ್ಞಾನವು ಸ್ವಾತಂತ್ರ್ಯ-ವರ್ಧನೆಯ ಪಾತ್ರವನ್ನು ಬಂಡವಾಳಶಾಹಿಯನ್ನು ಮೀರುವ ಮೂಲಕ ಮಾತ್ರವೇ ಪೂರ್ಣವಾಗಿ ನಿರ್ವಹಿಸಬಲ್ಲದು ಎಂಬುದನ್ನು ತೀಕ್ಷ್ಣವಾಗಿ ಅರಿತಿದ್ದ ಮತ್ತು ಅಂತಹ ಒಂದು ಸನ್ನಿವೇಶವು ಚಾರಿತ್ರಿಕ ಕಾರ್ಯಸೂಚಿಗೆ ಬಂದ ಯುಗದ ಶ್ರೇಷ್ಠ ವಿಜ್ಞಾನಿಗಳು ಸಮಾಜವಾದದ ಹೋರಾಟದಲ್ಲಿ ಸೇರಿಕೊಂಡರು. ವಿಜ್ಞಾನದ ದುರುಪಯೋಗವನ್ನು ತಡೆಗಟ್ಟುವುದು ನಾಗರಿಕರಾದ ಅವರಿಗೆ ಅದು ಕೇವಲ ಒಂದು ಅಗತ್ಯವಾಗಿರಲಿಲ್ಲ; ಅದು ವಿಜ್ಞಾನಿಗಳಾಗಿ ಅವರಿಗೆ ಒಂದು ನೈತಿಕ ಅನಿವಾರ್ಯವೂ ಆಗಿತ್ತು: ವೈಜ್ಞಾನಿಕ ಪ್ರಗತಿಯನ್ನು ಉಂಟುಮಾಡಿದ ತಮ್ಮ ಪ್ರಾಯೋಗಿಕ ಆಚರಣೆಯ ದುರುಪಯೋಗದ ವಿರುದ್ಧ ಹೋರಾಡುವುದು ಅವರಿಗೆ ಒಂದು ಪರಮ ಪ್ರಾಮುಖ್ಯದ ವಿಷಯವಾಗಿತ್ತು.

ಸಮಾಜವಾದಕ್ಕಾಗಿ ಹೋರಾಡುವ ವಿಷಯದಲ್ಲಿ ಆಲ್ಬರ್ಟ್ ಐನ್‌ಸ್ಟೈನ್‌ರ ಉದಾಹರಣೆಯು ಸುಪ್ರಸಿದ್ಧವಾದುದು. ಅವರು ಒಬ್ಬ ಕೇವಲ ಸ್ವಯಂ-ಘೋಷಿತ ಸಮಾಜವಾದಿಯಾಗಿರಲಿಲ್ಲ. ರಾಜಕೀಯ ಚಟುವಟಿಕೆಗಳು ಮತ್ತು ಸಭೆಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದರು. ಈ ಕಾರಣದಿಂದಾಗಿ ಅಮೇರಿಕದ ಎಫ್‌ಬಿಐ ಬೇತಾಳನಂತೆ ಅವರ ಬೆನ್ನು ಹತ್ತಿತ್ತು ಮತ್ತು ಅವರ ಪ್ರತಿಯೊಂದು ಚಲನವಲನವನ್ನೂ ದಾಖಲಿಸುತ್ತಿತ್ತು. ಈ ದಾಖಲೆಗಳನ್ನು ಈಗ ಸಾರ್ವಜನಿಕಗೊಳಿಸಲಾಗಿದೆ. ವಾಸ್ತವವಾಗಿ, ಸಮಾಜವಾದದ ಮೇಲೆ ಅವರು ಹೊಂದಿದ್ದ ನಂಬಿಕೆಗಳ ಕಾರಣದಿಂದಾಗಿಯೇ ಪರಮಾಣು ಬಾಂಬ್ ಅನ್ನು ಅಭಿವೃದ್ಧಿ ಪಡಿಸಿದ ಮನ್ಹಾಟನ್ ಯೋಜನೆಯಲ್ಲಿ ಭಾಗವಹಿಸಲು ಅವರಿಗೆ ಭದ್ರತಾ ಸರ್ಟಿಫಿಕೇಟ್ ನೀಡಲಿಲ್ಲ. ಅಂತೆಯೇ ಬ್ರಿಟನ್‌ನಲ್ಲಿ, ಇಪ್ಪತ್ತನೇ ಶತಮಾನದ ಶ್ರೇಷ್ಠ ವಿಜ್ಞಾನಿಗಳು – ಜೆ.ಡಿ. ಬರ್ನಾಲ್, ಜೋಸೆಫ್ ನೀಧಮ್, ಜೆ.ಬಿ.ಎಸ್. ಹಾಲ್ಡೇನ್, ಹೈಮನ್ ಲೆವಿ, ಜಿ.ಹೆಚ್. ಹಾರ್ಡಿ, ಡೊರೊಥಿ ಹಾಡ್ಗ್‌ಕಿನ್ ಮುಂತಾದ ಅನೇಕ ವಿಜ್ಞಾನಿಗಳು ಎಡಪಂಥದ ಭಾಗವಾಗಿದ್ದರು.

ಆದರೆ, ನವ-ಉದಾರವಾದದ ಬಿರುಸಿನ ಆರಂಭದೊಂದಿಗೆ ಒಂದು ಮೂಲಭೂತ ಬದಲಾವಣೆಯೂ ಕಂಡು ಬಂತು. ನವ-



ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಸಂಶೋಧನೆಗಳಿಗೆ ಧನ ಸಹಾಯ ಮಾಡುವ ಜವಾಬ್ದಾರಿಯು ಪ್ರಭುತ್ವದಿಂದ ಖಾಸಗಿ ಸಂಸ್ಥೆಗಳಿಗೆ, ಅದರಲ್ಲೂ ಮುಖ್ಯವಾಗಿ ಕಾರ್ಪೊರೇಟ್ ದಾನಿಗಳಿಗೆ ವರ್ಗಾಯಿಸಲ್ಪಟ್ಟಿದೆ ಮತ್ತು ವಿಜ್ಞಾನವು "ಸರಕೀಕರಣ"ಗೊಂಡಿರುವುದು ಕಂಡುಬರುತ್ತದೆ. ಇದರ ಪರಿಣಾಮವಾಗಿ ಬಂಡವಾಳಶಾಹಿಯನ್ನು ಮೀರುವ ಅಗತ್ಯವನ್ನು ಒತ್ತಿಹೇಳುವ ರಾಜಕೀಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ವಿಜ್ಞಾನಿಗಳ ಸ್ವಾತಂತ್ರ್ಯವು ಬಹಳವಾಗಿ ಮೊಟಕುಗೊಂಡಿದೆ. ವಿಜ್ಞಾನಿಯೊಬ್ಬರು ಸಂಶೋಧನಾ ಯೋಜನೆಯೊಂದರಲ್ಲಿ ತೊಡಗಿಸಿಕೊಳ್ಳಲು ಬಯಸಿದರೆ, ಅವನು ಅಥವಾ ಅವಳು ಖಾಸಗಿ ದಾನಿಗಳಿಗೆ ಒಪ್ಪಿಗೆ ಆಗುವಂಥವರೇ ಆಗಿರಬೇಕು. ಒಂದು ವೇಳೆ ಒಬ್ಬ ವಿಜ್ಞಾನಿಯು ಸಮಾಜವಾದಿ ನಂಬಿಕೆಗಳನ್ನು ಹೊಂದಿರುವುದು ಗೊತ್ತಾದರೆ ಅದು ಅವನಿ/ಳಿಗೆ ಮುಳುವಾಗುತ್ತದೆ. ವಿಜ್ಞಾನಿಗಳನ್ನು ವಿಶ್ವವಿದ್ಯಾನಿಲಯಗಳಿಗೆ ನೇಮಕಾತಿ ಮಾಡಿಕೊಳ್ಳುವಾಗಲೂ ಸಹ ಅವರು ದಾನಿಗಳಿಂದ ಎಷ್ಟು ಹಣವನ್ನು ಸಂಗ್ರಹಿಸಬಲ್ಲರು ಎಂಬ ಅವರ ಸಾಮರ್ಥ್ಯವನ್ನು ಪರಿಗಣಿಸಲಾಗುತ್ತದೆ. ಮಾತ್ರವಲ್ಲ, ಇತ್ತೀಚಿನವರೆಗೂ ವಿದ್ವಾಂಸರು (academics) ಬೇರೆ ಬೇರೆ ವಿಚಾರಗಳನ್ನು ಮತ್ತು ನಂಬಿಕೆಗಳನ್ನು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ಹೊಂದಿದ್ದ ಅಕೆಡೆಮಿಕ್ ವಲಯದಲ್ಲೂ ಇದೇ ರೀತಿಯ ರಾಜಕೀಯ ನಿರ್ಬಂಧಗಳು ಈಗ ಕಾರ್ಯಪ್ರವೃತ್ತವಾಗಿವೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಜ್ಞಾನದ ಸರಕೀಕರಣವು ಅದರ ಅಗತ್ಯ ಪರಿಣಾಮವಾಗಿ, ವಿಜ್ಞಾನಿಗಳು ಚಾಲ್ತಿಯಲ್ಲಿರುವ ರಾಜಕೀಯ ನಿಲುವನ್ನು ಅನುಸರಿಸುವಂತೆ ಮಾಡುತ್ತದೆ ಮತ್ತು ವಿಜ್ಞಾನಿಗಳಲ್ಲಿ ಸಾಮಾಜಿಕ ಬೇಜವಾಬ್ದಾರಿತನವನ್ನು ಹುಟ್ಟಿ ಹಾಕುತ್ತದೆ. ವೈಜ್ಞಾನಿಕ ಅನ್ವೇಷಣೆಗಳ ಮೂಲಕ ಮಾನವ ವಿಮೋಚನೆಗೆ ಕೊಡುಗೆ ನೀಡುವುದಕ್ಕಾಗಿ ಬಂಡವಾಳಶಾಹಿಯನ್ನು ಮೀರುವ ನೈತಿಕ ಅಗತ್ಯವನ್ನು ತಮ್ಮ ವಿಚಾರಗಳ ಕೆಲಸದ ಭಾಗವಾಗಿಸುವುದು ನವ-ಉದಾರವಾದದ ಯುಗದಲ್ಲಿ ವಿಜ್ಞಾನಿಗಳಿಗೆ ನಿರಾಕರಿಸಲಾಗಿದೆ ಮತ್ತು ಅದು ಒಂದು ಹೊಂದಲಾಗದ; ಲಕ್ಸುರಿ' ಆಗಿಬಿಟ್ಟಿದೆ. ಹಾಗಾಗಿ, ವಿಜ್ಞಾನದ ಆವಿಷ್ಕಾರಗಳನ್ನು ಅವು ಉಂಟುಮಾಡುವ ಪರಿಣಾಮಗಳ ಬಗ್ಗೆ ಯಾವ ಚರ್ಚೆಯನ್ನೂ ಮಾಡದೆ ಅವುಗಳನ್ನು ಅಳವಡಿಸಿಕೊಳ್ಳಲಾಗುವುದು ಎಂಬುದನ್ನು ಈ ವಿದ್ಯಮಾನವು ಸೂಚಿಸುತ್ತದೆ.

ನಮ್ಮ ಮುಂದೆ ಇಂದು ಸಂಭವಿಸುತ್ತಿರುವ ವೈಜ್ಞಾನಿಕ ಆವಿಷ್ಕಾರಗಳ ವಿಚಾರಶೂನ್ಯ ಅಳವಡಿಕೆಯ ಸಂಬಂಧವಾಗಿ ಎದ್ದು ಕಾಣುವ ಉದಾಹರಣೆಯು ಕೃತಕ ಬುದ್ಧಿಮತ್ತೆಗೆ (artificial intelligence) ಸಂಬಂಧಿಸಿದೆ. ಈ ಕೃತಕ ಬುದ್ಧಿಮತ್ತೆಯು ಹೊಂದಿರುವ ಹಲವಾರು ಸಾಧ್ಯತೆಗಳನ್ನು ಅಥವಾ ಪರಿಣಾಮಗಳನ್ನು ನಾನು ಇಲ್ಲಿ ಚರ್ಚಿಸುತ್ತಿಲ್ಲ. ಕೃತಕ ಬುದ್ಧಿಮತ್ತೆಯು ಸೃಷ್ಟಿಸುವ ಬೃಹತ್ ನಿರುದ್ಯೋಗದ ಸಮಸ್ಯೆಗೆ ಮಾತ್ರ ನನ್ನ ಕಾಳಜಿ ಸೀಮಿತಗೊಂಡಿದೆ. ಹಾಲಿವುಡ್ ಸಿನೆಮಾಗಳ ಚಿತ್ರ-ಕತೆ ಬರೆಯುವವರು (script writers) ಇತ್ತೀಚೆಗೆ ಕೈಗೊಂಡ ತಮ್ಮ ಮುಷ್ಕರದ ಮೂಲಕ ಕೃತಕ ಬುದ್ಧಿಮತ್ತೆಯು ತಮ್ಮ ವೃತ್ತಿಯನ್ನು ಕೊನೆಗಾಣಿಸಲಿರುವ ಅಂಶದ ಬಗ್ಗೆ ಸಾರ್ವಜನಿಕರ ಗಮನ ಸೆಳೆದಿದ್ದಾರೆ. ಹಾಗೆ ನೋಡಿದರೆ ಮಾನವ ಶ್ರಮವನ್ನು ಬದಲಿಸುವ ಯಾವುದೇ ಯಾಂತ್ರಿಕ ಸಾಧನವು ಶ್ರಮ ಜೀವಿಗಳ ವಿಮೋಚನೆಯನ್ನು ಸಾಕಾರಗೊಳಿಸುವ ಸಾಧ್ಯತೆಯನ್ನು ಹೊಂದಿರುತ್ತದೆ: ಅದು ಕತ್ತೆ ಚಾಕರಿಯನ್ನು ಇಳಿಕೆ ಮಾಡುತ್ತದೆ ಅಥವಾ ಪರ್ಯಾಯವಾಗಿ

ಪುಟ 14 ಕ್ಕೆ

35 ಔಷಧೀಯ ಕಂಪನಿಗಳಿಂದ ಚುನಾವಣಾ ಬಾಂಡ್‌ಗಳ....

ಪುಟ 11 ರಿಂದ

Zydus Healthcare: ಗುಜರಾತ್ ಮೂಲದ ಝೈಡಸ್ ಹೆಲ್ತ್‌ಕೇರ್ 2022 ಮತ್ತು 2023 ರ ನಡುವೆ 29 ಕೋಟಿ ರೂಪಾಯಿ ಮೌಲ್ಯದ ಚುನಾವಣಾ ಬಾಂಡ್ಗಳನ್ನು ಖರೀದಿಸಿದೆ.

2021 ರಲ್ಲಿ, ಬಿಹಾರ ಡ್ರಗ್ ಈ ಕಂಪನಿಯು ತಯಾರಿಸಿದ ರೆಮ್ಡೆಸಿವಿರ್ (remdesivir) ಔಷಧಿಗಳ ಬ್ಯಾಚ್ ನಲ್ಲಿ ಬ್ಯಾಕ್ಟೀರಿಯಾ ಎಂಡೋಟಾಕ್ಸಿನ್ ಕುರುಹುಗಳು ಕಂಡುಬಂದ ನಂತರ "ಪ್ರಮಾಣಿತ ಗುಣಮಟ್ಟವಲ್ಲ" ಎಂದು ಘೋಷಿಸಿತು. ಹಲವಾರು ರೋಗಿಗಳು ಔಷಧಿಗಳಿಂದ ಪ್ರತಿಕೂಲ ಔಷಧ ಪ್ರತಿಕ್ರಿಯೆಗಳನ್ನು ಅನುಭವಿಸಿದ್ದಾರೆಂದು ವರದಿಯಾಗಿದೆ.

ಆದರೆ ಗುಜರಾತ್ ಡ್ರಗ್ ರೆಗ್ಯುಲೇಟರ್ ಹೆಚ್ಚಿನ ಪರೀಕ್ಷೆಗಾಗಿ ಈ ಬ್ಯಾಚ್ ಗಳ ಮಾದರಿಗಳನ್ನು ಸಂಗ್ರಹಿಸಲಿಲ್ಲ ಮತ್ತು Zydus ನ ಉತ್ಪಾದನಾ ಘಟಕದ ವಿರುದ್ಧ ಯಾವುದೇ ಕ್ರಮವನ್ನು ಪ್ರಾರಂಭಿಸಲಿಲ್ಲ.

ಹೆಟೆರೊ ಫಾರ್ಮಾ: 2021 ರಲ್ಲಿ ಹೆಟೆರೊ ಫಾರ್ಮಾ ಕೂಡ ಐಟಿ ಕ್ರಮವನ್ನು ಎದುರಿಸಿತು. ಇಲಾಖೆಯ ಗುಂಪಿನ ವಿರುದ್ಧದ ದಾಳಿಯ ಸಮಯದಲ್ಲಿ ರೂ. 550 ಕೋಟಿಗಳಷ್ಟು ಲೆಕ್ಕವಿಲ್ಲದ ಆದಾಯವನ್ನು ಕಂಡುಕೊಂಡ ನಂತರ ಈ ದಾಳಿ ನಡೆದಿದೆ. ಇಲ್ಲಿಯವರೆಗೆ, ಇಲಾಖೆಯು ದಾಳಿಯಲ್ಲಿ ರೂ. 142 ಕೋಟಿಗೂ ಹೆಚ್ಚು ಹಣವನ್ನು ವಶಪಡಿಸಿಕೊಂಡಿದೆ ಎಂದು CBDT ಅಕ್ಟೋಬರ್ 2021 ರಲ್ಲಿ ಹೇಳಿಕೆಯಲ್ಲಿ ತಿಳಿಸಿದೆ.

ನ್ಯೂಸ್ ಲ್ಯಾಂಡ್ರಿ, ಸ್ಕ್ರಾಲ್ ಮತ್ತು ದಿ ನ್ಯೂಸ್ ಮಿನಿಟ್ ನ ಜಂಟಿ ಪ್ರಯತ್ನದಿಂದ ಸಂಗ್ರಹಿಸಿದ ಇತ್ತೀಚಿನ ವರದಿಯಲ್ಲಿ, ಹೆಟೆರೊ ಲ್ಯಾಬ್ಸ್ ಮತ್ತು ಹೆಟೆರೊ ಹೆಲ್ತ್ ಕೇರ್ ಏಪ್ರಿಲ್ 2022 ರಲ್ಲಿ ಒಟ್ಟು 39 ಕೋಟಿ ರೂಪಾಯಿಗಳ ಚುನಾವಣಾ ಬಾಂಡ್ ಗಳನ್ನು ಖರೀದಿಸಿದೆ ಎಂದು ತಿಳಿದುಬಂದಿದೆ.

COVID-19 ಚಿಕಿತ್ಸೆಗಾಗಿ ಕಳಪೆ ರೆಮ್‌ಡೆಸಿವಿರ್? 39 ಕೋಟಿ ರೂ ಬಾಂಡ್

ಹೆಟೆರೊ ಲ್ಯಾಬ್ಸ್ ಮತ್ತು ಹೆಟೆರೊ ಹೆಲ್ತ್ ಕೇರ್: ಹೈದರಾಬಾದ್ ಮೂಲದ ಹೆಟೆರೊ ಲ್ಯಾಬ್ಸ್ ಮತ್ತು ಹೆಟೆರೊ ಹೆಲ್ತ್ ಕೇರ್ ಕಂಪನಿಗೆ ಕಳಪೆ ಔಷಧಗಳಿಗಾಗಿ ಮಹಾರಾಷ್ಟ್ರದ ಆಹಾರ ಮತ್ತು ಔಷಧ ಆಡಳಿತವು ಆರು ನೋಟಿಸ್‌ಗಳನ್ನು ನೀಡಿತು. ಅವುಗಳಲ್ಲಿ ಕನಿಷ್ಠ ಮೂರು COVID-19 ಚಿಕಿತ್ಸೆಗಾಗಿ ವ್ಯಾಪಕವಾಗಿ ಬಳಸಲಾಗುವ ಆಂಟಿವೈರಲ್ ಔಷಧವಾದ ರೆಮ್‌ಡೆಸಿವಿರ್‌ಗೆ ಸಂಬಂಧಿಸಿದೆ. ಆದಾಗ್ಯೂ ತೆಲಂಗಾಣ ನಿಯಂತ್ರಕ ಹೆಟೆರೊ ವಿರುದ್ಧ ಕ್ರಮಕೈಗೊಳ್ಳಲಿಲ್ಲ!

ಮಹಾರಾಷ್ಟ್ರ ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ ನಡೆಸಿದ ಪ್ರಯೋಗಾಲಯ ಪರೀಕ್ಷೆಯಲ್ಲಿ ರೆಮಡಿಸಿವಿರ್ ಮಾದರಿಯಲ್ಲಿ ಸ್ಪಷ್ಟ ದ್ರವದ ಬದಲಿಗೆ ಹಳದಿ ಬಣ್ಣದ ದ್ರವ ಕಂಡುಬಂದಿದೆ. ಜುಲೈ 2021 ರಲ್ಲಿ ಹೆಟೆರೊಗೆ ಈ ಕುರಿತು ಸೂಚನೆಯನ್ನು ನೀಡಲಾಯಿತು. ಎರಡನೇ ಮಾದರಿಯು ಅಗತ್ಯಕ್ಕಿಂತ ಕಡಿಮೆ ಪ್ರಮಾಣದ ಔಷಧವನ್ನು ಹೊಂದಿತ್ತು ಮತ್ತು ಅದೇ ವರ್ಷ ಅಕ್ಟೋಬರ್‌ನಲ್ಲಿ ಸೂಚನೆಯನ್ನು ನೀಡಲಾಯಿತು. ರಿಮೆಡೆಸಿವಿರ್‌ನ ಮೂರನೇ ಮಾದರಿಯು "ಪ್ರಮಾಣಿತ ಗುಣಮಟ್ಟದಲ್ಲಿಲ್ಲ" ಎಂದು ಕಂಡುಬಂದಿದೆ, ಡಿಸೆಂಬರ್ 2021 ರಲ್ಲಿ ಸೂಚನೆಯನ್ನು ನೀಡಲಾಯಿತು.

ಇಂತಹ ಉಲ್ಲಂಘನೆಯು ಕಂಪನಿಯ ಉತ್ಪಾದನಾ ಪರವಾನಗಿಯನ್ನು ಅಮಾನತುಗೊಳಿಸುವುದಕ್ಕೆ ಕಾರಣವಾಗಬಹುದು ಎಂದು ಮಹಾರಾಷ್ಟ್ರದ ಔಷಧಗಳ ಮಾಜಿ ಜಂಟಿ ಆಯುಕ್ತ ಓಂಪ್ರಕಾಶ್ ಸಾದ್ವನಿ ಹೇಳಿದ್ದಾರೆ.

2021 ರಲ್ಲಿ ಹೆಟೆರೊದ ಇತರ ಎರಡು ಉತ್ಪನ್ನಗಳು ಸಹ ಗುಣಮಟ್ಟವಲ್ಲ ಎಂದು ಕಂಡುಬಂದಿವೆ: ಆಂಟಿಫಂಗಲ್ ಔಷಧ, ಇಟ್ರೋಬ್ ಕ್ಯಾಪ್ಸುಲ್ ಮತ್ತು ಮೊನೊಸೆಫ್, ಬ್ಯಾಕ್ಟೀರಿಯಾದ ಸೋಂಕಿಗೆ ಬಳಸಲಾಗುತ್ತದೆ.

ಆದರೆ ತೆಲಂಗಾಣ ನಿಯಂತ್ರಕ ಹೆಟೆರೊ ವಿರುದ್ಧ ಕ್ರಮಕೈಗೊಳ್ಳಲಿಲ್ಲ. ಮಹಾರಾಷ್ಟ್ರದಿಂದ ಕಳಪೆ ಗುಣಮಟ್ಟದ ಔಷಧಗಳ ಬ್ಯಾಚ್ ಅನ್ನು ಕಂಪನಿಯು ಹಿಂಪಡೆದಿದೆ.

ಕೊಡು ಕೊಳ್ಳುವ ವ್ಯವಹಾರ

"ನಾವು ಸಾಮಾನ್ಯವಾಗಿ ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಔಷಧ ನಿಯಂತ್ರಕರಿಂದ ಸಡಿಲವಾದ ವಿಧಾನವನ್ನು ನೋಡುತ್ತೇವೆ. ರಾಜ್ಯ ಮಟ್ಟದಲ್ಲಿ ನಿಯಂತ್ರಕ ಪ್ರಕರಣಗಳಲ್ಲಿ ಕೆಲವು ರಾಜಿ ಮಾಡಿಕೊಳ್ಳಲು ಫಾರ್ಮಾ ಕಂಪನಿಗಳು ರಾಜಕೀಯ ಪಕ್ಷಗಳಿಗೆ ಹಣಕಾಸು ಒದಗಿಸಿದರೆ ಅದು ಆಶ್ಚರ್ಯವೇನಿಲ್ಲ" ಎಂದು ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ಎಥಿಕ್ಸ್ ನ ಸಂಪಾದಕ ಅಮರ್ ಜೆಸಾನಿ ಹೇಳುತ್ತಾರೆ.

"ಔಷಧಿ ಉತ್ಪಾದಕ ಸಂಸ್ಥೆಗಳು ರಾಜಕೀಯ ಪಕ್ಷಗಳಲ್ಲಿ ನೂರಾರು ಕೋಟಿ ಹೂಡಿಕೆ ಮಾಡಿದ್ದಾರೆ. ಅವರು ಪ್ರಜಾಪ್ರಭುತ್ವ, ಚುನಾವಣೆ ಅಥವಾ ದಾನದ ಮೇಲಿನ ಪ್ರೀತಿಗಾಗಿ ಇದನ್ನು ಮಾಡಿದ್ದಾರೆಂದು ಯಾರೂ ನಂಬುವುದಿಲ್ಲ" ಎಂದು ಆಲ್ ಇಂಡಿಯಾ ಡ್ರಗ್ ಆಕ್ಷನ್ ನೆಟ್ವರ್ಕ್‌ನ ಭಾಗವಾಗಿರುವ ಕಾರ್ಯಕರ್ತ ಎಸ್ ಶ್ರೀನಿವಾಸನ್ ಹೇಳುತ್ತಾರೆ. ಇದರರ್ಥ, ರಾಜಕೀಯ ಪಕ್ಷಗಳು ಮತ್ತು ಕಂಪನಿಗಳ ನಡುವೆ ಕೊಡು ಕೊಳ್ಳುವ ವ್ಯವಹಾರ ಇದೆ. ●

ವಿಜ್ಞಾನದ ಮುನ್ನಡೆಗೆ ತೊಡಕಾಗಿರುವ ಬಂಡವಾಳಶಾಹಿ.....

ಪುಟ 13 ರಿಂದ

ಮೊದಲಿನಷ್ಟೇ ಸಂಖ್ಯೆಯ ಕಾರ್ಮಿಕರ ನಿಯೋಜನೆಯೊಂದಿಗೆ ಉತ್ಪಾದನೆಯ ಪ್ರಮಾಣವನ್ನು ಅಗಾಧವಾಗಿ ಹೆಚ್ಚಿಸುತ್ತದೆ ಮತ್ತು ಆ ಮೂಲಕ ಜನರಿಗೆ ಸರಕು ಮತ್ತು ಸೇವೆಗಳ ಲಭ್ಯತೆಯನ್ನು ಹೆಚ್ಚಿಸುತ್ತದೆ. ಆದರೆ, ಬಂಡವಾಳಶಾಹಿಯ ಅಡಿಯಲ್ಲಿ, ಯಾಂತ್ರಿಕ ಸಾಧನದಿಂದ ಮಾನವ ಶ್ರಮವನ್ನು ಇಳಿಕೆ ಮಾಡುವ ಪ್ರತಿಯೊಂದು ಪರ್ಯಾಯ ಸಾಧನವೂ ಕೆಲಸಗಾರರ ದುಃಖವನ್ನು ಹೆಚ್ಚಿಸುತ್ತದೆ.

ಈ ಉದಾಹರಣೆಯನ್ನು ಗಮನಿಸಿ. ಒಂದು ತಾಂತ್ರಿಕ ನಾವೀನ್ಯತೆಯು ಕಾರ್ಮಿಕ ಉತ್ಪಾದಕತೆಯನ್ನು ದ್ವಿಗುಣಗೊಳಿಸುತ್ತದೆ ಎಂದು ಭಾವಿಸೋಣ. ಈ ನಾವೀನ್ಯತೆಯ ಅಳವಡಿಕೆಯ ಸಂದರ್ಭದಲ್ಲಿ, ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಈ ತಾಂತ್ರಿಕ ನಾವೀನ್ಯತೆಯನ್ನು (ನವೀನ ಅವಿಷ್ಕಾರವನ್ನು) ಪ್ರತಿಯೊಬ್ಬ ಬಂಡವಾಳಗಾರನೂ ಈ ಹಿಂದೆ ಉದ್ಯೋಗದಲ್ಲಿದ್ದ ಅರ್ಧದಷ್ಟು ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಲು ಬಳಸುತ್ತಾನೆ. ಈ ಒಂದು ಕ್ರಮವೇ ಕಾರ್ಮಿಕ ಮೀಸಲು ಪಡೆಯ ಗಾತ್ರವನ್ನು ಹೆಚ್ಚಿಸುತ್ತದೆ. ನಿರುದ್ಯೋಗದ ಈ ಹೆಚ್ಚಳದ ಕಾರಣದಿಂದಾಗಿ ಉದ್ಯೋಗದಲ್ಲಿ ಮುಂದುವರಿಯುತ್ತಿರುವವರಿಗೆ ಅವರ ನಿಜ ವೇತನದಲ್ಲಿ ಯಾವುದೇ ಹೆಚ್ಚಳ ದೊರೆಯುವುದಿಲ್ಲ. ಆದ್ದರಿಂದ, ಮೊದಲಿನ ಮಟ್ಟದ ಉತ್ಪತ್ತಿಯೇ ಒಂದು ವೇಳೆ ಉತ್ಪಾದನೆಯಾಗುತ್ತಿದ್ದ ಪರಿಸ್ಥಿತಿಯಲ್ಲಿ, ವೇತನ–ವೆಚ್ಚವು ಅರ್ಧದಷ್ಟು ಕಡಿಮೆಯಾಗಿರುತ್ತದೆ ಮತ್ತು ಮಿಗುತಾಯದ ಪ್ರಮಾಣವು ಏರಿಕೆಯಾಗಿರುತ್ತದೆ. ಆದರೆ, ವೇತನ–ವೆಚ್ಚದ ಅರ್ಧದಷ್ಟು ಪಾಲು ಮಿಗುತಾಯದೆಡೆಗೆ ವರ್ಗಾವಣೆಯಾಗುವುದರಿಂದ, ಒಟ್ಟಾರೆ ಬೇಡಿಕೆಯಲ್ಲಿ ಕುಸಿತ ಉದ್ಭವವಾಗುತ್ತದೆ (ಏಕೆಂದರೆ, ವೇತನವು ಬಹುತೇಕವಾಗಿ ಬಳಸಲ್ಪಡುತ್ತದೆ). ಪರಿಣಾಮವಾಗಿ, ಉತ್ಪಾದನೆಯನ್ನು ತಗ್ಗಿಸಲಾಗುತ್ತದೆ ಮತ್ತು ಅದರ ಪರಿಣಾಮವಾಗಿ ನಿರುದ್ಯೋಗದ ಮಟ್ಟ ಏರುತ್ತದೆ. ಅಂದರೆ, ನಿರುದ್ಯೋಗವು ಈ ಸಲ ಏರಿಕೆಯಾಗುವಲ್ಲಿ, ದ್ವಿಗುಣಗೊಂಡ ಕಾರ್ಮಿಕರ ಉತ್ಪಾದಕತೆಯ ಮತ್ತು ಬೇಡಿಕೆಯ ಇಳಿಕೆಯ ಅಂಶಗಳು ಕಾರಣವಾಗಿರುತ್ತವೆ.

ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಡೇವಿಡ್ ರಿಕಾರ್ಡೊ, ಬೇಡಿಕೆಯಲ್ಲಿ ಕೊರತೆ ಉಂಟಾದ ಕಾರಣದಿಂದಾಗಿಯೇ ಅಧಿಕಗೊಳ್ಳುವ ನಿರುದ್ಯೋಗದ ಅಂಶವನ್ನು ಗ್ರಹಿಸಿರಲಿಲ್ಲ. ರಿಕಾರ್ಡೊ, ವೇತನವು ಪೂರ್ಣವಾಗಿ ಬಳಸಲ್ಪಡುತ್ತದೆ ಮಾತ್ರವಲ್ಲ, ಉಪಭೋಗಕ್ಕಾಗಿ ಬಳಸುವ ಭಾಗವನ್ನು ಹೊರತುಪಡಿಸಿ ಉಳಿದ ಮಿಗುತಾಯವು ಹೂಡಿಕೆಯಾಗುತ್ತದೆ ಎಂಬುದಾಗಿ ಜೀನ್–ಬ್ಯಾಪ್ಟಿಸ್ಟ್ ಸೇ ಪ್ರತಿಪಾದಿಸಿದ ನಿಯಮವನ್ನು ನಂಬಿದ್ದರು. ಹಾಗಾಗಿ, ರಿಕಾರ್ಡೊ, ವೇತನದ ಭಾಗದಿಂದ ಮಿಗುತಾಯದ ಭಾಗಕ್ಕೆ ಆಗುವ ವರ್ಗಾವಣೆಯು ಒಟ್ಟು ಬಳಕೆಯನ್ನು ಕಡಿಮೆ ಮಾಡುತ್ತದೆಯಾದರೂ ಒಟ್ಟಾರೆ ಹೂಡಿಕೆಯನ್ನು ಹೆಚ್ಚಿಸುತ್ತದೆ ಮತ್ತು ಆರಂಭದಲ್ಲಿ ಮೊದಲಿನ ಉತ್ಪಾದನೆಯು ಬದಲಾಗದಂತೆ ನೋಡಿಕೊಳ್ಳುತ್ತದೆ; ಹೂಡಿಕೆಯು ಹೆಚ್ಚುವುದರಿಂದ ಉತ್ಪಾದನೆಯ ಬೆಳವಣಿಗೆಯ ದರ ಹೆಚ್ಚುತ್ತದೆ ಮತ್ತು ಅದು ಉದ್ಯೋಗ ಬೆಳವಣಿಗೆಯ ದರವನ್ನು ಹೆಚ್ಚಿಸುತ್ತದೆ; ಅಂದರೆ, ಯಂತ್ರೋಪಕರಣಗಳ ಬಳಕೆಯು ತಕ್ಷಣವೇ ಉದ್ಯೋಗಾವಕಾಶಗಳನ್ನು ಇಳಿಕೆ ಮಾಡಬಹುದಾದರೂ ಬೆಳವಣಿಗೆಯ ದರವನ್ನು ಏರಿಕೆ ಮಾಡುವುದರಿಂದಾಗಿ, ಸ್ವಲ್ಪ ಸಮಯದ ಬಳಿಕ ಉದ್ಯೋಗಗಳ ಸಂಖ್ಯೆಯು ಯಂತ್ರೋಪಕರಣಗಳ ಬಳಕೆ–ಪೂರ್ವದಲ್ಲಿ ಇದ್ದುದಕ್ಕಿಂತಲೂ ವೃದ್ಧಿಸುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿದ್ದರು.

ಹಾಗೆ ನೋಡಿದರೆ ಸೇ ನಿಯಮವು ಯಾವುದೇ ಸಿಂಧುತ್ವವನ್ನು ಹೊಂದಿಲ್ಲ. ಬಂಡವಾಳಶಾಹಿಯ ಅಡಿಯಲ್ಲಿ, ಹೂಡಿಕೆಯು ಮಾರುಕಟ್ಟೆಯ ನಿರೀಕ್ಷಿತ ಬೆಳವಣಿಗೆಯಿಂದ ನಿರ್ಧರಿಸಲ್ಪಡುತ್ತದೆ. ಮಿಗುತಾಯದ ಪ್ರಮಾಣದಿಂದ ಅಲ್ಲ. (ಹೊರ ಜಗತ್ತಿಗೆ ಇನ್ನೂ ತೆರೆದುಕೊಳ್ಳದ ವಸಾಹತುಗಳ ಮಾರುಕಟ್ಟೆಗಳಿಗೆ ಪ್ರವೇಶಿಸಲು ಅವಕಾಶವಿದ್ದಾಗ ಅಥವಾ ಒಟ್ಟಾರೆ ಬೇಡಿಕೆಯ ಕೊರತೆಯನ್ನು ನೀಗಿಸಲು ಪ್ರಭುತ್ವವು ಮಧ್ಯಪ್ರವೇಶಿಸಲು ಸಿದ್ಧವಿದ್ದಾಗ ಮಾತ್ರ ಹೂಡಿಕೆಯು ಮಹತ್ವ ಪಡೆಯುತ್ತದೆ). ಯಂತ್ರಗಳ ಬಳಕೆಯ ನಂತರವೂ ಮೆಟ್ರೊಪಾಲಿಟನ್ ದೇಶಗಳಲ್ಲಿ ಬೃಹತ್ ಪ್ರಮಾಣದ ನಿರುದ್ಯೋಗವು ಐತಿಹಾಸಿಕವಾಗಿ ಉಂಟಾಗದಿರುವ ಕಾರಣದಲ್ಲಿ ಎರಡು ಭಾಗಗಳಿವೆ: ಮೊದಲನೆಯದು, ವಸಾಹತು ಮಾರುಕಟ್ಟೆಗಳು ಸುಲಭವಾಗಿ ಒದಗುತ್ತಿದ್ದುದರಿಂದಾಗಿ, ತಾಂತ್ರಿಕ ಬದಲಾವಣೆಗಳ ಪರಿಣಾಮವಾಗಿ ಉಂಟಾದ ನಿರುದ್ಯೋಗವನ್ನು ವಸಾಹತುಗಳಿಗೆ ವರ್ಗಾಯಿಸಲಾಯಿತು (ಅಪ–ಕೈಗಾರಿಕೀಕರಣದ ರೂಪದಲ್ಲಿ). ಅಂದರೆ, ಮೆಟ್ರೊಪಾಲಿಟನ್ ದೇಶಗಳು ನಿರುದ್ಯೋಗವನ್ನು ವಸಾಹತುಗಳಿಗೆ ರಫ್ತು ಮಾಡಿದವು. ಎರಡನೆಯದು, ತಾಂತ್ರಿಕ ಬದಲಾವಣೆಗಳ ಪರಿಣಾಮವಾಗಿ ಉಂಟಾದ ನಿರುದ್ಯೋಗವು ಸ್ಥಳೀಯವಾಗಿ ಹೆಚ್ಚು ಕಾಲ ಕಾಡಿಸಲಿಲ್ಲ. ಏಕೆಂದರೆ, ಉದ್ಯೋಗ ಕಳೆದುಕೊಂಡವರು ಅಥವಾ ಉದ್ಯೋಗ ಹುಡುಕುವವರು ವಿದೇಶಗಳಿಗೆ ವಲಸೆ ಹೋದರು. "ದೀರ್ಘ ಹತ್ತೊಂಬತ್ತನೇ ಶತಮಾನ"ದ ಉದ್ದಕ್ಕೂ (1789–1919, ಅಂದರೆ, ಫ್ರೆಂಚ್ ಕ್ರಾಂತಿಯಿಂದ ಹಿಡಿದು ಮೊದಲ ವಿಶ್ವ ಯುದ್ಧದವರೆಗೆ) ಸುಮಾರು 5 ಕೋಟಿ ಯುರೋಪಿಯನ್ನರು ಕೆನಡಾ, ಅಮೆರಿಕಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಂತಹ ಬಿಳಿಯ ವಸಾಹತುಗಳ ಸಮಶೀತೋಷ್ಣ ಪ್ರದೇಶಗಳಿಗೆ ವಲಸೆ ಹೋದರು.

ಇಂದಿನ ಪರಿಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿದೆ. ವಸಾಹತುಶಾಹಿಯು ಇನ್ನೂ ಅಸ್ತಿತ್ವದಲ್ಲಿದೆ. ಆದರೆ ಮೂರನೇ ಜಗತ್ತಿನ ದೇಶಗಳ ಮಾರುಕಟ್ಟೆಗಳು ಮೆಟ್ರೊಪಾಲಿಟನ್ ದೇಶಗಳ ಒಟ್ಟಾರೆ ಬೇಡಿಕೆಯಲ್ಲಿ ಉದ್ಭವವಾಗುವ ಯಾವುದೇ ಕೊರತೆಯನ್ನು ಕಡಮೆ ಮಾಡುವಲ್ಲಿ ಅಸಮರ್ಪಕವಾಗಿವೆ. ಅಂತೆಯೇ, ಪ್ರಭುತ್ವವು ದೇಶದ ಒಟ್ಟಾರೆ ಬೇಡಿಕೆಯ ಕೊರತೆಯನ್ನು ನಿಭಾಯಿಸುವುದು ಸಾಧ್ಯವಾಗುತ್ತಿಲ್ಲ. ಏಕೆಂದರೆ, ಅದು ತನ್ನ ಏರುತ್ತಿರುವ ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳಲು ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಕ್ರಮವು FRBM ಕಾಯ್ದೆಯ ಮಿತಿಗೆ ಒಳಪಟ್ಟಿದೆ; ಪರ್ಯಾಯವಾಗಿ, ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸಿದರೆ, ಹಣ ಕಾಸು ಬಂಡವಾಳದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ (ದುಡಿಯುವವರ ಮೇಲೆ ಹೆಚ್ಚು ತೆರಿಗೆ ಹೇರಿದರೆ, ಒಟ್ಟಾರೆ ಬೇಡಿಕೆಯಲ್ಲಿ ಹೆಚ್ಚಳವಾಗುವುದಿಲ್ಲ). ಆದ್ದರಿಂದ, ಈ ಎಲ್ಲ ವಿವರಗಳಿಂದ ವ್ಯಕ್ತವಾಗುವುದು ಏನೆಂದರೆ, ಒಂದು ಬಂಡವಾಳಶಾಹಿ ವ್ಯವಸ್ಥೆಯ ಸಂದರ್ಭದಲ್ಲಿ, ಕೃತಕ ಬುದ್ಧಿಮತ್ತೆಯ ಬಳಕೆಯೂ ಸೇರಿದಂತೆ, ಯಾಂತ್ರೀಕರಣವು ಅನಿವಾರ್ಯವಾಗಿ ಬೃಹತ್ ನಿರುದ್ಯೋಗವನ್ನು ಸೃಷ್ಟಿಸುತ್ತದೆ ಎಂಬುದು.

ಇದೇ ಪರಿಸ್ಥಿತಿ ಒಂದು ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಹೇಗೆ ತೆರೆದುಕೊಳ್ಳುತ್ತದೆ ಎಂಬುದನ್ನು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉಂಟಾಗುವ ಪರಿಸ್ಥಿತಿಯೊಂದಿಗೆ ಹೋಲಿಕೆ ಮಾಡಿ ನೋಡೋಣ. ಸಮಾಜವಾದಿ ವ್ಯವಸ್ಥೆಯಲ್ಲಿ, ಕೃತಕ ಬುದ್ಧಿಮತ್ತೆಯ ಬಳಕೆಯೂ ಸೇರಿದಂತೆ ಯಾವುದೇ ಯಾಂತ್ರೀಕರಣವು ಉದ್ಯೋಗಗಳನ್ನು ಕಡಿತಗೊಳಿಸುವುದಿಲ್ಲ; ಉತ್ಪಾದನೆಯನ್ನು ಕಡಿತಗೊಳಿಸುವುದಿಲ್ಲ ಮತ್ತು ಕಾರ್ಮಿಕರ ವೇತನವನ್ನೂ ಕಡಿತಗೊಳಿಸುವುದಿಲ್ಲ. ಅದು ಕಾರ್ಮಿಕರ ಕತ್ತೆ ಚಾಕರಿಯನ್ನು ಮಾತ್ರ ಕಡಿಮೆ ಮಾಡುತ್ತದೆ. ಈ ಎಲ್ಲ ವಿಷಯಗಳೂ ಕೇಂದ್ರೀಯವಾಗಿ ನಿರ್ಧರಿಸಲ್ಪಡುತ್ತವೆ. ಎರಡು ರೀತಿಯ ಅರ್ಥವ್ಯವಸ್ಥೆಗಳ ನಡುವಿನ ಈ ಮೂಲಭೂತ ವ್ಯತ್ಯಾಸವು ಕೃತಕ ಬುದ್ಧಿಮತ್ತೆಯ ಹಾನಿಕರವಲ್ಲದ ಬಳಕೆಯು ಬಂಡವಾಳಶಾಹಿಯನ್ನು ಮೀರಿದ ಬಳಿಕ ಮಾತ್ರ ಏಕೆ ಸಾಧ್ಯವಾಗುತ್ತದೆ ಎಂಬುದನ್ನು ವಿವರಿಸುತ್ತದೆ. ●

ನಗರ್ತಪೇಟೆಯ ಘಟನೆಗಳನ್ನು ನಿಷ್ಪಕ್ಷಪಾತ ತನಿಖೆಗೊಳಪಡಿಸಲು ಸಿಪಿಐ(ಎಂ) ಒತ್ತಾಯ

ಬೆಂಗಳೂರು ನಗರದ ನಗರ್ತಪೇಟೆಯಲ್ಲಿ ಮೊಬೈಲ್ ಮಳಿಗೆ ಮಾಲೀಕನ ಮೇಲೆ ನಡೆಯಿತೆನ್ನಲಾದ ಘಟನೆ ಹಾಗೂ ನಂತರದ ಕೋಮು ದ್ವೇಷ ಪ್ರಚೋದಕ ನಡಾವಳಿಗಳನ್ನು ಸಮಗ್ರ ಹಾಗೂ ನಿಷ್ಪಕ್ಷ ಪಾತ ತನಿಖೆಗೊಳಪಡಿಸಿ ಸತ್ಯವನ್ನು ರಾಜ್ಯದ ಜನತೆಯ ಮುಂದಿಡಬೇಕು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ದ ಕರ್ನಾಟಕ ರಾಜ್ಯ ಸಮಿತಿಯು ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸಿದೆ.



ಮೊಬೈಲ್ ಮಳಿಗೆ ಮಾಲೀಕನ ಮೇಲೆ ಕೆಲವರು ಹಲ್ಲೆ ನಡೆಸಿದರೆಂಬ ಘಟನೆಯ ಆಧಾರದಲ್ಲಿ ಅದಾಗಲೇ ಪೊಲೀಸರು ಆರೋಪಿಗಳನ್ನು ಬಂದಿಸಿ ತನಿಖೆ ಮುಂದುವರೆಸಲಾಗಿದೆಯೆಂದು, ಸ್ಪಷ್ಟವಾಗಿ ಪೋಲೀಸ ಇಲಾಖೆ ತಿಳಿಸಿ, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು ಈ ವಿಚಾರದಲ್ಲಿ ಮದ್ಯ ಪ್ರವೇಶಿಸಬಾರದೆಂದು ಹೇಳಿದಾಗಲೂ, ಒಕ್ಕೂಟ ಸರಕಾರದ ಸಚಿವರಾದ ಶ್ರೀಮತಿ ಶೋಭಾ ಕರಂದ್ಲಾಜೆ ಹಾಗೂ ಸಂಸದರಾದ ಶ್ರೀ ತೇಜಸ್ವೀ ಸೂರ್ಯ ಹಾಗೂ ಶಾಸಕ ಸುರೇಶ್ ಕುಮಾರ್ ರವರು ನೀತಿ ಸಂಹಿತೆಯನ್ನು ಉಲ್ಲಂಘಿಸಿ, ಚುನಾವಣಾ ಲಾಭದ ರಾಜಕೀಯಕ್ಕೆ ಬಳಸಿಕೊಂಡಿರುವುದನ್ನು ಸಿಪಿಐಎಂ ಬಲವಾಗಿ ಖಂಡಿಸುತ್ತದೆ. ಇದು ಕೇವಲ ರಾಜಕೀಯ ಲಾಭದ ಪ್ರಶ್ನೆಯೂ ಅಲ್ಲಾ ಇದು ರಾಜ್ಯದ ಸೌಹಾರ್ದದ ಪ್ರಶ್ನೆಯೂ ಆಗಿದ್ದು ಇವರ ಮೇಲೆಯು ಕಾನೂನಿನ ಕ್ರಮವಹಿಸುವಂತೆ ಆಗ್ರಹಿಸಿದೆ.

ರಾಜ್ಯವು ತೀವ್ರ ರೀತಿಯ ಬರಗಾಲಬನ್ನು ಎದುರಿಸುತ್ತಿರುವಾಗ ರಾಜ್ಯದ ಜನತೆಯ ರಕ್ಷಣೆಗೆ ತಮ್ಮ ಅಧಿಕಾರ ಬಳಸಿ, ಒಕ್ಕೂಟ ಸರಕಾರದ ಮೇಲೆ ಒತ್ತಡ ಹೇರಿ ಪರಿಹಾರ ಕೊಡಿಸಲು ರಾಜ್ಯದ ಜೊತೆ ನಿಲ್ಲಲು ಮುಂದಾಗದಿರುವ ಇವರು ಈ ರೀತಿಯ ಚಟುವಟಿಕೆಯಲ್ಲಿ ತೊಡಗಿರುವುದು ಅವರ ಸಂಕುಚಿತ ರಾಜಕಾರಣಕ್ಕೆ ಹಿಡಿದ ಕನ್ನಡಿಯಾಗಿದೆ.

ನಾಗರೀಕರು ಯಾವುದೇ ಭಾವನಾತ್ಮಕ ಪ್ರಚೋದನೆಗೊಳಗಾಗದೆ ಶಾಂತಿಯನ್ನು ಹಾಗೂ ಸೌಹಾರ್ಧತೆಯನ್ನು ಕಾಪಾಡಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು ಬಸವರಾಜ್ ಮನವಿ ಮಾಡಿದ್ದಾರೆ.

ಮೈತ್ರಿ ಒಳಗೂ ಇದೆ ಕದನದ ಕಣ.... ಪುಟ 3 ರಿಂದ

ಅತ್ಯಂತ ತೀವ್ರವಾದ ಆಂತರಿಕ ಪೈಪೋಟಿಯೂ ಇದೆ. ಕೋಲಾರದಲ್ಲಿ ಕರ್ನಾಟಕದ ಆಹಾರ ಸಚಿವ ಮುನಿಯಪ್ಪ ಅವರ ಮಗಳಿಗೆ ಟಿಕೆಟ್ ಕೊಡಬೇಕು ಎಂದು ಆ ಬಣ ಕೇಳುತ್ತಿದೆ. ಒಂದು ವೇಳೆ ಅವರಿಗೆ ಸಿಕ್ಕರೆ ಅದರ ವಿರುದ್ಧ ಕೆಲಸ ಮಾಡುವ ಸೂಚನೆಯನ್ನು ಬಲವಾಗಿ ರಮೇಶ್ ಕುಮಾರ್ ಬಣ ವ್ಯಕ್ತಪಡಿಸುತ್ತಿದೆ. ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಭ್ಯರ್ಥಿಯಾಗಿದ್ದ ಮುನಿಯಪ್ಪನವರನ್ನು ಸೋಲಿಸಲೆಂದೇ ರಮೇಶ್ ಕುಮಾರ್ ಬಣ ಬಿಜೆಪಿಗೆ ಬೆಂಬಲಿಸಿ ಗೆಲ್ಲಲು ಕಾರಣವಾಗಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬೇಕು.

ಈಗ ಕಾಂಗ್ರೆಸ್ ಘೋಷಿಸಿರುವ ಎರಡನೇ ಕಂತಿನಲ್ಲಿ ಬಹಳಷ್ಟು ಅಭ್ಯರ್ಥಿಗಳು ಈಗಾಗಲೇ ರಾಜಕೀಯವಾಗಿ ಪ್ರಮುಖ ಸ್ಥಾನಗಳಲ್ಲಿರುವ ಸಚಿವರು ಅಥವಾ ನಾಯಕರ ಮಕ್ಕಳುಗಳೇ ಆಗಿದ್ದಾರೆ. ಇದರ ಜೊತೆಗೆ ಗೆಲ್ಲುವ ಸಾಧ್ಯತೆ ಅಂದರೆ ಸಾಕಷ್ಟು ಹಣ ಬಲವೂ ಇರುವ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಲಾಗಿರುವುದು ವಿಶೇಷ.

ಬಿಜೆಪಿಯೂ ಸಹ ಇನ್ನು ಐದು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿಲ್ಲ. ಆ ಕ್ಷೇತ್ರಗಳು ಸಹ ಅತ್ಯಂತ ಪ್ರಬಲ ಪೈಪೋಟಿ ಹೊಂದಿರುವಂತಹವು ಆಗಿವೆ. ಬಿಜೆಪಿಯೊಳಗೆ ಹಿರಿಯರನ್ನು ಅವರ ಕುಟುಂಬದ ಕೆಲವರನ್ನು ಹಿಂದೆ ಸರಿಸಲಾಗುತ್ತಿದೆ ಎನ್ನುವ ತೀವ್ರತರ ಆರೋಪದಲ್ಲಿ ಅತೃಪ್ತಿ ಮತ್ತು ಆಂತರಿಕ ಕಲಹ ಭಿನ್ನಾಭಿಪ್ರಾಯಗಳು ಬಯಲಿಗೆ ಬಂದಿವೆ. ಬಿ.ಎಸ್. ಯಡಿಯೂರಪ್ಪನವರ ಆತ್ಮೀಯ ಬಣದಲ್ಲಿದ್ದಂತಹ ರೇಣುಕಾಚಾರ್ಯರಂತವರು ಸಹ ದಾವಣಗೆರೆ ಕ್ಷೇತ್ರದ ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ತೀವ್ರ ಬೇಸರ ಮತ್ತು ಬಹಿರಂಗ ಟೀಕೆ ಮಾಡುವ ವರೆಗೂ ಹೋಗಿದ್ದಾರೆ. ಸ್ವತಂತ್ರವಾಗಿ ಅಭ್ಯರ್ಥಿಯನ್ನು ನಿಲ್ಲಿಸಿ ಗೆಲ್ಲಿಸಿ ಮೋದಿಯವರಿಗೆ ಕೊಡುಗೆ ಸಮರ್ಪಿಸುವುದಾಗಿಯೂ ಹೇಳುತ್ತಿದ್ದಾರೆ! ಇಂತಹ ತಿಕ್ಕಾಟ ನಾಮಪತ್ರ ಸಲ್ಲಿಸುವ ವರೆಗೂ ಬಹುಶಃ ಮುಂದುವರಿಯುವ ಸಾಧ್ಯತೆ ಇದೆ. ಬಜೆಪಿಯಲ್ಲಿಯೂ ಅತೃಪ್ತಿ ಮತ್ತು ಹತಾಶಗೊಂಡಿರುವ ನಾಯಕರು ಈಗ ಸವಾಲೆಸೆಯುವ ಮಾತುಗಳನ್ನು ಆಡುತ್ತಿದ್ದಾರಾದರೂ ಮುಂದೆ ಹೈಕಮಾಂಡಿನವರ ಸಂದಾನ ಸೂತ್ರದ, ಆಮಿಷಗಳ ಎದುರಿನಲ್ಲಿ ಏನಾಗುತ್ತಾರೆ ಎಂದು ಹೇಳುವುದು ಕಷ್ಟ. ಉಭಯ ಪಕ್ಷಗಳನ್ನು ಅಂತೂ ಲೋಕಸಭಾ ಸ್ಥಾನಗಳಿಗೆ ತೀವ್ರ ಪೈಪೋಟಿ ಇರುವುದು ನಿಶ್ಚಿತ.

ಒಟ್ಟಾರೆ ರಾಜಕೀಯ ವಾತಾವರಣವು ತೀವ್ರತರವಾದ ಸ್ಪರ್ಧಾತ್ಮಕತೆಯನ್ನು, ಸಮಬಲ ಪೈಪೋಟಿಯನ್ನು ಹೊಂದಿದೆ ಎನ್ನುವುದು ಎದ್ದು ಕಾಣುತ್ತದೆ.

ಚುನಾವಣಾ ಆಯುಕ್ತರ ನೇಮಕ, ಚುನಾವಣಾ ಘೋಷಣೆ..... ಪುಟ 9 ರಿಂದ

ಅಮಿತ್ ಶಾ ಮತ್ತು ವಿರೋಧ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರನ್ನು ಭೇಟಿ ಮಾಡಿ ಈ ನೇಮಕದ ಕುರಿತು ತೀರ್ಮಾನಿಸಿದ್ದರು. ಮಾಜಿ ಐಎಎಸ್ ಅಧಿಕಾರಿಗಳಾದ ಸುಖವೀರ್ ಸಿಂಗ್ ಸಂಧು ಮತ್ತು ಜ್ಞಾನೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಅಧೀರ್ ಬಹಿರಂಗಪಡಿಸಿದ್ದಾರೆ. ಇದನ್ನು ತಕ್ಷಣವೇ ಅಧಿಕೃತವಾಗಿ ದೃಢೀಕರಿಸಲಿಲ್ಲ. ವಾಸ್ತವವಾಗಿ, ಈ ನಿಯಂತ್ರಣವನ್ನು ಕ್ರೂರ ರಿಗ್ಗಿಂಗ್ ರೀತಿಯಲ್ಲಿ ಮಾಡಲಾಗಿದೆ ಎಂದು ಅವರು ಟೀಕಿಸಿದರು. ತನಗೆ 212 ಅಧಿಕಾರಿಗಳ ಪಟ್ಟಿಯನ್ನು ಸಭೆಯ ಹಿಂದಿನ ರಾತ್ರಿ ನೀಡಿದರೆ ಪರಿಶೀಲಿಸಲು ಹೇಗೆ ಸಾಧ್ಯ ಎಂದು ಚೌಧರಿ ಪ್ರಶ್ನಿಸಿದರು. ಸಭೆಗೆ ಹತ್ತು ನಿಮಿಷಗಳ ಮೊದಲು, ಇನ್ನೂ ಹತ್ತು ಹೆಸರುಗಳ ಸಣ್ಣದೊಂದು ಪಟ್ಟಿ ನೀಡಿ ಆಯ್ಕೆ ಮಾಡುವಂತೆ ತಿಳಿಸಿದ್ದು, ಅದರಲ್ಲಿ ಮತ್ತೆ ಆರು ಹೆಸರುಗಳನ್ನು ಪ್ರಸ್ತಾಪಿಸಿ, ಬಹುಮತದ ನಿರ್ಣಯದಂತೆ ಇಬ್ಬರು ಆಯುಕ್ತರನ್ನು ಆಯ್ಕೆ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು. ಸರ್ಕಾರ ಈಗಾಗಲೇ ನಿರ್ಧರಿಸಿದ್ದ ಹೆಸರುಗಳನ್ನು ಅಲ್ಲಿ ಅಂಗೀಕರಿಸುವ ಪ್ರಹಸನ ನಡೆಯಿತು ಎಂದು ಅವರು ವಿವರಿಸಿದರು. ಚುನಾವಣಾ ಆಯುಕ್ತರ ಸ್ಥಾನಗಳು ಖಾಲಿಯಾಗಿ ಇರಬಾರದು ಎಂಬ ಉದ್ದೇಶದಿಂದ ತಾನು ಸಭೆಗೆ ಹಾಜರಾದೆ ಎಂದು ಅವರು ಹೇಳಿದರು. ಹಾಗಾಗಿ ಎಲ್ಲರೂ ಆತಂಕಪಟ್ಟಿದ್ದಂತೆ ಕಣ್ಣುಸನ್ನೆಯಲ್ಲಿ ನಡೆದ ವ್ಯವಹಾರವಲ್ಲದೆ ಆಯ್ಕೆಯಲ್ಲಿ ಬೇರೆ ಏನೂ ಇಲ್ಲ. ಮತ್ತು ಅಂತಹ ಆಯೋಗವು ನಿರ್ಣಾಯಕ ಚುನಾವಣೆಗಳನ್ನು ಹೇಗೆ ನಿರ್ವಹಿಸುತ್ತದೆ ಎಂದು ಹೇಳುವ ಅಗತ್ಯವಿಲ್ಲ.

ವಿವಿ ಪ್ಯಾಟ್ ಮತ್ತು ಚುನಾವಾಣಾ ಬಾಂಡ್ ವಿವಾದ

ವಿವಿ ಪ್ಯಾಟ್ ವಿವಾದ ಇನ್ನೂ ಉಳಿದುಕೊಂಡಿದ್ದು, ಮತದಾರರು ಚಲಾಯಿಸಿದ ಮತವು ಗೊತ್ತುಪಡಿಸಿದ ಅಭ್ಯರ್ಥಿಗೆ ಹೋಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವ ಗುರಿಯನ್ನು ಹೊಂದಿದೆ. ಇವಿಎಂಗಳ ನೈಜ ಕಾರ್ಯಕ್ಷಮತೆಯ ಬಗ್ಗೆ ಹಲವು ಪ್ರಶ್ನೆಗಳಿವೆ. ಇತ್ತೀಚೆಗೆ, ಚುನಾವಣಾ ಬಾಂಡ್‌ಗಳು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಜಾರಿಗೆ ತರಬೇಕಾಗಿದೆ. ಈ ಬಾಂಡ್‌ಗಳ ಮಾರಾಟ ಮತ್ತು ವಿತರಣೆಯ ವಿವರಗಳನ್ನು ಚುನಾವಣಾ ಆಯೋಗಕ್ಕೆ ನೀಡುವಂತೆ ಸಂಬಂಧಪಟ್ಟ ಸ್ಟೇಟ್ ಬ್ಯಾಂಕ್‌ಗೆ ಕೇಳಿದರೆ, ಅದು ಹೆಚ್ಚಿನ ಸಮಯ ಕೇಳಿತು. ಅನಿವಾರ್ಯವಾಗಿ ಸುಪ್ರೀಂ ಕೋರ್ಟ್ ನಿಬರ್ಂಧಗಳನ್ನು ಹೇರಿದ ಬಳಿಕ ಸ್ಟೇಟ್ ಬ್ಯಾಂಕ್ ಇಸಿಗೆ ನೀಡಿದ ವಿವರಗಳು ಅಪೂರ್ಣವಾಗಿದ್ದು, ಮತ್ತೆ ಆಕ್ರೋಶ ವ್ಯಕ್ತಪಡಿಸಬೇಕಾಯಿತು. ಇದನ್ನು ನೋಡಿದರೆ, ಬಿಜೆಪಿಯ ಸಾಂಸ್ಥಿಕ ಅಸ್ಥಿತ್ವ ಎಷ್ಟಿದೆ ಎಂದು ಗೊತ್ತಾಗುತ್ತದೆ. ಕಾರ್ಪೊರೇಟ್ ಕಂಪನಿಗಳು 12,000 ಕೋಟಿ ರೂಪಾಯಿಗೂ ಹೆಚ್ಚು ಬಾಂಡ್‌ಗಳನ್ನು ಖರೀದಿಸಿವೆ. ಅದರಲ್ಲಿ 6,000 ಕೋಟಿಗೂ ಹೆಚ್ಚು ಬಿಜೆಪಿ ಪಕ್ಷದ ಪಾಲಾಗಿದೆ. ಕಾಂಗ್ರೆಸ್ 1,400 ಕೋಟಿ, ನಂತರ ಕಮ್ಯುನಿಸ್ಟ್ ವಿರೋಧಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ 1,200 ಕೋಟಿ. (ಈ ವಿವರಗಳನ್ನು ಜನಶಕ್ತಿ ನೀಡಿದೆ). ಆದರೆ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಬಗ್ಗೆ ಮಾತನಾಡುತ್ತಿರುವ ಅಮಿತ್ ಶಾ 303 ಸಂಸದರನ್ನು ಹೊಂದಿರುವ ನಮ್ಮ ಪಕ್ಷಕ್ಕೆ ದೇಣಿಗೆ ಬಂದರೆ ತಪ್ಪೇನು ಎಂದು ಕೌಂಟರ್ ಅಟ್ಯಾಕ್ ಶುರು ಮಾಡಿದ್ದಾರೆ. ಅದೇನಿದ್ದರೂ ರಾಷ್ಟ್ರೀಯ, ಪ್ರಾದೇಶಿಕ ಆಡಳಿತ ಪಕ್ಷಗಳೆಲ್ಲ ಈ ಪ್ರಭಾವಕ್ಕೆ ಒಳಗಾಗಿವೆ. ಸಿಪಿಐ(ಎಂ) ಪಕ್ಷ ಇದನ್ನು ಕೊಳಕು ಎನ್ನುತ್ತದೆ.

ಚುನಾವಣೆ ಘೋಷಣೆಯಾಗಿದೆ

ಇಷ್ಟೊಂದು ಪ್ರಭಾವ ಬೀರುವ ಹಣದ ಚೀಲಗಳು ಮತ್ತು ತಪ್ಪು ರೀತಿಯಲ್ಲಿ ಆಯುಕ್ತರ ನೇಮಕದ ನಡುವೆ ವಿಶ್ವಾಸಾರ್ಹತೆ ಏನಿದೆ? ಕಾರ್ಮೋಡಗಳ ನಡುವೆ ನೇಮಕಗೊಂಡ ಇಬ್ಬರ ಜೊತೆಗೆ ಮುಖ್ಯ ಆಯುಕ್ತ ರಾಜೀವ್ ಕುಮಾರ್ ಬೃಹತ್ ಚುನಾವಣಾ ಕಾರ್ಯಕ್ರಮವನ್ನು ಘೋಷಿಸಿದರು. ಏಪ್ರಿಲ್ 18 ರಂದು ಆರಂಭವಾದ ಈ ಮಹತ್ವದ ಪ್ರಚಾರದ ಫಲಿತಾಂಶ ಜೂನ್ 1 ರಂದು ಕೊನೆಗೊಂಡು ಈ ಪ್ರಮುಖ ಹೋರಾಟದ ಪಲಿತಾಂಶ ಜೂನ್ 4 ರಂದು ತಿಳಿಯಲಿದೆ. ಚುನಾವಣೆಯ ಫಲಿತಾಂಶವನ್ನು ನಾವು ಇನ್ನಷ್ಟು ರೋಚಕತೆಯಿಂದ ಕಾಯಬೇಕಾಗಿದೆ. ಇಲ್ಲದಿದ್ದರೆ, ಈ ವಿವಾದಾತ್ಮಕ ವಾತಾವರಣವು ಅದನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ.

ಕೃಪೆ: ಪ್ರಜಾಶಕ್ತಿ

NEW No. MAG(3)/NPP/205/2021-2022
JANASHAKTHI KANNADA VARA PATRIKE March 25-31, 2024 Price: Rs. 10/- Date of Publication: 22 March 2024 RNI No. KARKAN /2006/17926 Posted on 23-03-2024
Posted at BG PSO, BG - 560026 **Posted at Periodical Rate -** Rs. 2



ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ–2024
ಚಲನ ಚಿತ್ರಗಳ ವಿಮರ್ಶೆ

ಡಾ. ಮೀನಾಕ್ಷಿ ಬಾಳಿ, ಕಲಬುರಗಿ

"ಬೆಂಗಳೂರಿನಲ್ಲಿ ಜಗತ್ತು" ಇದು ಈ ಸಲದ 15ನೇ ಅಂತರಾಷ್ಟ್ರೀಯ ಚಲನಚಿತ್ರೋತ್ಸವದ ಥೀಮ್ (ಪರಿಕಲ್ಪನೆ) ಆಗಿತ್ತು. ಫೆಬ್ರವರಿ 29 ರಿಂದ ಮಾರ್ಚ 7 ರವರೆಗೆ ನಡೆದ ಈ ಉತ್ಸವದಲ್ಲಿ 221 ಚಿತ್ರಗಳು ಪ್ರದರ್ಶನಗೊಂಡವು. ಚಿತ್ರಪ್ರೇಮಿಗಳಿಗೆ ಇಂದು ನಿಜವಾಗಿಯೂ ದೊಡ್ಡ ಹಬ್ಬವೆ ಸರಿ. ಕಳೆದ ಬಾರಿಗಿಂತ ಈ ಸಲ ತುಂಬಾ ಮೌಲಿಕ ಮತ್ತು ಅರ್ಥಪೂರ್ಣ ಚಿತ್ರಗಳು ಆಯ್ಕೆಯಾಗಿದ್ದವು. ಆಯ್ಕೆ ಸಮಿತಿಯ ಪರಿಶ್ರಮ ಮತ್ತು ಬದ್ಧತೆ ಎದ್ದು ಕಾಣಿಸಿತು. ಜಗತ್ತಿನ ಎಲ್ಲ ಮೂಲೆಗಳಿಂದ ಅಪರೂಪದ ಚಿತ್ರಗಳು ಸೇರಿಕೊಂಡಿದ್ದವು. ಕನ್ನಡದ ಕಲಾತ್ಮಕ ಚಿತ್ರಗಳಲ್ಲೆ ಹಳೆಯ ಕ್ಲಾಸಿಕ್ ಚಿತ್ರಗಳು, ಜನಪ್ರಿಯ ಚಿತ್ರಗಳೂ ಪ್ರದರ್ಶನಗೊಂಡು ಕನ್ನಡ ಪ್ರೇಮಿಗಳ ಹಸಿವನ್ನು ತಣಿಸುವಂತಿದ್ದವು. ಭಾರತವೇ ಒಂದು ಜಗತ್ತು ಎಂಬಂತಿರುವುದರಿಂದ ಇಲ್ಲಿನ ವೈವಿಧ್ಯಮಯ ಭಾಷೆಗಳ ಚಿತ್ರಗಳು ಸೇರಿಕೊಳ್ಳುವ ಮೂಲಕ ಬಹುತ್ವ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ಸಾಧ್ಯವಾಗಿತ್ತು. ಸ್ವಿಜರ್ಲೆಂಡ್, ಜರ್ಮನ್, ಫ್ರಾನ್ಸ್, ಇಟಲಿ, ಹಂಗೇರಿಯಾ, ಇಂಡೋನೇಷಿಯಾ, ಜಪಾನ, ಜೋರ್ಡ್ಹಾನ್, ಉಜ್ಬೆಕಿಸ್ತಾನ್, ಇರಾನ್, ಪರ್ಶಿಯಾ, ಯಮನ್, ನೇಪಾಳ, ಸಿಂಗಪೂರ್ ಥೈವಾನ್, ಮಂಡೇರಿಯನ್, ಜಾರ್ಜಿಯಾ, ಸ್ಪೇನ್, ಪೊರ್ತುಗಾಲ್, ರೊಮಾನಿಯಾ, ಚಿಲಿ, ಪೋಲೆಂಡ್, ಉಕ್ರೇನ್, ರಷ್ಯಾ, ಟರ್ಕಿ, ಚೈನಾ, ಮಾಕ್ಸಿಕೊ, ಬೆಲ್ಜಿಯಂ, ಸೆನೆಗಲ್, ಬಲ್ಗೇರಿಯಾ, ಜೆಕೋಸ್ಲೋವಾಕಿಯಾ, ಮಂಗೋಲಿಯಾ, ಸ್ಪೇನ್, ಆಸ್ಟ್ರೇಲಿಯಾ, ಇಸ್ರೇಲ್, ಮೊರೆಕೊ, ಸೈಪ್ರಸ್, ಸ್ವೀಡನ್, ಫಿನ್ಲೆಂಡ್, ಟ್ಯುನೇಷಿಯಾ, ಅಮೇರಿಕಾ, ಸೂಡಾನ್, ಮ್ಯಾಕ್ಸಿಕೋ, ವಿಯೆಟ್ನಾಂ, ಕಾಂಗೊ, ಶ್ರೀಲಂಕಾ, ಕೋರಿಯನ್, ಅಲ್ಜೇರಿಯಾ, ಲಿಥ್ಯುವೆನಿಯಾ, ನೆದರಲ್ಯಾಂಡ್, ಕೆನಡಾ, ಬ್ರೆಜಿಲ್, ಅರ್ಜೈಂಟಿನಾ, ಬ್ರಾಜಿಲ್, ಕಜುಕಿಸ್ತಾನ್, ಭೂತಾನ್, ಯುಕೆ,(ಇಂಗ್ಲೆಂಡ್), ಪ್ಯಾಲೈಸ್ತೈನ್, ಪೋಲೆಂಡ್, ಮ್ಯಾಕ್ಸಿಕೊ, ನೇಪಾಳ ಮುಂತಾಗಿ 60 ಕ್ಕೂ ಹೆಚ್ಚು ದೇಶಗಳ ಸಿನೇಮಾಗಳು ನೋಡಲು ಲಭಿಸಿದ್ದು ಸುಯೋಗವೇ ಸರಿ. ಇನ್ನು ಭಾರತೀಯ ಭಾಷೆಗಳಾದ ಕನ್ನಡ, ತೆಲುಗು, ತಮಿಳು, ಮಲೆಯಾಳಿ, ಹಿಂದಿ, ಉರ್ದು, ಬೆಂಗಾಲಿ, ಮರಾಠಿ ಮುಂತಾದ ಅಧಿಕೃತ ಭಾಷಾ ಚಿತ್ರಗಳಲ್ಲದೆ, ಉಪಭಾಷೆಗಳಾದ, ಬೊಡೋ, ತುಳು, ಅರೆಭಾಷಿ, ಸಂತಾಲಿ, ಥಂಗಕೋಲ್, ಕಶ್ಮೀರಿ, ಬುಂದೇಲಿ, ಗಢವಾಲಿ, ಗೋರಮಾಟಿ, ಥೈಪಾಕಿ, ಮರಕೋಡಿ, ಸಂತಾಲಿ, ಗಾಲೋ, ಕೊಡವ, ಜೈನ್‌ಂಥಿಯಾ, ಮಣಿಪುರಿ, ಆಸ್ಸಾಮಿ ಇತ್ಯಾದಿ ಚಿತ್ರಗಳು ನೋಡಲು ಅವಕಾಶವಿತ್ತು.

ಇಷ್ಟೆಲ್ಲಾ ಚಿತ್ರಗಳನ್ನು ಒಬ್ಬ ವ್ಯಕ್ತಿಗೆ ನೋಡಲು ಸಾಧ್ಯವಾಗದಿದ್ದರೂ ಚಿತ್ರ ರಸಿಕರು ತಮಗೆ ಬೇಕಾದ ಚಿತ್ರಗಳನ್ನು ಆರಿಸಿಕೊಂಡು ನೋಡಿದ್ದು ಸಂತೃಪ್ತ ಭಾವ ಮೂಡಿಸಿತ್ತು. ನೋಡಿದ ಸಿನೇಮಾಗಳ ಪೈಕಿ ಕೆಲವೊಂದು ಚಿತ್ರಗಳಂತೂ ಕಾಡದೆ ಇರವು.

ಅದರಲ್ಲಿ ಸ್ಪೇನ್ ದೇಶದ 'ದ ರೈ ಹಾರ್ನ್' ಎಂಬ ಚಿತ್ರವಂತೂ ತನ್ನ ಹೃದಯಸ್ಪರ್ಶಿ ಸನ್ನಿವೇಶಗಳಿಂದಾಗಿ ಸದಾಕಾಲ ನೆನಪಿನಲ್ಲಿ ಉಳಿದು ಬಿಡುತ್ತದೆ. ಜೈಓನಿ ಕಂಬೋರ್ಡಾ ಎಂಬ ನಿರ್ದೇಶಕಿ ಮಹಿಳಾ ಪ್ರಧಾನ ವಸ್ತುವೊಂದನ್ನು ಆರಿಸಿಕೊಂಡು ಮನೋಜ್ಞವಾಗಿ ಚಿತ್ರಿಕರಿಸಿದ್ದಾರೆ. ಗಲೇಷಿಯನ್, ಪೋರ್ತುಗೀಸ್, ಸ್ಪಾನಿಸ್ ಮೂರು ಭಾಷೆಗಳಲ್ಲಿ ತೆರೆಕಂಡ ಚಿತ್ರದ ಅವಧಿ 105 ನಿಮಿಷ. 1971 ನೇ ಸಾಲಿನ ಆಸುಪಾಸಿನಲ್ಲಿ ಸ್ಪೇನ್ ನ ಫ್ರಾಂಕೊಯಿಸ್ಟ್ ನ ಹಳ್ಳಿಗಾಡಿನಲ್ಲಿ ಮಾರಿಯಾ ಎಂಬ ಬಡ ಮಹಿಳೆ ಸೂಲಗಿತ್ತಿಯಾಗಿ ಒಂಟಿ ಜೀವನ ನಡೆಸುತ್ತಿರುತ್ತಾಳೆ. ಹೆರಿಗೆ ಮಾಡಿಸುವಲ್ಲಿ ಸುತ್ತ ಫಾಸಲೆಯಲ್ಲಿ ಹೆಸರು ಮಾಡಿದ ಈಕೆ ಎಲ್ಲರೊಂದಿಗೂ ಸೌಹಾರ್ದಯುತವಾಗಿಯೇ ಕಾಲ ಕಳೆಯುತ್ತಿರುತ್ತಾಳೆ. ಅಷ್ಟರಲ್ಲಿ ಅದೇ ಊರಿನ ಮಧ್ಯಮ ವರ್ಗದ ಕುಟುಂಬದ ಪುಟ್ಟ ಹುಡುಗಿಯೊಬ್ಬಳು ಅಂದರೆ ಹೈಸ್ಕೂಲ ಮಟ್ಟದಲ್ಲಿದ್ದಿರಬಹುದಾದ ಮಗು ಅವಳು. ತನ್ನ ಓರಿಗೆಯ ಹುಡುಗನೊಂದಿಗೆ ಸಲುಗೆ ಬೆಳೆದು ದೈಹಿಕ ಸುಖಕ್ಕೂ ಒಡ್ಡಿಕೊಳ್ಳುತ್ತಾಳೆ. ಎಷ್ಟೇ ಇದ್ದರೂ ಅದು ಅಪಾರ ಕುತೂಹಲ ತುಂಬಿಕೊಂಡಿರುವ ಜಾರುವ ವಯಸ್ಸಾದ್ದರಿಂದ ಶರೀರ ವಾಂಛೆ ಮಗುವನ್ನು ತುಂಬಾ ದೂರ ಎಳೆದುಕೊಂಡು ಹೋಗುತ್ತದೆ. ಅನುಭವಿಸಿದ ಸುಖವನ್ನು ಮೆಲಕು ಹಾಕುವಷ್ಟರಲ್ಲಿ ಗರ್ಭ ಕಟ್ಟಿಕೊಳ್ಳುತ್ತದೆ. ಕಕ್ಕಾಬಿಕ್ಕಿಯಾದ ಹುಡುಗಿ ಗರ್ಭವಿಳಿಸಿಕೊಳ್ಳಲು ಮಾರಿಯಾ ಬಳಿ ಬರುತ್ತಾಳೆ. ಮಾರಿಯಾ ತಾನು ಇಂಥ ಕೆಲಸ ಮಾಡಲಾರೆ ಎಂದು ಖಡಾಖಂಡಿತವಾಗಿ ನಿರಾಕರಿಸಿದರೂ ಹುಡುಗಿ ಒಂದೆ ಸವನೇ ಅಂಗಲಾಚುತ್ತಾಳೆ. ತನ್ನನ್ನು ಈ ಅವಘಡದಿಂದ ಪಾರು ಮಾಡಬೇಕೆಂದು ದಯನೀಯವಾಗಿ ಕೇಳಿಕೊಂಡಾಗ ಮಾರಿಯಾಗೆ ಗರ್ಭವಿಳಿಸಲು ಒಪ್ಪಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಮರುದಿನ ಸ್ಕೂಲ ಹೊತ್ತಿಗೆ ಕಳ್ಳ ಮಾರ್ಗವಾಗಿ ಬಂದ ಹುಡುಗಿಗೆ ಮಾರಿಯಾ ಯಾವುದೋ ಗಿಡವೊಂದರ ಬೀಜ ಕುಟ್ಟಿ ಪುಡಿ ಮಾಡಿ ಕುಡಿಸಿ ಗರ್ಭಪಾತ ಮಾಡಿಸಲು ಅಣಿಯಾಗುತ್ತಾಳೆ. ಗಿಡಮೂಲಿಕೆ ಸೇವಿಸಿದ ಕೆಲವೇ ನಿಮಿಷಗಳಲ್ಲಿ ಪುಟ್ಟ ಪೋರಿ ಮಾರಣಾಂತಿಕ ನೋವು ಅನುಭವಿಸಿ ಒದ್ದಾಡುತ್ತಲೆ ರಕ್ತಸ್ರಾವವಾಗುತ್ತದೆ. ಅಂತೂ ಅರಿಭಯಂಕರ ನೋವು ಅನುಭವಿಸುತ್ತಲೆ ಹುಡುಗಿ ಮನೆಗೆ ಮರಳುತ್ತಾಳೆ. ಆದರೆ ಕೆಲವೇ ಗಂಟೆಗಳಲ್ಲಿ ಹುಡುಗಿ ಮರಣಿಸುತ್ತಾಳೆ. ಮಾರಿಯಾಳ ಗೆಳತಿ ಓಡುತ್ತ ಬಂದು ಸಂಭವಿಸಿದ ದುರಂತವನ್ನು ಅರುಹಿ ಹುಡುಗಿ ಸತ್ತದ್ದು ಗರ್ಭಪಾತದಿಂದಾಗಿ ಮತ್ತು ಅದನ್ನು ಮಾಡಿಸಿದವಳು ನೀನೆ ಎಂಬ ವದಂತಿ ಹಬ್ಬಿದೆ. ಅಧಿಕಾರಿಗಳು



ನಿನ್ನನ್ನು ಅಟ್ಟಿಸಿಕೊಂಡು ಬರುವ ಮುಂಚೆಯೇ ಇಲ್ಲಿಂದ ಹೊರಡು ಎಂದು ಹೇಳುತ್ತಾಳೆ. ಗಾಬರಿಯಾದ ಮಾರಿಯಾ ಇದ್ದುಬದ್ದ ಹಣ ಹೊಂಚಿಕೊಂಡು ರಾತ್ರೋರಾತ್ರಿ ರಾಷ್ಟ್ರವನ್ನೆ ತೊರೆದು ಪೋರ್ತುಗಲ್‌ನತ್ತ ಹೊರಡುತ್ತಾಳೆ. ಏನೆಲ್ಲಾ ತಾಪತ್ರಯ ಅನುಭವಿಸಿ ಕದ್ದು ಮುಚ್ಚಿ ಅಪಾಯಕಾರಿ ಜನರ ಮಧ್ಯೆ ಸಿಲುಕಿ ಕೊನೆಗೆ ವೇಶ್ಯೆಯಾಗಿ ಕೆಲಸ ಮಾಡುತ್ತಿದ್ದ ಬಡ ಕಪ್ಪುಮಹಿಳೆಯ ಬಳಿ ಬರುತ್ತಾಳೆ. ತಾನು ಎಲ್ಲಿಗೆ ಹೋಗಬೇಕು ಎಂಬುದರ ನಿಶ್ಚಿತ ಗುರಿಯೆ ಇರದ ಮಾರಿಯಾಳಿಗೆ ಆ ಕಪ್ಪು ಮಹಿಳೆ ಆಶ್ರಯ ನೀಡಿ ತಾನು ದಂಧೆ ಮಾಡಲು ಹೋದಾಗ ತನ್ನ ಮಗುವನ್ನು ನೋಡಿಕೊಂಡಿರು ಎಂದು ಹೇಳುತ್ತಾಳೆ.

ಈ ನಡುವೆ ತನ್ನೂರಿನಲ್ಲಿಯೇ ಪಾರ್ಟಿಯೊಂದರಲ್ಲಿ ಯುವಕನೊಬ್ಬನ ಕರೆಗೆ ಸ್ಪಂದಿಸಿ ಅವನೊಂದಿಗೆ ಶರೀರ ಸುಖ ಅನುಭವಿಸಿದ್ದರ ಪ್ರತಿಫಲವೆಂದರೆ ಬಸುರಿಯಾಗುತ್ತಾಳೆ. ತಾನೇ ದಿಕ್ಕಿಲ್ಲದ ದೆಸೆಯಲ್ಲಿ ತನಗೊಂದು ಮಗುವು. ಈ ಅಂಶವೇ ಅವಳನ್ನು ಅಪಾರ ಸಂಕಟಕ್ಕೆ ದೂಡಿದರೂ ಗರ್ಭವಿಳಿಸಿಕೊಳ್ಳುವ ಧಾವಂತ ಕಾಣಿಸಿಕೊಂಡರೂ ಹಾಗೇ ಮಾಡುವುದಿಲ್ಲ. ಪ್ರಕೃತಿದತ್ತವಾದ ತಾಯ್ತನ ಅವಳನ್ನು ಕಟ್ಟಿ ಹಾಕುತ್ತದೆ. ತುಟಿ ಕಚ್ಚಿ ಹೆರಿಗೆ ಬೇನೆ ಅನುಭವಿಸುತ್ತಲೆ ಮಗುವಿಗೆ ಜನ್ಮ ನೀಡುತ್ತಾಳೆ. ಮಗುವಿನ ಮುಖದೊಂದಿಗೆ ಅವ್ಯಕ್ತ ಧೃತಿಯೊಂದು ಕಾಣಿಸಿಕೊಂಡು ಹೇಗಾದರೂ ಬದುಕಬಲ್ಲೆ ಎಂಬ ಛಲ ತಾನೇ ತಾನಾಗಿ ನಿಲ್ಲುತ್ತದೆ.

ಕಥಾವಸ್ತು ಇಷ್ಟೇಯಾದರೂ ಅದನ್ನು ದಿಗ್ದರ್ಶಿಸಿದ ರೀತಿ ಮಾತ್ರ ತುಂಬಾ ಗಂಭೀರವಾಗಿದೆ. ಚಿತ್ರ ಸುರುವಾಗುವುದೇ ಹೆಂಗಸೊಬ್ಬಳು ಮೂರರನೇ ಹೆರಿಗೆ ನೋವು ಅನುಭವಿಸುವ ದೃಶ್ಯದಿಂದ. ಹೆರಿಗೆಯ ಮಾರಣಾಂತಿಕ ನೋವು ಅನ್ನು ಅದೆಷ್ಟು ಪರಿಣಾಮಕಾರಿ ಚಿತ್ರಿಸಲಾಗಿದೆ ಎಂದರೆ ಅದನ್ನು ನೋಡಿದ ಮನಸ್ಸುಗಳಿಗೆ ಹೆಣ್ತನದ ಸಂಕಟಗಳು ಸಾಕ್ಷಾತ್ಕಾರವಾಗದೆ ಇರವು. ಪ್ರಕೃತಿಯು ಹೆಣ್ಣೆಂಬ ಜೀವಕ್ಕೆ ನೋಡಿದ ಬಸಿರು, ಹೆರಿಗೆ, ಬಾಣಂತಿತನವೆಂಬ ಅವಸ್ಥೆಗಳು ಅದೆಷ್ಟು ಸಂಕೀರ್ಣ ಮತ್ತು ಅವಳ ಜೀವಕ್ಕೆ ಕುತ್ತು ಎಂಬುದನ್ನು ನಿರ್ದೇಶಕಿ ಮನೋಜ್ಞವಾಗಿ ನಾಟಿಸುವ ಪ್ರಯತ್ನ ಮಾಡಿದ್ದಾರೆ. ಮುದ್ದುಬಸವ ಎಂಬ ಕವಿಯೊಬ್ಬ ತಾಯಿಯನ್ನು ಕುರಿತು ಬರೆದ ಪದವೊಂದರ "ಬಾಣಂತಿ ನಿನ್ನ ಜನ್ಮ ರಕ್ತ ನದಿಯು ಆಯಿತಮ್ಮ/ ನಾನು ಹುಟ್ಟುವಾಗ ನಿನ್ನ ಕಷ್ಟ ಎಷ್ಟು ತಾಯಮ್ಮ/ ಮತ್ತೆ ಹುಟ್ಟಿ ಬಂದೆಯಮ್ಮ// ಎಂಬ ಸಾಲುಗಳು ನೆನಪಿಗೆ ಬಂದವು.

ಈ ನಡುವೆ ಕಪ್ಪು ವೇಶ್ಯೆ ಬಡತನ ಕಾರಣವಾಗಿ ತನ್ನ ಮೈ ಮಾರಿಕೊಳ್ಳುವ ಸನ್ನಿವೇಶವಂತೂ ತೀರ ಸಂಕಟಮಯ ಎನಿಸುತ್ತದೆ. ಹೊಟ್ಟೆಪಾಡಿಗಾಗಿ ಹಸುಳೆಯನ್ನು ಬಿಟ್ಟು ದಂಧೆಗೆ ಹೋಗುತ್ತಾಳೆ. ವಿಟ ಪುರುಷ ಅವಳ ಮೊಲೆಯನ್ನು ನಿರುಕಿಸುತ್ತಾನೆ. ಹಸಿ ಬಾಣಂತಿ ಹಾಲು ಸುರಿಯುತ್ತಿವೆ. ಅದನ್ನು ನೋಡಿ ಮೊಲೆಯಲ್ಲಿ ಹಾಲಿದೆಯಲ್ಲವೆ ಎನ್ನುತ್ತಾಳೆ. ಅವಳು ದಯನೀಯವಾಗಿ ನೋಡುತ್ತಾಳೆ. ಒಸರಿದ ಹಾಲು ಒರೆಸಿಕೊಳ್ಳುವಷ್ಟರಲ್ಲಿ ಆತ ನಾನು ಹಾಲನ್ನು ಕುಡಿಯಲೆ? ಕೇಳುತ್ತಾಳೆ. ಥಟ್ಟನೆ ತಿರುಗಿ ಅಸಹಾಯಕವಾಗಿ ಆತನನ್ನು ನಿರುಕಿಸುವಾಗಲೇ ಆತ ಇನ್ನೊಂದು ದೊಡ್ಡ ನೋಟು ನೀಡಿ ಅವಳತ್ತ ಸರಿದು ಮೊಲೆಗೆ ಬಾಯಿ ಹಾಕುತ್ತಾನೆ. ಮರ್ಮಾಘಾತಕ್ಕೆ ಒಳಗಾದ ಅವಳು ಶೂನ್ಯದಲ್ಲಿ ದೃಷ್ಟಿ ನೆಡುತ್ತಲೆ ಇದ್ದಾಳೆ. ಕಣ್ಣೀರು ಸುರಿಯುತ್ತಲೆ ಇವೆ.

ಚಿತ್ರದುದ್ದಕ್ಕೂ ಮೂರು ಹೆರಿಗೆ ನೋವುಗಳು. ಒಂದು ಪ್ರಾರಂಭದಲ್ಲಿ ಹೆಂಗಸೊಬ್ಬಳ ಮೂರನೆ ಹೆರಿಗೆಯ ನೋವು. ಇನ್ನೊಂದು ಚಿತ್ರದ ಮಧ್ಯದಲ್ಲಿ ಪುಟ್ಟ ಹುಡುಗಿಯ ಗರ್ಭಪಾತದ ಅರಿಭಯಂಕರ ನೋವು. ಮೂರನೆಯದು ಸೂಲಗಿತ್ತಿಯ ಬೇಡವೆಂದರೂ ಬೇಕಾದ ಕೊನೆಯಲ್ಲಿ ಕಾಣಿಸಿಕೊಳ್ಳುವ ಅನಾಮಿಕ ಗರ್ಭದ ನೋವು. ದೇಶ ಯಾವುದೇ ಇರಬಹುದು ಸ್ತ್ರೀಯರ ಬದುಕಿನ ಸಂಕಟಗಳಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ. ಸಂಭೋಗ ಎನ್ನುವುದು ಗಂಡು ಹೆಣ್ಣಿಬ್ಬರಿಗೂ ಅಪೇಕ್ಷಣಿಯವೇ. ಆದರೆ ಅದು ಗಂಡಸಿಗೆ ಯಾವತ್ತೂ ಮಧುರಾನುಭವವಾಗಿಯೇ ಉಳಿಯುವುದಾದರೂ ಸ್ತ್ರೀಯರಿಗೆ ಹಾಗಲ್ಲ. ಅದು ಎಂತಿದ್ದರೂ ಯಾತನಾಮಯವೇ. ಸಮಾಜ ನಿರ್ಬಂಧಿತ ಚೌಕಟ್ಟಿನಲ್ಲಿ ಬಸುರಿಯಾದರೆ ಹೆರಿಗೆ ಯಾತನಾಮಯವಾದರೂ ಸಹ್ಯ. ಇದರಾಚೆ ಬಸುರಿಯಾದರೆ ಅವಳಿಗೆ ಅದು ಅಸಹ್ಯ ಅಷ್ಟೇ ಅಲ್ಲ ಭಯಂಕರ ತಾಪ. ಪ್ರತಿ ಹೆರಿಗೆಯಲ್ಲಿಯೂ ಮಹಿಳೆಯರು ಸಾವಿನ ಮನೆ ತಟ್ಟಿ ಬರುತ್ತಾರೆ.

ಒಟ್ಟಾರೆ ಚಿತ್ರ ಸ್ತ್ರೀವಾದಿ ಚಿಂತನೆಯನ್ನು ದೃಶ್ಯವಾಗಿಸಿ ಮನೋಜ್ಞವಾಗಿ ತಲುಪಿಸುತ್ತದೆ. ಮಾರಿಯಾಳಾಗಿ ನಟಿಸಿದ ಜೆನೆಟ್ ನೋವಾಸ್ ಪಾತ್ರವೇ ತಾನಾಗಿ ಬಿಟ್ಟರೆ ಹುಡುಗಿಯ ಪಾತ್ರಧಾರಿಯಂತೂ ವಯಸ್ಸಿಗೆ ಮೀರಿ ನಟಿಸಿದ್ದಾಳೆ. ಕಪ್ಪು ಮಹಿಳೆಯ ಪಾತ್ರದಲ್ಲಿ ಮಾತಿಲ್ಲದೆ ಕಣ್ಣುಗಳಿಂದಲೆ ಎಲ್ಲವನ್ನು ದಾಟಿಸುವ ಪರಿ ಬೆರಗು ಮೂಡಿಸುತ್ತದೆ. ಈಗಾಗಲೇ ಇದು ಸ್ಯಾನ್ ಸೆಬಾಸ್ಟಿಯನ್ ಇಂಟರ್ ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ನಲ್ಲಿ ಉತ್ತಮ ಚಿತ್ರ ಪ್ರಶಸ್ತಿ ಪಡೆದುಕೊಂಡಿದೆ. ಜೆನೆಟ್ ನೋವಾಸ್ ಅತ್ಯುತ್ತಮ ನಟಿಯಾಗಿ ಗೋಯಾ ಪ್ರಶಸ್ತಿ ಪಡೆದುಕೊಂಡಿದ್ದಾಳೆ. ಬುಷೆನ್ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರೇಕ್ಷಕರ ಪ್ರಶಸ್ತಿ ಗಿಟ್ಟಿಸಿಕೊಂಡಿದೆ. ಕ್ಯಾಮಿಲೋ ಸನ್‌ಬ್ರಿಯಾರ ಮಂದ ಸಂಗೀತ ಅಲ್ಲಿನ ನೋವನ್ನು ತಣ್ಣನೆ ನಾಟಿಸುವಲ್ಲಿ ಯಶಸ್ವಿಯಾಗಿದೆ. ನಿರ್ದೇಶಕಿ ಜೈಓನಿ ಕಂಬೋರ್ಡಾ ಸ್ತ್ರೀವಾದಿ ಕಣ್ಣೋಟಕ್ಕೊಂದು ಉತ್ತಮ ಪ್ರಯೋಗ ನೀಡಿದ್ದು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**